ಜನಶಕ್ತಿ



ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com
ಸಂಪುಟ 6 ಸಂಚಿಕೆ 45
ನವೆಂಬರ್ 04, 2012
ಪುಟ 16 ರೂ. 5/-



ಭ್ರಷ್ಟಾಚಾರದ ರಾವಣನ ಸಂಹಾರ ಇನ್ನೂ ಆಗಿಲ್ಲ



ಮಹಿಳೆಯ ಬಾಳಿನ ಗೋಳಿಗೆ ಕೊನೆ ಇಲ್ಲವೇ ?

ರಾಜ್ಯ ಒಡೆಯುವ ಹುನ್ನಾರ ಸಹಿಸಲಾಗದು



ವಸತಿ ಸಮಸ್ಯೆ ಬಗೆಹರಿಸಿ



ಭೂಮಿ ಪ್ರಶ್ನೆ ಇಂದಿಗೂ ಪ್ರಸ್ತುತ

ದಸರಾ ಕೇಸರೀಕರಣ : ಮೈಸೂರಿನಲ್ಲಿ ಪ್ರತಿಭಟನೆ

ವಿಶ್ವ ವಿಖ್ಯಾತ ಮೈಸೂರು ದಸರಾ ಒಂದು ವಿಶೇಷ ಪರಂಪರೆಯ ಸಾಂಸ್ಕೃತಿಕ ಉತ್ಸವ. ವಿವಿಧ ಜಾನಪದ, ಸಾಂಸ್ಕೃತಿಕ ಕಲೆಗಳನ್ನು ಆವಿರ್ಭವಿಸಿಕೊಂಡು ಜಾತಿ, ಧರ್ಮದ ಭೇದವಿಲ್ಲದೆ ಎಲ್ಲರೂ ಆಚರಿಸುವ ವೈವಿಧ್ಯಮಯ ಹಬ್ಬ. ಆದ್ದರಿಂದಲೇ ಇದನ್ನು ನಾಡಹಬ್ಬವಾಗಿ ಘೋಷಿಸಿ ಆಚರಿಸಿಕೊಂಡು ಬರಲಾಗುತ್ತಿದೆ.

ವರದಿ : ಎಲ್.ಜಗದೀಶ್ ಸೂರ್ಯ

ಸಾಂಸ್ಕೃತಿಕ ಹಬ್ಬವಾಗಿದ್ದ ಮೈಸೂರು ದಸರಾವು ಬಿ.ಜೆ.ಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕೇಸರೀಕರಣಗೊಳ್ಳುತ್ತಾ ಒಂದೇ ಧರ್ಮಕ್ಕೆ ಸೀಮಿತವಾಗುತ್ತಿದೆ. ಮೈಸೂರು ದಸರಾ ಅಂದರೆ ಜಾನಪದ ಸಾಂಸ್ಕೃತಿಕ ಕಾರ್ಯಕ್ರಮಗಳೇ ಪ್ರಧಾನ. ನಾಡಿನ ವಿವಿಧ ಜಾನಪದ ಕಲೆಗಳು ದಸರಾದಲ್ಲಿ ತೆರೆದುಕೊಳ್ಳುತ್ತವೆ. ಖ್ಯಾತ ಗಾಯಕರು ಅಲ್ಲಿ ವೇದಿಕೆ ಹಂಚಿಕೊಳ್ಳುತ್ತಾರೆ. ಯಾವುದೇ ಧರ್ಮದ ಭೇದವಿಲ್ಲದೆ ಎಲ್ಲಾ ಕಲಾವಿದರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಾರೆ. ಕುಸ್ತಿ, ಕ್ರೀಡೆಗಳು ದಸರಾದ ಮೆರುಗನ್ನು ಮತ್ತಷ್ಟು ಹೆಚ್ಚಿಸುತ್ತವೆ. ಆದರೆ ಈ ಎಲ್ಲಾ ಕಾರ್ಯಕ್ರಮಗಳು ಈಗ ಕೇಸರೀಕರಣಗೊಳ್ಳುತ್ತಿವೆ.

ಮೊನ್ನೆ ತಾನೆ ಮುಗಿದ 402 ನೇ ಮೈಸೂರು ದಸರಾ ಸಂಪೂರ್ಣ ಕೇಸರೀಕರಣವಾಗಿ ಬಿಟ್ಟಿತು. ಧಾರ್ಮಿಕ ದಸರಾದ ಹೆಸರಿನಲ್ಲಿ ಜಿಲ್ಲೆಯ 1,724 ದೇವಸ್ಥಾನಗಳಲ್ಲಿ 9 ದಿನವೂ ವಿಶೇಷ ಪೂಜೆ ಮಾಡಿಸಲಾಗಿದೆ. ಭಜನೆ ದಸರಾದ ಹೆಸರಿನಲ್ಲಿ ಸಾವಿರಾರು ಜನರಿಂದ ನಿತ್ಯವೂ ಭಜನೆ ಮಾಡಿಸಲಾಗಿದೆ. ಸ್ವತಃ ಜಿಲ್ಲಾ ಉಸ್ತುವಾರಿ ಸಚಿವ ರಾಮದಾಸ್ ಹಾಗೂ ಅವರ ತಾಯಿ ಭಜನೆ ಹಾಡುವ ಮೂಲಕ ಭಜನೆ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಹಾಗೆಯೇ ಯೋಗಕ್ಕೆ ಹೆಚ್ಚಿನ ಒತ್ತುಕೊಟ್ಟು ಮಕ್ಕಳಿಗೆ, ಪೌರ ಕಾರ್ಮಿಕರಿಗೆ, ಅಧಿಕಾರಿಗಳಿಗೆ ಯೋಗ ಮಾಡಿಸಿದ್ದಲ್ಲದೆ, ಯೋಗ ದಸರಾದ ಹೆಸರಿನಲ್ಲಿ ಸಾಮೂಹಿಕ ಸೂರ್ಯ ನಮಸ್ಕಾರ, ಯೋಗಗಳನ್ನು ಅರಮನೆ ಆವರಣದಲ್ಲಿ ನಡೆಸಲಾಗಿದೆ. ಸೂರ್ಯನಿಂದ ಚಂದ್ರನೆಡೆಗೆ ಎಂಬ ಕಾರ್ಯಕ್ರಮದಲ್ಲಿ 12 ಗಂಟೆಗಳ ಕಾಲ ಭಜನೆ ಪ್ರವಚನ, ದೇವರ ನಾಮಗಳನ್ನು ಹಾಡಿಸಲಾಗಿದೆ.



ಇನ್ನು ದಸರಾದ ಕಾರ್ಯಕ್ರಮಗಳು ನಡೆಯುವ ಜಾಗಗಳು ಕೇಸರಿ ಬಾವುಟಗಳನ್ನು ಹಾಕಲಾಗಿತ್ತು. ಕುಸ್ತಿ ಅಖಾಡದಲ್ಲಿ ಇಷ್ಟು ದಿನ ಹಳದಿ ರುಮಾಲು ಬಳಸುತ್ತಿದ್ದರು. ಈಗ ಅದು ಕೇಸರೀ ಬಣ್ಣದ ರುಮಾಲು ಆಗಿತ್ತು. ಹಾಗೂ ಕುಸ್ತಿ ಪಂದ್ಯಾವಳಿಯ ಕೊನೆಯ ಕಾರ್ಯಕ್ರಮವನ್ನು ಆರ್‌ಎಸ್‌ಎಸ್ ನ ದಕ್ಷಿಣ ಪ್ರಾಂತ ಸರಸಂಘ ಚಾಲಕ ಮಾ. ವೆಂಕಟರಾಮ್‌ನಿಂದ ಮಟ್ಟಿಗೆ ಪೂಜೆ ಮಾಡಿಸುವ ಮೂಲಕ ಉದ್ಘಾಟಿಸಲಾಯಿತು. ಹಾಗೆಯೇ ಬಹುತೇಕ ಕಾರ್ಯಕ್ರಮಗಳನ್ನು ಆರ್‌ಎಸ್‌ಎಸ್‌ನ ಮುಖ್ಯಸ್ಥರಿಂದ ಉದ್ಘಾಟಿಸಲಾಗಿದೆ. ಪ್ರವಾಸಿಗರಿಗೆ ಸ್ವಾಗತ ಕೋರಲು ಚಾಮುಂಡಿ ಬೆಟ್ಟದಲ್ಲಿ ಕೆಪಿಟಿಸಿಎಲ್‌ನ ದೀಪಗಳಿಂದ ಸ್ವಾಗತ ಕೋರುವ ಸ್ಥಳದಲ್ಲಿ 'ಓಂ' ಮತ್ತು ತ್ರಿಶೂಲ ಚಿಹ್ನೆಯನ್ನು ಬಳಸಲಾಗಿದೆ. ಹೀಗೆ ನಾಡಹಬ್ಬ ದಸರಾವನ್ನು ಕೇಸರೀಕರಣ ಮಾಡಲಾಗಿತ್ತು. ಜಾತಿ, ಧರ್ಮಗಳ ಎಲ್ಲೆಗಳನ್ನು ಮೀರಿ ಜನಸಾಮಾನ್ಯರ ಶ್ರಮದ ಸಂಭ್ರಮದ ಹಬ್ಬವಾಗಬೇಕಿದ್ದ ದಸರಾ ಇಂದು ಆಳುವ ಪಕ್ಷದ ಕೋಮುವಾದದ ತೆವಲಿಗೆ ಬಲಿಯಾಗಿರುವುದು ದುರಂತವಾಗಿದೆ. ಬಿಜೆಪಿ ಸರ್ಕಾರವು ಆಡಳಿತ ನಿರ್ವಹಿಸುತ್ತಿರುವ ದಿನದಿಂದಲೂ ಸಂವಿಧಾನದ ಜಾತ್ಯಾತೀತ ಮೌಲ್ಯಗಳನ್ನು ಧಿಕ್ಕರಿಸುವಂತೆ ಪ್ರಭುತ್ವದ ಕಾರ್ಯಕ್ರಮಗಳಲ್ಲಿ ಕೇಸರೀಕರಣವನ್ನು ವ್ಯವಸ್ಥಿತವಾಗಿ ಸಂಘ ಪರಿವಾರದ ನಿರ್ದೇಶನದಂತೆ ಮಾಡುತ್ತಾ ಬಂದಿದೆ. ಬಿಜೆಪಿ ಸರ್ಕಾರದ ದಸರಾ ಆಚರಣೆಯ ಪರಿಕಲ್ಪನೆ ತೀರಾ ವಿಭಿನ್ನವಾಗಿದ್ದು, ನಾಡು, ನುಡಿ, ನಾಡಹಬ್ಬ, ನಾಡ ಜನ ಇವರು ಯಾರು ಇಲ್ಲದ ಪುಡಿ ಪುಢಾರಿಗಳ ಸ್ವಪ್ರತಿಷ್ಠೆಯ ಸ್ವಹಿತಾಸಕ್ತಿಯ, ಸ್ವಯಂ ಸಂಭ್ರಮ, ಸ್ವಯಂ ವೈಭವೀಕರಣಗಳ ಆಚರಣೆಯಾಗಿದೆ.

ಇದನ್ನು ಖಂಡಿಸಿ ಸಿಪಿಐ(ಎಂ)ನ ಮುತುವರ್ಜಿಯಲ್ಲಿ ಸಿಪಿಐ, ಸಮಾಜವಾದಿ ಪಕ್ಷ, ದಲಿತ ಸಂಘಟನೆ ಹಾಗೂ ಪ್ರಗತಿಪರರನ್ನು ಒಳಗೊಂಡು 'ದಸರಾ ಕೇಸರೀಕರಣ ವಿರೋಧಿ ಸಮಿತಿ'ಯನ್ನು ರಚಿಸಲಾಯಿತು. ದಿ.21–10–2012ರಂದು ಈ ಸಮಿತಿ ವತಿಯಿಂದ ದಸರಾ ಕೇಸರೀಕರಣ ವಿರೋಧಿಸಿ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಬಸವರಾಜು, ಇತಿಹಾಸಕಾರರಾದ ಪ್ರೊ. ನಂಜರಾಜೇ ಅರಸ್, ಪ್ರಗತಿಪರ ಒಕ್ಕೂಟದ ಪ. ಮಲ್ಲೇಶ್, ಸಮಾಜವಾದಿ ಪಕ್ಷದ ರಾಜ್ಯಾಧ್ಯಕ್ಷ ಕರುಣಾಕರ್, ಸಿಪಿಐ ಪಕ್ಷದ ಜಗನ್ನಾಥ್, ಡಿಎಸ್‌ಎಸ್‌ನ ಆಲಗೂಡು ಶಿವಕುಮಾರ್ ಮಾತನಾಡಿ ದಸರಾ ಕೇಸರೀಕರಣವನ್ನು ಬಲವಾಗಿ ಖಂಡಿಸಿ ಸಾಂಸ್ಕೃತಿಕ ಹಾಗೂ ಜಾತ್ಯಾತೀತ ದಸರಾ ಆಚರಣೆಗೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಿಪಿಐ(ಎಂ)ನ ಜಗನ್ನಾಥ್, ಜಯರಾಂ, ಬಲರಾಂ, ಬಾಲಾಜಿ, ಜಗದೀಶ್ ಸೂರ್ಯ, ಪುಟ್ಟಣ್ಣ, ಸಿಪಿಐ ನಿಂದ ರಾಜು ಮುಂತಾದವರು ಭಾಗವಹಿಸಿದ್ದರು.

ಸಿಪಿಎಂ ಪಕ್ಷದ ಕಾರ್ಯಕರ್ತ ಕಾಂ॥ ರಮೇಶ್ ಮೆಂಡನ್‌ರವರಿಗೆ ಶ್ರದ್ಧಾಂಜಲಿ ಸಭೆ

ಉಡುಪಿ ಜಿಲ್ಲಾ ಬೀಡಿ ಫೆಡೆರೇಶನ್ ನ ಜಿಲ್ಲಾ ಕಾರ್ಯದರ್ಶಿ, ಸಿಐಟಿಯು ಉಡುಪಿ ಜಿಲ್ಲಾ ಜತೆ ಕಾರ್ಯದರ್ಶಿ, ಸಿಪಿಎಂ ಪಕ್ಷದ ಕಾರ್ಯಕರ್ತ ಕಾಂ. ರಮೇಶ್ ಮೆಂಡನ್‌ರವರು ತಮ್ಮ ಅಲ್ಪಕಾಲದ ಅನಾರೋಗ್ಯದಿಂದ ಮಣಿಪಾಲದ ಕೆ.ಎಂಸಿ ಆಸ್ಪತ್ರೆಯಲ್ಲಿ 09.10.2012 ರಂದು ನಿಧನ ಹೊಂದಿದ್ದರು. ಉಡುಪಿಯ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿನ ಬೀಡಿ ಕಾರ್ಮಿಕರನ್ನು ಸಂಘಟಿಸಿ, ಕಾರ್ಮಿಕರ ಕನಿಷ್ಟ ಕೆಲಸದ ದಿನ, ಬೋನಸ್ ಮತ್ತು ತುಟ್ಟಿ ಭತ್ಯೆ ಮುಂತಾದ ವಿಚಾರಗಳಲ್ಲಿ ಹೋರಾಟ ರೂಪಿಸಿದ್ದ ರಮೇಶ್ ಮೆಂಡನ್‌ರವರು ಜನಾನುರಾಗಿಯಾಗಿದ್ದರು.



ಕೆ. ಶಂಕರ್ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡುತ್ತಿರುವುದು.

ಉಡುಪಿಯಲ್ಲಿ ಅಕ್ಟೋಬರ್ 25 ರಂದು ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಸಿ.ಪಿ.ಎಂ ಪಕ್ಷದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ. ಕೆ.ಶಂಕರ್ "ಸುಮಾರು 30 ವರ್ಷ ಪಕ್ಷದ ಕಾರ್ಯಕರ್ತನಾಗಿ ಕಾರ್ಮಿಕರ ಪರವಾಗಿ ದುಡಿದ ರಮೇಶ್ ಮೆಂಡನ್‌ರಿಗೆ ನಿಜವಾದ ಶ್ರದ್ಧಾಂಜಲಿ ಅರ್ಪಿಸುವುದೆಂದರೆ ಅವರು ನಂಬಿದ ತತ್ವಗಳಂತೆ ಕಾರ್ಮಿಕರನ್ನು, ಬಡ ಜನರರನ್ನು ಸಂಘಟಿಸಿ ಅವರ ಸಮಸ್ಯೆಗಳನ್ನು ಪರಿಹರಿಸುವುದು" ಎಂದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಿ.ಪಿ.ಎಂ ಪಕ್ಷದ ಉಡುಪಿ ತಾಲೂಕು ಪ್ರಧಾನ ಕಾರ್ಯದರ್ಶಿ ಕಾಂ.ಪಿ. ವಿಶ್ವನಾಥ ರೈಯವರು "ರಮೇಶ್ ಮೆಂಡನ್ ಪ್ರೆಸ್ ಕಾರ್ಮಿಕನಾಗಿ ದುಡಿಮೆ ಆರಂಭಿಸಿ ನಂತರ ಪಕ್ಷದ ಪೂರ್ಣ ಕಾಲಾವಧಿ ಸದಸ್ಯನಾಗಿ ತನ್ನ ಸ್ವಂತ ಹಿತಾಸಕ್ತಿಗಳನ್ನು ಬದಿಗೊತ್ತಿ ಕುಟುಂಬದಲ್ಲಿ ಸರಳ ಜೀವನವನ್ನು ಅಳವಡಿಸಿ ಕಾರ್ಮಿಕರ ಪರವಾಗಿ ದುಡಿದಿದ್ದಾರೆ" ಎಂದು ಸ್ಮರಿಸಿದರು.

ರಮೇಶ್ ಮೆಂಡನ್‌ರ ಅಣ್ಣ ಶ್ರೀ ಸೋಮಪ್ಪ ಮೆಂಡನ್ "ಆಸ್ಪತ್ರೆಯಲ್ಲಿರುವಾಗ ಕೂಡಾ ಜನರಿಂದ ಸಮಸ್ಯೆ ಪರಿಹಾರಕ್ಕೆ ಫೋನ್ ಬಂದಾಗ ಅದಕ್ಕೆ ಸ್ಪಂದಿಸುತ್ತಿದ್ದರು" ಎಂದು ಸ್ಮರಿಸಿದರು. ಪಕ್ಷದ ತಾಲೂಕು ಸಮಿತಿ ಸದಸ್ಯ ಕಾಂ. ವಿಠಲ ಪೂಜಾರಿಯವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ನಿವೇಶನ ಮತ್ತು ಭೂಮಿ ಚಳುವಳಿ – ಜೈಲ್‌ಭರೋ ನವೆಂಬರ್ 5ಕ್ಕೆ

ಮನೆ ನಿವೇಶನ ಮತ್ತು ಭೂಮಿಗಾಗಿ ಜೈಲ್‌ಭರೋ ಚಳುವಳಿ ನವೆಂಬರ್ 5 ಕ್ಕೆ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಗಳ ನೇತೃತ್ವದಲ್ಲಿ ನಡೆಯಲಿದೆ. ಯಶಸ್ವಿಗೊಳಿಸಿ.

ಸಂಪಾದಕೀಯ


ವಸತಿ ಸಮಸ್ಯೆ ಬಗೆಹರಿಸಿ

"ರಾಜ್ಯದಲ್ಲಿ ನಿವೇಶನ ರಹಿತ ಬಗ್ಗೆ ಸಮೀಕ್ಷೆ ನಡೆಸಲಾಗಿದೆ. ಒಟ್ಟು 16 ಲಕ್ಷ ಜನ ನಿವೇಶನ ರಹಿತರಿದ್ದಾರೆ. ಸುಮಾರು 14 ಲಕ್ಷ ಕುಟುಂಬಗಳಿಗೆ ಸ್ವಂತ ಮನೆಗಳಿಲ್ಲ. ಇವರಲ್ಲಿ 8 ಲಕ್ಷಕ್ಕೂ ಹೆಚ್ಚು ಬೆಂಗಳೂರು ಸುತ್ತಮುತ್ತಲೇ ಇದ್ದಾರೆ, ಈಗಾಗಲೇ ಎರಡು ಲಕ್ಷ ನಿವೇಶನಗಳಿಗೆ ಅರ್ಜಿಗಳು ಬಂದಿವೆ, ಎಂದು ವಸತಿ ಖಾತೆ ಸಚಿವ ವಿ.ಸೋಮಣ್ಣ ಅವರು ಅಧಿಕೃತ ಹೇಳಿಕೆ ನೀಡಿ ಈಗಾಗಲೇ 7 ತಿಂಗಳುಗಳಾಗಿವೆ. ಪ್ರಸ್ತಕ ಸಾಲಿನಲ್ಲಿ ಒಟ್ಟು ಮೂರು ಲಕ್ಷ ಮನೆಗಳನ್ನು ನಿರ್ಮಿಸುವ ಗುರಿ ಹಾಕಿಕೊಳ್ಳಲಾಗಿದೆ ಎಂದು 80 ಸಾವಿರ ಮನೆಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಅವರು ಹೇಳಿದರು. ಆದರೆ ರಾಜ್ಯ ವಸತಿರಹಿತರ ಮತ್ತು ನಿವೇಶನರಹಿತ ಸಮಸ್ಯೆ ಸಧ್ಯದಲ್ಲಿ ಇತ್ಯರ್ಥವಾಗುವ ಲಕ್ಷಣಗಳು ಕಾಣುತ್ತಿಲ್ಲ. ಜನರ ವಸತಿ ಬೇಡಿಕೆಯನ್ನು ಈಡೇರಿಸಲು ಬೆಂಗಳೂರಿನ ಬಿಡಿಎ ಮತ್ತು ಇನ್ನುಳಿದ ನಗರಗಳ ನಗರಾಭಿವೃದ್ಧಿ ಪ್ರಾಧಿಕಾರಗಳು ಸಂಪೂರ್ಣ ವಿಫಲಗೊಂಡಿವೆ. ಸಣ್ಣಪುಟ್ಟ ನಗರಗಳಲ್ಲಿಯೂ ನಿವೇಶನ ಪಡೆಯುವುದು ಮರೀಚಿಕೆಯಾಗಿದೆ, ಬೆಂಗಳೂರಿನಲ್ಲಿ ಕಳೆದ ಆರೇಳು ವರ್ಷಗಳಿಂದ ಬಿಡಿಎ ಜನಸಾಮಾನ್ಯರಿಗೆ ಒಂದು ನಿವೇಶನವನ್ನೂ ಹಂಚಿಲ್ಲ, ಈ ನಡುವೆ ಬೆಂಗಳೂರಿನ ಹೊರಗೆ ಮತ್ತು ಒಳಗೆ ಸಾವಿರಾರು ಅಪಾರ್ಟ್‌ಮೆಂಟ್‌ಗಳು ಮತ್ತು ಖಾಸಗಿ ಬಡಾವಣೆಗಳು ತಲೆ ಎತ್ತುತ್ತಿವೆ, ಹಲವಾರು ಸಲ ಅವು ಅಕ್ರಮ ಬಡಾವಣೆಗಳೇ ಆಗಿರುತ್ತವೆ. ಜನರು ಅನಿವಾರ್ಯವಾಗಿ ಅಧಿಕ ಹಣ ತೆತ್ತು ಅವುಗಳನ್ನು ಖರೀದಿಸುತ್ತಾರೆ ಮತ್ತು ಅನೇಕ ಸಲ ಮೋಸಕ್ಕೆ ಒಳಗಾಗುತ್ತಾರೆ. ಬಿಡಿಎ ಜನರ ಅವಶ್ಯಕತೆಗೆ ತಕ್ಕಂತೆ ಕಾಲಕಾಲಕ್ಕೆ ಹೊಸ ಹೊಸ ಬಡಾವಣೆಗಳನ್ನು ನಿರ್ಮಿಸಿ ನಿವೇಶನಗಳನ್ನು ಹಂಚಿದ್ದರೆ ಜನರು ಖಾಸಗಿ ಬಡಾವಣೆಗಳತ್ತ ಹೋಗುವ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ. ಗ್ರಾಮೀಣ ಕರ್ನಾಟಕದಲ್ಲಿಯೂ ವಸತಿರಹಿತರ ಮತ್ತು ನಿವೇಶನರಹಿತರ ಪ್ರಶ್ನೆ ಗಂಭೀರವಾಗುತ್ತಿದೆ. ಕೇಂದ್ರ ಹಾಗು ರಾಜ್ಯ ಸರ್ಕಾರ ಪ್ರಾಯೋಜಿತ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ಮನೆಗಳನ್ನು, ನಿವೇಶನಗಳನ್ನು ವಿತರಿಸುವಾಗ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಬಿಜೆಪಿ ಸರ್ಕಾರದ ಅವಧಿಯಲ್ಲಿ ಅತೀ ಹೆಚ್ಚಾಗಿದೆ. ಹೀಗಾಗಿ ಧ್ವನಿ ಇಲ್ಲದ ಬಡವರಿಗೆ ಯಾವ ಯೋಜನೆಗಳ ಅಡಿಯಲ್ಲಿಯೂ ಮನೆಗಳ ನಿವೇಶನಗಳು ದೊರಕುತ್ತಿಲ್ಲ, ಸ್ವಂತ ಮನೆ ಇದ್ದವರಿಗೆ ಮತ್ತೆ ಮನೆಗಳನ್ನು ವಿತರಿಸುವುದರಿಂದ ಆ ಮನೆಗಳನ್ನು ಅವರು ನಿಜವಾಗಿ ಮನೆ ಇಲ್ಲದವರಿಗೆ ಬಾಡಿಗೆಗೆ ಕೊಟ್ಟು ದುಡ್ಡು ಮಾಡುತ್ತಾರೆ. ಅಕ್ರಮ ದಾಖಲೆಗಳನ್ನು ಸಲ್ಲಿಸಿ ಮನೆ ನಿವೇಶನ ಪಡೆದಿರುವವರನ್ನು ಮತ್ತು ವಿತರಣೆಯಾದ ಆಶ್ರಯ ಮನೆಗಳನ್ನು ಬೇರೆಯವರಿಗೆ ಬಾಡಿಗೆಗೆ ನೀಡಿರುವವರನ್ನು ಪತ್ತೆಹಚ್ಚಿ ಅವರ ವಿರುದ್ಧ ಕಾನೂನು ಕ್ರಮ ಜರಗಿಸಬೇಕಾಗಿದೆ. ಅಂತಹ ಮನೆಗಳಲ್ಲಿ ಬಾಡಿಗೆಗೆ ವಾಸ ಇರುವ ಅರ್ಹರನ್ನು ಗುರುತಿಸಿ ಅವರಿಗೆ ಆ ಮನೆಗಳನ್ನು ಮಂಜೂರು ಮಾಡಬೇಕಾಗಿದೆ. ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಸರ್ಕಾರಿ ಭೂಮಿ ಲಭ್ಯ ಇಲ್ಲದ ಕಾರಣ ನಿವೇಶನರಹಿತ ಬಡವರಿಗೆ ನಿವೇಶನಗಳನ್ನು ವಿತರಿಸುವುದು ದೊಡ್ಡ ಸಮಸ್ಯೆಯಾಗಿದೆ. ಕೆಲವು ಗ್ರಾಮಗಳಲ್ಲಿ ಲಭ್ಯವಿದ್ದ ಸರ್ಕಾರಿ ಭೂಮಿಯನ್ನು ಶ್ರೀಮಂತರು ಕಬಳಿಸಿದ್ದಾರೆ. ಅದನ್ನು ಸ್ವಾಧೀನ ಪಡೆಸಿಕೊಳ್ಳುವ ಗ್ರಾಮ ಪಂಚಾಯಿತಿಗಳಿಗೆ ಶಕ್ತಿ ಸಾಲದಾಗಿದೆ ಸರ್ಕಾರ ಈ ವಿಷಯದಲ್ಲಿ ರಾಜಕೀಯ ಮಾಡದೆ ಕಬಳಿಸುವ ಸರ್ಕಾರಿ ಭೂಮಿಯನ್ನು ನಿದಾಕ್ಷಿಣ್ಯವಾಗಿ ವಶಪಡಿಸಿಕೊಂಡು, ನಿವೇಶನಗಳನ್ನಾಗಿ ಪರಿವರ್ತಿಸಿ ಬಡವರಿಗೆ ವಿತರಣೆ ಮಾಡಬೇಕು. ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಕಳೆದ ಹತ್ತಿಪ್ಪತ್ತು ವರ್ಷಗಳಿಂದ ವರ್ಷಗಳಿಂದ ಸರ್ಕಾರಿ ಜಾಗಗಳಲ್ಲಿ ಮನೆಗಳನ್ನು/ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುತ್ತಿರುವ ಲಕ್ಷಾಂತರ ಬಡಕುಟುಂಬಗಳಿವೆ. ಸರ್ಕಾರದ ನಿರ್ಲಕ್ಷ ನಿಷ್ಕಾಳಜಿಯಿಂದಾಗಿ ಈ ಬಡವರಿಗೆ ಸ್ವಂತ ಸೂರೊಂದನ್ನು ಪಡೆಯಲು ಸಾಧ್ಯವಾಗಿಲ್ಲ. ಸರ್ಕಾರದ ಈ ಬೇಜವಾಬ್ದಾರಿತನದಿಂದಾಗಿ, ಬಡವರು ವಾಸ ಇರುವ ಸರ್ಕಾರಿ ಭೂಮಿಯ ಮೇಲೆ ಭೂ ಕಬಳಿಕೆದಾರರು ಕಣ್ಣು ಹಾಕಿದ್ದಾರೆ. ಅಧಿಕಾರಿಗಳೊಂದಿಗೆ ಶಾಮೀಲಾಗಿ, ಸುಳ್ಳು ದಾಖಲೆಗಳನ್ನು ಸೃಷ್ಟಿಮಾಡಿ, ನ್ಯಾಯಾಲಯಗಳ ದಾರಿತಪ್ಪಿಸಿ ಅಂತಹ ಸರ್ಕಾರಿ ಭೂಮಿಯ ತಮ್ಮ ಒಡೆತನವನ್ನು ಸ್ಥಾಪಿಸಿ ಅಂತಹ ಸರ್ಕಾರಿ ಭೂಮಿಯ ತಮ್ಮ ಗಂಗಾವತಿ ತಾಲೂಕಿನಲ್ಲಿ ಇಂತಹ ಅನೇಕ ಪ್ರಕರಣಗಳಿವೆ.

ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೆ ನಡೆಸಲಾದ ಸಮರಶೀಲ ಚಳುವಳಿಯ ಪರಿಣಾಮವಾಗಿ ಸ್ವಲ್ಪ ಮಟ್ಟಿನ ಭೂಸುಧಾರಣೆಗಳು ಜಾರಿಗೆ ಬಂದು ಉಳುವವನಿಗೆ ಭೂಮಿ ಸಿಗುವಂತಾಗಿದೆ. ಅದರಂತೆಯೇ ಸಾವಿರಾರು ಕುಟುಂಬಗಳಿಗೆ 5 ಸೆಂಟ್ಸ್‌ನಷ್ಟು ಜಾಗ ಸಿಕ್ಕಿದೆ. ಆದರೆ; ಅವರಲ್ಲಿ ಕೆಲವರಿಗೆ ಮಾತ್ರ ಹಕ್ಕುಪತ್ರಗಳು ಸಿಕ್ಕಿದ್ದು ಉಳಿದವರೆಲ್ಲರು ಇಷ್ಟು ವರ್ಷಗಳಿಂದ ಅತಂತ್ರ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಆ 5 ಸೆಂಟ್ಸ್ ನಿವೇಶನಕ್ಕೆ ಸಂಬಂಧಪಟ್ಟು ಅವರಿಗೆ ಹಕ್ಕುಪತ್ರ ವಿತರಣೆ ಆಗದಿರುವುದರಿಂದ ಸರ್ಕಾರದ ಬೇರೆ ಯಾವುದೇ ಯೋಜನೆಯ ಲಾಭ ಪಡೆಯಲು ಅವರಿಗೆ ಸಾಧ್ಯವಾಗುತ್ತಿಲ್ಲ. ಉತ್ತರ ಕನ್ನಡ, ಶಿವಮೊಗ್ಗ, ಕೊಡಗು ಮೊದಲಾದ

ಪುಟ 11 ಕ್ಕೆ

ರಾಜ್ಯ ಒಡೆಯುವ ಹುನ್ನಾರ ಸಹಿಸಲಾಗದು



ಬೆಳಗಾವಿಯಲ್ಲಿ ಸುವರ್ಣಸೌಧ ಉಧ್ಘಾಟಿಸಿ 'ಈ ಭಾಗದ ಜನರ ಭಾಗ್ಯದ ಬಾಗಿಲು ತೆರೆಯಲಿದೆ' ಎಂದು ಮುಖ್ಯಮಂತ್ರಿಗಳು ಹೇಳಿ ಹೋದ ಬಳಿಕ ಅದು ಮುಗಿದ ಒಂದು ಸಮಾರಂಭ ವೆಂದೇ ಜನ ಭಾವಿಸಿದ್ದಾರೆ. ಗುಲ್ಬರ್ಗಾದಲ್ಲಿ ಸಚಿವ ಸಂಪುಟದ ಸಭೆ ನಡೆದು ಪುಂಖಾನು ಪುಂಖವಾಗಿ ಅಭಿವೃದ್ಧಿ ಯೋಜನೆಗಳ ಪಟ್ಟಿಯೇನೋ ಓದಿ ಹೋದರು. ಇದನ್ನೂ ಜನ ಹನ್ನೊಂದರಲ್ಲಿ ಇನ್ನೊಂದು ಎಂದು ಮರೆಯುತ್ತಿದ್ದಾರೆ. ಮಾತ್ರವಲ್ಲ ಹೀಗೆಲ್ಲಾ ವೀರಾವೇಶದಿಂದ ಭಾರಿ ಭರವಸೆಗಳ ಹೊಳೆ ಹರಿಸಿದವರೇ ಅಲ್ಲಿಂದ ಕಾಲ್ಕಿತ್ತ ಮೇಲೆ ಅವೇನೆಂದು ಮರೆತು ಬಿಟ್ಟಿದ್ದಾರೆ. ಅವರಿಗೆ ಅವುಗಳನ್ನು ಸಾಕಾರಗೊಳಿಸುವ ಬದ್ಧತೆಯಾಗಲೀ, ರಾಜಕೀಯ ಇಚ್ಛಾ ಶಕ್ತಿಯಾಗಲೀ ಇಲ್ಲವೇ ಇಲ್ಲ. ಹೀಗಾಗಿ ನಿರ್ಮಿಸಿದ ವಿಧಾನ ಸೌಧದ ಪಡಿ ನೆರಳಾಗಲೀ, ಸಂಪುಟ ದ ಸಭೆಗಳಾಗಲೀ ಆಡಳಿತವನ್ನು ಇನ್ನಷ್ಟು ಜನರ ಹತ್ತಿರಕ್ಕೆ ತರುವಲ್ಲಿ ವಿಫಲವಾಗಿದೆ. ಅದು ಜನರಿಂದ ಇನ್ನಷ್ಟು ದೂರವಾಗಿದೆ. ದೂರಗೊಳಿಸುವ ಇಂತಹ ಕೆಲಸವನ್ನು ಕೆಲವರು ಬಹು ನಿಷ್ಠೆಯಿಂದ ಮಾಡುತ್ತಿರುವುದು ಶೋಚನೀಯ.

ಸಚಿವ ಸ್ಥಾನವೆಂದರೆ ವ್ಯಾಪಾರವೇ?

ಜಗದೀಶ್ ಶೆಟ್ಟರ್ ರವರ ಅಮೋಘ ಬಿಜೆಪಿ ಸರಕಾರದಲ್ಲಿ ಉಮೇಶ್ ಕತ್ತಿ ಎಂಬ ಕ್ಯಾಬಿನೆಟ್ ದರ್ಜೆಯ ಸಚಿವರೊಬ್ಬರಿದ್ದಾರೆ. ನಾಡಿನ ಯಾವುದಾದರೂ ರೈತನನ್ನು ಈ ಮಹಾಶಯ ಯಾವ ಮಂತ್ರಿ ಎಂದು ಕೇಳಿದರೆ ಬಹುತೇಕರು ಇಂತವರೂ ಇದ್ದಾರೆಯೇ ಎಂದು ಕಕ್ಕಾಬಿಕ್ಕಿ ಯಾದಾರು. ಈಗಲೂ ರಾಜ್ಯದಲ್ಲಿ ಕೃಷಿ ದಿವಾಳಿಯೆದ್ದು ಕೃಷಿಕರು ಅವನತಿಯ ಹಾದಿಯುಲ್ಲಿದ್ದಾರೆ, ರೈತರ ಆತ್ಮಹತ್ಯೆ ನಿತ್ಯ ಸಂಭವಿಸುತ್ತಿದ್ದರೂ ಕತ್ತೆತ್ತಿ ನೋಡದೇ ನಿಷ್ಕಾಳಜಿಯಿಂದ ಲೋಲಾಡುತ್ತಿರುವ ಈ ವ್ಯಕ್ತಿ ಅತ್ಯಂತ ಪ್ರಮುಖ ಖಾತೆ ಹೊತ್ತ ಕೃಷಿ ಸಚಿವ. ವಹಿಸಿದ ಹೊಣೆಗಿಂತ ಬಿಜೆಪಿಯೊಳಗಿನ ಅಧಿಕಾರದ ದಾಹ, ಹಗರಣಗಳನ್ನು ಮುಚ್ಚಿಕೊಳ್ಳುವ, ಭಿನ್ನಮತೀಯ ಚಟುವಟಿಕೆಗಳಲ್ಲಿ ಯಡಿಯೂರಪ್ಪ ನೊಂದಿಗೆ ಬೆರಳಾಡಿಸುತ್ತಾ ಕಾಣಿಸಿಕೊಂಡ ನಿಷ್ಠಾವಂತ ಪಕ್ಕಾ ವ್ಯಾಪಾರಿ. ತನ್ನ ಖಾತೆಯ ಆಳ ಅಗಲ, ಗಂಭೀರತೆಗಳನ್ನು ಅರಿಯುವ ಗೋಜಿಗೇ ಹೋಗದ ಹೊಣೆಗೇಡಿ. ಅಧಿಕಾರದ ಹವಣಿಕೆಯಲ್ಲೇ ಪಕ್ಷದಿಂದ ಪಕ್ಷಗಳನ್ನು ಬದಲಾಯಿಸುತ್ತಲೇ ಬಂದ ಇಂತಹ ಪ್ರಚಂಡ ಪಕ್ಷಾಂತರಿ ಮೇಧಾವಿಗೆ ಮೊಂಡು 'ಕತ್ತಿ'ಯೆಂದೂ, ಕತ್ತಿಯೆಂದರೆ ಖಡ್ಗ ಅಲ್ಲ, ಅದು ನಾಲ್ಕು ಕಾಲಿನ ಪ್ರಾಣಿಯೆಂದೂ ಛೇಡಿಸುತ್ತಿರುವುದೂ ಇದೆ. ಇಂತಹ ಸೋಂಬೇರಿ ಸಚಿವ ತನ್ನ ಹೇಳಿಕೆಯಿಂದ ಅಖಿಲ ಕರ್ನಾಟಕದಲ್ಲಿ ಜನರ ನಾಲಿಗೆ ತುದಿಯಲ್ಲಿ ನಲಿದಾಡುತ್ತಿದ್ದಾನೆ! (ಬಿಜೆಪಿ ಸರಕಾರದಲ್ಲಿ ಇಂತಹವರೇ ಮೆಜಾರಿಟಿ) ಹಿಂದೆಯೂ ಇಂತಹುದೇ ಒಬ್ಬ ಕಾಳು ಕಡಿ ವ್ಯಾಪಾರಿ ರವೀಂದ್ರನಾಥ್ ಎಂಬಾತ ಕೃಷಿ ಸಚಿವನಾಗಿದ್ದು ರೈತರ ಮೇಲೆ ಗೋಲೀಬಾರ್ ನಡೆಸಿ ಇಬ್ಬರನ್ನು ಕೊಂದು ಅವರನ್ನು ಗೂಂಡಾಗಳೆಂದೇ ಕರೆದಿದ್ದ. ರೈತರ ಹೆಸರೇಳಿ ಅಧಿಕಾರಕ್ಕೆ ಬಂದ ಬಿಜೆಪಿಯವರಿಗೆ ರೈತರ ಭೂಮಿ ಬೇಕು, ಆದರೆ ರೈತರು ಬೇಡ!

ಖಂಡನೀಯ ಹೇಳಿಕೆ

ಸುವರ್ಣಸೌಧ ಉದ್ಘಾಟನೆಯಾದ ಬೆನ್ನಲ್ಲಿ ಶೆಟ್ಟರ್ ಸರಕಾರ ನೀಡಿದ ಭರವಸೆಗಳನ್ನು ಈಡೇರಿಸುವ ದಿಶೆಯಲ್ಲಿ ಏನಾದರೂ ಕ್ರಮಗಳ ಬಗ್ಗೆ ಸಚಿವ ಕತ್ತಿ ಮಾತನಾಡಬಹುದಿತ್ತು. ಬದಲಾಗಿ ಇದ್ದಕ್ಕಿದ್ದಂತೇ ಉತ್ತರ ಕರ್ನಾಟಕ ಪ್ರತ್ಯೇಕಗೊಳ್ಳಬೇಕೆಂದೂ, ಅದಕ್ಕಾಗಿ ನಡೆಯಲಿರುವ ಹೋರಾಟದ ನಾಯಕತ್ವವನ್ನು ತಾನು ವಹಿಸುವುದಾಗಿ ಹೇಳಿದ್ದಾರೆ. ಅತ್ಯಂತ ಬೇಜವಾಬ್ದಾರಿತನದಿಂದ ಕೂಡಿದ ಇಂತಹ ಅವಿವೇಕತನದ, ಕಿಡಿಗೇಡಿ ಹೇಳಿಕೆಯು ವ್ಯಾಪಕ ಖಂಡನೆಗೆ ಗುರಿಯಾಗಿದೆ.

ಪಾಳೇಗಾರೀ ಕನಸುಗಳು

ಇಂತಹ ಹೇಳಿಕೆಯನ್ನು ಕತ್ತಿಯವರು ಯಾಕೆ ನೀಡಿದರು ಮತ್ತು ಖಂಡನೆ ಹೆಚ್ಚಾದಾಗ ಹಾಗೆ ಹೇಳಿಯೇ ಇಲ್ಲವೆಂದು ನಿರಾಕರಿಸಿ ಮತ್ತೇಕೆ ಸಮರ್ಥಿಸಿಕೊಂಡರು? ಇದು ಕೇವಲ ಅವಿವೇಕಿತನದ ಹೇಳಿಕೆಯೆಂದು ತಳ್ಳಿ ಹಾಕಬಹುದೇ? ಒಬ್ಬ ಕ್ಯಾಬಿನೆಟ್‌ನ ಹಿರಿಯ ಸಚಿವನೊಬ್ಬ ಹೀಗೆ ಹೇಳುವುದನ್ನು ಹಗುರವಾಗಿ ತೆಗೆದು ಕೊಳ್ಳಲಾಗುವುದಿಲ್ಲ. ಕತ್ತಿ ಹೇಳುವ ಮೊದಲು ಗಂಭೀರವಾದ ಯಾವ ಚಿಂತನೆಯೂ ಅಲ್ಲಿಲ್ಲ ಎಂಬುದು ನಿಜ. ತಕ್ಷಣದಲ್ಲಿ ಕಣ್ಣೆದುರು ಕಂಡ ಸುವರ್ಣಸೌಧ ಇನ್ನೊಂದು ತನ್ನ ಪಾಲಿನ ಇನ್ನೊಂದು ವಿಧಾನಸೌಧವಾಗಿ ಅದರಲ್ಲಿ ತನ್ನಂತಹ ನಾಯಕನೇ ಮುಖ್ಯಮಂತ್ರಿ ಯಾಕಾಗಬಾರದೆಂಬ ಪಾಳೇಗಾರಿ ಬಯಕೆ ಪ್ರಚೋದನೀಯವಾಗಿರಬಹುದೇ? ಅದು ಉತ್ತರ ಕರ್ನಾಟಕವೋ, ಹೈದ್ರಾಬಾದ್ ಕರ್ನಾಟಕವೋ ಅಥವಾ ಕೊಡಗಿನ ಕಲಿಗಳಿಗೋ



ಇಂತಹ ಪಾಳೇಗಾರಿ ಕನಸುಗಳು ಕಾಡದೇ ಇಲ್ಲ. ಏನಾದರೂ ಬಿಕ್ಕಟ್ಟಿರುವಾಗ, ಇಲ್ಲವೇ ತಮ್ಮ ರಾಜಕೀಯ ಅಸ್ತಿತ್ವ ಅಲುಗಾಡುವಾಗ

ಪುಟ 4 ಕ್ಕೆ

ಪುಟ 3 ರಿಂದ..

ರಾಜ್ಯ ಒಡೆಯುವ ಹುನ್ನಾರ...

ಇಂತಹ ಮಾತುಗಳನ್ನು ಹೇಳುವುದು ಒಂದು ಫ್ಯಾಷನ್ ನಂತಾಗಿದೆ. ಬಹು ಸುಲಭವಾಗಿ ಜನರನ್ನು ಹಾದಿ ತಪ್ಪಿಸಬಹುದೆಂದೂ ಅಭಿವೃದ್ಧಿಯ ಮಾತನಾಡಿ ಜನಪ್ರಿಯರಾಗಬಹುದೆಂದೂ ಭಾವಿಸಿದವರೇ ಹೆಚ್ಚು. ಕತ್ತಿಯಂತವರಿಗೆ ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳುವ, ಭಿನ್ನಮತೀಯರ ಬಡಿದಾಟದಲ್ಲಿ ಅಸ್ತಿತ್ವ ಉಳಿಸಿಕೊಳ್ಳುವ ಇರಾದೆಯೇ ಹೆಚ್ಚು. ಇಂತಹ ಪ್ರಸಂಗದಲ್ಲಿ ಮಾಧ್ಯಮಗಳು ನೀಡಿದ ಪುಕ್ಕಟೆ (ಪುಕ್ಕಟೆ ಇಲ್ಲದೆಯೂ ಇರಬಹುದು?!) ಪ್ರಚಾರ ಕತ್ತಿಯವರಿಗೆ ಬೇರೆಲ್ಲಿ ಸಿಕ್ಕೀತು?

ಲೂಟಿಗಾಗಿ ರಾಜ್ಯ ಒಡೆಯುವ ಕುತಂತ್ರ

ಆದರೆ ದುರಂತವೆಂದರೆ ಈ ಪ್ರದೇಶಗಳ ಹಿಂದುಳಿದಿರುವಿಕೆಗೆ ಒಂದಿಲ್ಲೊಂದು ಬಗೆಯಲ್ಲಿ ಕಾರಣರಾದ ಇಂತಹ ಪಾಳೇಗಾರೀ ಶಕ್ತಿಗಳೇ ಪ್ರತ್ಯೇಕ ರಾಜ್ಯವೇ ಅಭಿವೃದ್ಧಿ ಸಾಧಿಸಲು ಏಕೈಕ ಮಾರ್ಗವೆಂದು ಪ್ರತಿಪಾದಿಸುತ್ತಿರುವುದು ಅರ್ಥಹೀನ. ಸಿಕ್ಕಷ್ಟೂ ದಿನವೂ ಹಲವಾರು ದಶಕಗಳಿಂದ ಅಧಿಕಾರ ಅನುಭವಿಸುತ್ತಾ ಬಂದ ಇವರು ಮಾಡಿದ್ದಾದರೂ ಏನು ಎಂದು ಹೇಳಬಲ್ಲರೇ? ತಮ್ಮ ಹಾಗೂ ದೇಶದಲ್ಲಿ ಆಳುತ್ತಾ ಬಂದ ಬಂಡವಾಳಗಾರರು, ಭೂಮಾಲೀಕ ವರ್ಗಗಳು ಅನುಸರಿಸಿದ ನೀತಿಗಳೇ ಕಾರಣವೆಂಬ ಧಾರುಣ ಸತ್ಯವನ್ನು ಇವರು ಮರೆ ಮಾಚುತ್ತಾರೆ. ಈಗಲೂ ಈ ಪ್ರದೇಶಗಳಲ್ಲಿ ಭೂಮಿಯ್ಲೇ ಇಲ್ಲದ ಭೂಹೀನ ಕೂಲಿಕಾರರರು ಅತ್ಯಧಿಕ. ಭೂಮಿ ಕೇಂದ್ರೀಕರಣಗೊಂಡಿರುವುದು ಕೆಲವೇ ಭೂಮಾಲೀಕರಲ್ಲಿ. ಹಾಕಿದ ಹಣವೆಲ್ಲಾ ಬಳಕೆಯಾದದ್ದು ಬಂಡವಾಳಶಾಹಿ ಭೂಮಾಲೀಕ ವರ್ಗಗಳ ಬೆಳವಣಿಗೆಗೆ. ಅಸಮಾನತೆ, ಅರಾಜಕತೆಗಳು ಈ ಪ್ರಭುತ್ವದ ಸಹಜ ಸೃಷ್ಟಿಗಳು. ರಾಜ್ಯಗಳು ಅದೆಷ್ಟೆ ವಿಭಜನೆಯಾದರೂ ಅಭಿವೃದ್ಧಿ ಅಸಾಧ್ಯವೆಂಬ ನಗ್ನ ಸತ್ಯ ಝಾರ್ಖಂಡ್, ಉತ್ತರಾಂಚಲ್, ಮುಂತಾದ ಸಣ್ಣ ರಾಜ್ಯಗಳ ಅನುಭವವೇ ತೋರಿಸಿದೆ. ಇದರ ಪರಿಣಾಮವಾಗಿ ಜನ ಬಲ, ಆರ್ಥಿಕ, ರಾಜಕೀಯವಾದ ಎಲ್ಲಾ ರೀತಿಯಿಂದಲೂ ಬಲ ಕುಗ್ಗಿಸಿಕೊಂಡು ಸಂಪನ್ಮೂಲಗಳಿಲ್ಲದೇ ಸದಾ ಪ್ರತಿಯೊಂದಕ್ಕೂ ಕೇಂದ್ರದ ಮುಂದೆ ಮಂಡಿಯೂರುವ ದುಸ್ಥಿತಿ. ಅದೇ ಹೊತ್ತಿನಲ್ಲಿ ಸಂಪದ್ಭರಿತವಾದ ಈ ರಾಜ್ಯಗಳಲ್ಲಿನ ನೈಸರ್ಗಿಕ ಸಂಪತ್ತನ್ನು ಮನ ಬಂದಂತೆ ಲೂಟಿ ಮಾಡಲು ದೇಶೀಯ ಮತ್ತು ವಿದೇಶಿ ಕಂಪನಿಗಳಿಗೆ ಮುಕ್ತ ಅವಕಾಶ. ಹೀಗಾಗಿಯೇ ದಾರಿದ್ರ್ಯತೆ ಅಲ್ಲಿ ಮಡುಗಟ್ಟಿ ನಿಂತಿದೆ. ಆಧುನಿಕ ಭಾರತದಲ್ಲಿ ರಚಿತವಾದ ಭಾಷಾವಾರು ಪ್ರಾಂತ್ಯಗಳನ್ನು ಒಡೆದು ಸಣ್ಣ ರಾಜ್ಯಗಳನ್ನು ನಿರ್ಮಿಸಬೇಕೆಂಧು ಪ್ರತಿಪಾದಿಸುವವರು ಗಮನಿಸಬೇಕಾದ ದೊಡ್ಡ ಅನುಭವವಿದು.

ಆದರೆ ಇಂತಹ ಬೇಡಿಕೆಗಳನ್ನು ಮಂಡಿಸುವವರು, ಅದರ ನಾಯಕತ್ವ ವಹಿಸುವವರು ಅದೇ ಸ್ಥಾಪಿತ ಹಿತಾಸಕ್ತಗಳೇ. ಆದ್ದರಿಂದಲೇ 2020ಕ್ಕೆ 50ಕ್ಕೂ ಅಧಿಕ ರಾಜ್ಯಗಳನ್ನಾಗಿಸುವ ಕುತಂತ್ರ.

ಅಪಾರ ತ್ಯಾಗ, ಬಲಿದಾನ ಮತ್ತು ಧೀರ ಹೋರಾಟಗಳನ್ನು ನಡೆಸಿ ರಚನೆಯಾದ ಭಾಷಾವಾರು ಪ್ರಾಂತ್ಯಗಳ ವಿರುದ್ಧ ರಾಜ್ಯಗಳನ್ನು ತುಂಡರಿಸುವುದನ್ನು ಸತತವಾಗಿ ಪ್ರತಿಪಾದಿಸುತ್ತಾ



ಅಂತಹ ಶಕ್ತಿಗಳಿಗೆ ಕುಮ್ಮಕ್ಕು ನೀಡುತ್ತಾ ಬಂದಿರುವುದು ಆರೆಸ್ಸೆಸ್ –ಬಿಜೆಪಿ ಪಕ್ಷಗಳೇ. ವೈವಿಧ್ಯತೆಯ ಸಂಸ್ಕೃತಿ, ಪ್ರಜಾಪ್ರಭುತ್ವದ ವಿರುದ್ಧ ಕತ್ತಿ ಮಸೆಯುವ ಇವರು ಅಖಂಡ ಕರ್ನಾಟಕವನ್ನು ವಿಭಜಿಸಲು ಹೇಸುವುದಿಲ್ಲ. ಇದನ್ನು ಜನರ ನಡುವೆ ಜೀವಂತವಾಗಿರಿಸುವ ಹುನ್ನಾರಗಳನ್ನು ಈ ಪ್ರಸಂಗದಲ್ಲಿಯೂ ತಳ್ಳಿಹಾಕುವಂತಿಲ್ಲ. ಕರ್ನಾಟಕ ರಾಜ್ಯೋತ್ಸವಕ್ಕೆ ಜನತೆ ಸಿದ್ಧವಾಗುತ್ತಿರುವಾಗ. ಅಭಿವೃದ್ಧಿ ಸಾಧನೆಯ ಅಂಶ ಬದಿಗೆ ತಳ್ಳಿ ಗೊಂದಲಗಳಲ್ಲೇ ಕಾಲ ಕಳೆದು ಹೋದರೆ ಆಳುವವರಿಗೇ ಲಾಭವಲ್ಲವೇ? .ಕಾಂಗ್ರೆಸ್ ನ ನಿಲುವೂ ಭಿನ್ನವಿಲ್ಲ.

ನಿಜ ಕಾಳಜಿ ಇದೆಯೇ?

ನಿಜ, ಇಂದು ಈ ಪ್ರದೇಶಗಳ ಪರಿಸ್ಥಿತಿ ಅತ್ಯಂತ ಶೋಚನೀಯ. ಎಲ್ಲಾ ರಂಗಗಳಲ್ಲಿಯೂ ಹಿಂದುಳಿದಿರುವಿಕೆ ಎದ್ದು ಕಾಣುತ್ತಿದೆ, ಕಾಡುತ್ತಿದೆ. ಅಭಿವೃದ್ಧಿ ಸಾಧಿಸಬೇಕು. ಆದರೆ ಹೇಗೆ? ಇಲ್ಲಿನ ಭೂ ಸಂಬಂದಗಳನ್ನು ಬದಲಾಯಿಸದೇ, ಭೂ ಹೀನರಿಗೆ ಪ್ರಗತಿಪರವಾಗಿ ಭೂ ಹಂಚಿಕೆಯಾಗದೇ ಅದರ ನೆಲೆಯಲ್ಲಿ ಕೈಗಾರಿಕೆ, ಬೆಳೆಯದೇ ಇದು ಅಸಾಧ್ಯ. ಅಭಿವೃದ್ಧಿ ಮಂಡಳಿ, 371 ರ ವಿಧಿ ಅನ್ವಯಗಳು ತಾತ್ಕಾಲಿಕವಾದ ಶಮನವಷ್ಟೇ. ಇದಕ್ಕೂ ಗಂಭೀರವಾದ ಕಾರ್ಯ ಸಾಧುವಾದ ಯೋಜನೆ ಬೇಕು.

ಇನ್ನೂ ವಜಾ ಯಾಕಿಲ್ಲ ಶೆಟ್ಟರೇ?

ಆದ್ದರಿಂದ ಅಭಿವೃದ್ಧಿ ಮತ್ತು ಪ್ರತ್ಯೇಕತೆ ಪ್ರಶ್ನೆಗಳು ಬೇರೆ ಬೇರೆ. ಹೀಗಾಗಿ ಸಂಕುಚಿತ ಹಿತಾಸಕ್ತಿಗಳಿಗಾಗಿ ರಾಜ್ಯವನ್ನು ಒಡೆಯುವ ಮಾತನ್ನಾಡುವುದು ಅಕ್ಷಮ್ಯ ಅಪರಾಧ. ಅದೂ ಅಖಂಡತೆಯನ್ನು ರಕ್ಷಿಸುವುದಾಗಿ ಸಂವಿಧಾನದ ಮೇಲೆ ಪ್ರಮಾಣ ಮಾಡಿ ರಾಜ್ಯದ ಸಚಿವನಾಗಿ ಮನೆ ಮುರಿಯುವ ಜನವಂಚಿಸುವ ಹೇಳಿಕೆಯನ್ನು ಯಾರೂ ಸಹಿಸಬಾರದು, ಸಮರ್ಥಿಸಬಾರದು. ಇಂತಹ ಬೇಜವಾಬ್ದಾರಿ ಸಚಿವನನ್ನು ಇನ್ನೂ ಯಾಕೆ ಸಂಪುಟದಿಂದ ಹೊರ ಹಾಕಿಲ್ಲ. ಹಾಗಲ್ಲ ಹೀಗೆ ಹೇಳಿದ್ದು ಎಂದು ಕತ್ತಿಯ ಹೇಳಿಕೆಗೆ ಸ್ಪಷ್ಟನೆ ನೀಡಿ ಸಮರ್ಥಸಿದ 'ಘನವೆತ್ತ ಸಿ.ಎಂ.ಶೆಟ್ಟರ್' ರವರಿಗೆ ಕರ್ನಾಟಕದ ಜನತೆ ಕೇಳುವ ಪ್ರಶ್ನೆ.

ಅಧಿಕಾರದ ಆಶೆಗೆ ಒಗ್ಗಟ್ಟೊಂದೇ ಸಾಕೇ?

ಕರಾವಳಿಗೆ ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾಗಾಂಧಿ ಬಂದು ಹೋಗಿದ್ದಾರೆ. 'ಕಾಂಗ್ರೆಸ್ಗೆ ಬನ್ನಿ ಬದಲಾವಣೆ ತನ್ನಿ' ಎಂಬ ಅದರ ಘೋಷಣೆ ಮತ್ತು ಪ್ರಚಾರ ಸಭೆಗಳು ತಮ್ಮನ್ನು ಅಧಿಕಾರಕ್ಕೆ ತರಬಲ್ಲವು ಎಂಬ ನಂಬಿಕೆಯಿಂದ ನಾಯಕರು ಹೊರ ಬಂದಿಲ್ಲವಾದರೂ ಬಿಜೆಪಿಯ ವಿರುದ್ಧದ ಅತೃಪ್ತಿಯನ್ನು ತಮ್ಮತ್ತ ಕ್ರೋಢೀಕರಿಸಿಕೊಳ್ಳಲು ಒಂದಾಗಿ ಕೆಲಸ ಮಾಡಬೇಕೆಂಬ ತಿಳಿವಿಗೆ ತಾತ್ಕಾಲಿಕವಾಗಿಯಾದರೂ ಬಂದಂತಿದೆ. ಒಗ್ಗಟ್ಟಾಗಿಲ್ಲದಿದ್ದರೆ ಅಧಿಕಾರವಿಲ್ಲ ಎಂದು ಅಂಶವನ್ನು ಸೋನಿಯಾ ಬಹಿರಂಗವಾಗಿಯೇ ಕಾರ್ಯಕರ್ತರಿಗೆಲ್ಲಾ ಹೇಳಿದ್ದು ವಿಷಯದ ಗಂಭೀರತೆಯನ್ನು ತೋರಿಸುತ್ತದೆ.

ಬಿಕ್ಕಟ್ಟಿನ ಬಳಿಕವೀಗ ಒಗ್ಗಟ್ಟು!

ಕಾಂಗ್ರೆಸ್ ಅಧಿಕಾರಕ್ಕೆ ಬಂದು ಬಿಟ್ಟಂತೆ, ಮುಖ್ಯಮಂತ್ರಿಯಾರಾಗಬೇಕು ಮತ್ತು ಅದಕ್ಕೆ ಪೂರ್ವ ಭಾವಿಯಾಗಿ ಟಿಕೇಟು ಕೊಡುವ ರಾಜ್ಯಾಧ್ಯಕ್ಷ ತಾವಾಗಬೇಕು ಎಂದೆಲ್ಲಾ ಬಹಿರಂಗ ಕದನಕ್ಕೆ ಇಳಿದಿದ್ದ ಕಾಂಗ್ರೆಸ್ ನಾಯಕರು ಕೊಂಚ ಸುಮ್ಮನಾಗಿದ್ದಾರೆ. ಪದಚ್ಯುತಿಯ ಭೀತಿಯಲ್ಲಿದ್ದ ರಾಜ್ಯಾಧ್ಯಕ್ಷರಾಗಿರುವ ಪರಮೇಶ್ ಅಲ್ಲೇ ಮುಂದುವರಿದಿದ್ದಾರೆ. ಆಕಾಂಕ್ಷಿ ಶಾಮನೂರು ಸದ್ಯ ಮೌನ. ಅತಂತ್ರತೆ ಅನುಭವಿಸುತ್ತಿದ್ದ ಸಿದ್ಧರಾಮಯ್ಯ ತಮ್ಮ ಕ್ಷೇತ್ರ ರಕ್ಷಣಾ ಕಾರ್ಯದಲ್ಲಿ ಮಗ್ನ. ಜಾತಿ ಆಧಾರದಲ್ಲಿ ಅಧ್ಯಕ್ಷರ ಆಯ್ಕೆಯಾಗಬೇಕೆಂಬ ಆಗ್ರಹಗಳು ಹುಟ್ಟು ಹಾಕಿದ ವಿಪರೀತ ಗುಂಪುಗಾರಿಕೆ, ಕಿತ್ತಾಟಗಳು ಕಾಂಗ್ರೆಸ್‌ನ್ನು ದಿಕ್ಕು ದೆಸೆಯಿಲ್ಲದಂತಹ ಸ್ಥಿತಿಗೆ ತಂದು ನಿಲ್ಲಿಸಿತ್ತು. ಹೀಗಾಗಿ ಹೈಕಮಾಂಡ್ ಕದನ ವಿರಾಮ ಹೇರಿದೆ. ಮುಖ್ಯವಾಗಿ ಬಿಜೆಪಿಯೊಳಗೆ ಅಗುತ್ತಿರುವ ಬಿರುಕು ಬೆಳವಣಿಗೆಗಳೂ ಪಡೆಯುವ ಸ್ವರೂಪಗಳಿಗೆ ಕಾಂಗ್ರೆಸ್ ಕಾದಿದೆ. ಹಾಗೇ ಲಿಂಗಾಯತರ ಮತ ಸೆಳೆಯುವ ಅದರ ಲೆಕ್ಕಾಚಾರವನ್ನೇನೂ ಬಿಟ್ಟಿಲ್ಲ. ಒಟ್ಟಾರೆ ಸ್ಥಾನ ಮಾನಗಳ ಆಮಿಷ, ಹಂಚಿಕೆ ಜೀವಂತವಾಗಿರಿಸಿ ಕುದುರೆಯ ಮುಂದೆ ಕಟ್ಟದಿದ್ದರೆ ಕಾಂಗ್ರೆಸ್ ಗಾಡಿ ಎಳೆಯುವವರು ಇಲ್ಲವಾಗಬಹುದೆಂಬ ವಾಸ್ತವದ ಅರಿವು ಹೈಕಮಾಂಡ್‌ಗೆ ಇದೆಯೆಂದಾಯಿತು. ಅದ್ದರಿಂದ ಗಾದಿಯ ಸುತ್ತಲು ಗಿರಿಕೆ ಹೊಡೆಯುವ ಗುದ್ದಾಟವಂತೂ ಮುಂದೆಯೂ ಇದ್ದೇ ಇರುತ್ತದೆ.

ಸೋನಿಯಾಗೆ ಕಾಣದ ಸಂಗತಿಗಳು

ಕಾಂಗ್ರೆಸ್ ಕ್ರಿಯಾಶೀಲವೆಂಬಂತೆ ಕಾಣಿಸಿಕೊಂಡರೂ ಅದು ನಿಜಕ್ಕೂ ಜನಸಾಮಾನ್ಯರಲ್ಲಿ ವಿಶ್ವಾಸ ಹುಟ್ಟಿಸಲು ಸಾಧ್ಯವೇ ಅಗಿಲ್ಲ. ಅದಕ್ಕೆ ಸಂಘಟನಾ ಪ್ರಯತ್ನಗಳೂ ಇಲ್ಲ. ಇದಕ್ಕೂ ಮೇಲಾಗಿ ಕೇಂದ್ರ ಸರಕಾರದ ಬೆಲೆ ಏರಿಕೆ ಕ್ರಮಗಳು ಜನರನ್ನು ಇನ್ನಷ್ಟು ಕೆರಳುವಂತೆ ಮಾಡಿವೆ. ರಾಜ್ಯದಲ್ಲಿಯೂ ಬಿಜೆಪಿ ಸರಕಾರದ ನೀತಿಗಳ ವಿರುದ್ಧ ಈಗಲೂ ಅದರ ನಿಷ್ಕ್ರಿಯತೆ ಮುಂದುವರಿದಿದೆ. ಆದರೀಗ ತಾವೆಲ್ಲಾ ಒಂದಾಗಿ ಹೋಗುತ್ತಿದ್ದೇವೆ ಎಂಬ ಸೂಚನೆಯೂ ಕೊಂಚ ಸಹಾಯಕವಾದೀತು.

ಮಂಗಳೂರಿಗೆ ಸೋನಿಯಾ ಭೇಟಿ ಮತ್ತು ಭಾಷಣ ಕೊಂಚ ಹುರುಪು ಮೂಡಿಸುವ ಯತ್ನ ನಿಜ. ಆದರೆ ಕರಾವಳಿಯಲ್ಲಿ ಬಿಜೆಪಿಗೆ ಎದುರಾಗಿ ಕಾಂಗ್ರೆಸ್‌ಗೆ ಇತರೆ ಪಕ್ಷಗಳಿಗಿಂತ ಹೆಚ್ಚಿನ ಜನ ಬೆಂಬಲವಿದ್ದರೂ ಅದು ರಾಜಕೀಯವಾಗಿ ಸಂಪೂರ್ಣ ನಿಷ್ಕ್ರಿಯ. ಮೇಲಾಗಿ ಅಲ್ಲಿ ಕಾಂಗ್ರೆಸ್ ಒಡೆದ ಮನೆ. ಪೂಜಾರಿ, ಮೊಯ್ಲಿ ಗುಂಪುಗಳ ಕಿತ್ತಾಟ ಹೊಸದೇನಲ್ಲ. ಈ ಒಳ ಜಗಳದ ಫಲಾನುಭವಿಯೇ ಬಿಜೆಪಿ. ಅದರ ರಾಜಕೀಯ ನಿಷ್ಕ್ರಿಯತೆಯಿಂದಾಗಿ ಕೋಮುವಾದದ ವಿಷ ಪ್ರಚಾರದ ಪರಿಣಾಮದಿಂದ ಕಾಂಗ್ರೆಸ್ ಕಾರ್ಯಕರ್ತರನ್ನು ರಕ್ಷಿಸಲು ಸಾಧ್ಯವಾಗಿಲ್ಲ. ಇದರ ಅವಲೋಕನವನ್ನು ಸೋನಿಯಾ ಈಗಲಾದರೂ ಮಾಡಬೇಕಿತ್ತು. ಅದು ಆಗಲಿಲ್ಲ. ಇಲ್ಲವಾದರೆ ಅವರೇ ಹೇಳಿದಂತೆ ಕೋಮುವಾದವನ್ನು ತಡೆಯಲು, ಸೋಲಿಸಲು ಎಲ್ಲಿಂದ ಸಾಧ್ಯ?

ಪ್ರಸಕ್ತವಾಗಿ ಕರಾವಳಿಯ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡದಲ್ಲಿ ಇತ್ತೀಚೆಗಿನ ಬಿಜೆಪಿಯೊಳಗಿನ ಕಿತ್ತಾಟ, ದುರಾಡಳಿತ ಜನರಲ್ಲಿ ಅತೃಪ್ತಿ ಬೇಸರ ಹುಟ್ಟಿಸಿವೆ. ಇದನ್ನು ಬಳಸಿಕೊಳ್ಳಲು ಜೆಡಿ(ಎಸ್) ಸಹ ಪ್ರಯತ್ನ ನಡೆಸಿದೆ. ಈಗ ಕಾಂಗ್ರೆಸ್‌ನದು ಒಂದು ಪ್ರಯತ್ನ. ಆದರೆ ಕರಾವಳಿಯಲ್ಲಿ ಸಂಘಪರಿವಾರವನ್ನು ಸೋಲಿಸುವುದು ಗಾಳಿ ಮೇಲೆ ತೇಲಿ ಹೋದಷ್ಟು ಸುಲಭವೇನಲ್ಲ. ಇದಕ್ಕೆ ರಾಜಕೀಯ, ಸಾಮಾಜಿಕ ಹಾಗೂ ಪ್ರಬಲ ಸಂಘಟನಾ ಕ್ರಿಯಾಶೀಲತೆ, ಬಲ, ಬದ್ಧತೆ, ದೃಢ ಹೋರಾಟ ಬೇಕಾಗುತ್ತದೆ. ಇದರತ್ತ ಕಾಂಗ್ರೆಸ್‌ನ ಕ್ರಮಗಳೇನು? ಅದರ ಸೂಚನೆ ಅಲ್ಲಿ ಕಾಣಲಿಲ್ಲ. ಸಾರ್ವಜನಿಕ ಸಭೆಯಲ್ಲಿ ಬಿಜೆಪಿ ವೈಫಲ್ಯಗಳನ್ನೇ ಮಾತನಾಡಿದ ಸೋನಿಯಾ ಜನತೆಯ ಮೇಲೆ ಬೆಲೆ ಏರಿಕೆಯಂತಹ ಕ್ರೂರ ಧಾಳಿಯನ್ನು ಸಮರ್ಥಿಸಿಕೊಂಡದ್ದು ನಾಚಿಕೆಗೇಡು. ಅಂದರೆ ತನ್ನ ನೀತಿಗಳನ್ನು ಬದಲಿಸಿಕೊಳ್ಳದ ಕಾಂಗ್ರೆಸ್ ಅಂತಹುದೇ ಧಾಳಿ ಮುಂದುವರಿಸಲು ಜನತೆಯ ಬೆಂಬಲ ಕೇಳಿದಂತೆ ಅಲ್ಲವೇ? ಅದಕ್ಕಾಗಿ ಕಾಂಗ್ರೆಸ್‌ಗೆ. ಅವಕಾಶ ನೀಡಬೇಕೇ ಎಂಬ ಪ್ರಶ್ನೆ ಎದುರಾಗುತ್ತದೆ. ಅದೂ ದೇಶದ ಹಲವೆಡೆಗಳಲ್ಲಿ ಇತ್ತೀಚಿನ ಉಪ ಚುನಾವಣೆಗಳಲ್ಲಿ ಸೋತ ನಂತರವೂ ಅದೇ ಹಾಡೇ? ಇದು ಬಿಜೆಪಿಗೆ ವರದಾನವಲ್ಲವೇ? ಅಧಿಕಾರದ ಉತ್ಸಾಹದಲ್ಲಿರುವ ರಾಜ್ಯ ನಾಯಕರ ಕಣ್ಣಿಗಾದರೂ ಇವು ಕಂಡಾವೆಯೇ?

ಅನ್ಯ ರಾಜ್ಯಗಳಿಂದ ಬಂದವರು ವಲಸಿಗರಾಗಲಾರರು

ಡಾ. ಇ.ರ. ದುರ್ಗಾ ಪ್ರಸಾದ್

ಕೊಡಗು ಜಿಲ್ಲೆಯಲ್ಲಿ ಇತ್ತೀಚೆಗೆ ದೇವರ ಕಾಡು, ನದೀ ತೀರ, ಊರುಡೊವೆ ಪ್ರದೇಶಗಳ ರಕ್ಷಣೆಯ ಹೆಸರಿನಲ್ಲಿ ಒಂದು ವಾದ ಪ್ರಾರಂಭವಾಗಿದೆ.

ಈ ಪ್ರದೇಶಗಳಲ್ಲಿ ತಲಾಂತರದಿಂದ ಅನೇಕರು ವಾಸಿಸುತ್ತಿದ್ದಾರೆ. ಈಗ ಅವರನ್ನು ಒಕ್ಕಲೆಬ್ಬಿಸಬೇಕೆಂಬ ಕೂಗು ಕೇಳಿ ಬರುತ್ತಿದೆ. ಅದರಲ್ಲೂ ಅನ್ಯ ಭಾಷಿಗರನ್ನು 'ವಲಸಿಗ'ರೆಂದು ಕರೆದು "ಅವರಿಂದಾಗಿಯೇ ಕೊಡಗು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಕೊಡಗಿನ ವಿಶಿಷ್ಟ ಸಂಸ್ಕೃತಿಗೆ ಇದರಿಂದ ಹಾನಿ ಸಂಭವಿಸುತ್ತಿದೆ" ಎಂದು ಪ್ರಚಾರ ಮಾಡಲಾಗುತ್ತಿದೆ. ಪ್ರಮುಖವಾಗಿ ಮಲೆಯಾಳ ಭಾಷಿಗರನ್ನು ಬೊಟ್ಟು ಮಾಡಲಾಗುತ್ತಿದೆ.

ಈ ವಾದ ಸರಿಯಲ್ಲ. ದೇವರ ಕಾಡು ಪ್ರದೇಶದಲ್ಲಿ ವಾಸಿಸುವವರಲ್ಲಿ ಇತರ ಭಾಷಿಗರಂತೆ ಸ್ಥಳೀಯರೂ ಇದ್ದಾರೆ. ಅವರೆಲ್ಲರೂ ಹೆಚ್ಚಾಗಿ ತಲಾಂತರಗಳಿಂದ ಅಲ್ಲಿ ವಾಸಿಸುವವರಾಗಿದ್ದಾರೆ. ಅವರೆಲ್ಲರನ್ನೂ ಅಲ್ಲಿಂದ ಒಕ್ಕಲೆಬ್ಬಿಸಬೇಕೆನ್ನುವುದು ಒಪ್ಪಲು ಸಾಧ್ಯವಿಲ್ಲದ ವಾದ.

2006 ರ ಅರಣ್ಯ ಕಾಯಿದೆಯ ಪ್ರಕಾರ ಅರಣ್ಯವಾಸಿಗಳಾದ ಬುಡಕಟ್ಟು ವಿಭಾಗಕ್ಕೆ ಸೇರದವರಿಗೂ ಅವರು ವಾಸಿಸುವ ಸ್ಥಳಕ್ಕೆ ಒಡೆತನ ಕೊಡಬೇಕು, ಅವರಿಗೆ ಮೂಲಭೂತ ಸೌಕರ್ಯಗಳನ್ನೊದಗಿಸಬೇಕು. ಅವರನ್ನು ಉಪಯೋಗಿಸಿಕೊಂಡು, ಅವರ ಸಹಕಾರದೊಂದಿಗೆ ಅರಣ್ಯ ಪ್ರದೇಶವನ್ನು ರಕ್ಷಿಸಲು ಯೋಜನೆಗಳನ್ನು ರೂಪಿಸಬೇಕು.

ದೇವರ ಕಾಡುಗಳನ್ನೊಳಗೊಂಡು ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿರುವ ಸಾಮಾನ್ಯ ಜನರಿಂದ ಅರಣ್ಯ ಲೂಟಿಯಾಗುತ್ತಿಲ್ಲ. ಅರಣ್ಯ ಲೂಟಿಗೆ ಅಧಿಕಾರದಲ್ಲಿರುವ ರಾಜಕೀಯ ಪಕ್ಷಗಳವರ ಪ್ರತ್ಯಕ್ಷ, ಪರೋಕ್ಷ ಬೆಂಬಲದೊಂದಿಗೆ ಮತ್ತು ಉನ್ನತ ಅರಣ್ಯಾಧಿಕಾರಿಗಳ ಪ್ರತ್ಯಕ್ಷ ಪರೋಕ್ಷ ಸಹಕಾರದೊಂದಿಗೆ ಅರಣ್ಯ ಚೋರರು ನಿರಂತರ ಅರಣ್ಯ ಲೂಟಿ ಮಾಡುತ್ತಿರುವುದೇ ಕಾರಣವಾಗಿದೆ. ಅಧಿಕಾರಕ್ಕೆ ಬಂಧ ಸರಕಾರಗಳ ತಪ್ಪಾದ ಅರಣ್ಯ ಧೋರಣೆಗಳೂ ಈ ನಾಶವನ್ನು ತ್ವರಿತಗೊಳಿಸಿವೆ.

ಆನೆಯ ಹೆಸರಿನಲ್ಲಿ, ಹುಲಿಯ ಹೆಸರಿನಲ್ಲಿ ಅರಣ್ಯ ಪ್ರದೇಶಗಳಿಂದ ಜನ ಸಾಮಾನ್ಯರನ್ನು ಒಕ್ಕಲೆಬ್ಬಿಸಬೇಕೆಂಬ ಪರಿಸರವಾದಿಗಳೆನ್ನುವವರ ವಾದವನ್ನು ಅನುಷ್ಠಾನಕ್ಕೆ ತರಲು ಕೊಡಗಿನಲ್ಲಿ ಅವರು ಪ್ರಾರಂಭಿಸಿರುವ ಷಡ್ಯಂತ್ರದ ಪ್ರಾರಂಭವೇ ಈ ಮೇಲಿನ ವಾದವಾಗಿದೆ. ಈ ಘೋಷಣೆಯ ರುವಾರಿಗಳ್ಯಾರೆಂದು ಗಮನಿಸಿದರೆ ಅದು ಅರ್ಥವಾಗಿ ಬಿಡುತ್ತದೆ. ತಮ್ಮ ಕಾರ್ಯ ಸಾಧನೆಗೆ ಅವರು ಒಡೆದು ಆಳುವ ತಂತ್ರ ಪ್ರಯೋಗ ಪ್ರಾರಂಭಿಸಿದ್ದಾರೆ.

ಈಗ ಮೊದಲು ಅವರು ಅರಣ್ಯವಾಸಿಗಳಲ್ಲಿ ಸ್ಥಳೀಯರು ಮತ್ತು ವಲಸಿಗರು ಎಂದು ವಿಭಜನೆ ತರಲು ಪ್ರಾರಂಭಿಸಿದ್ದಾರೆ. ಅದಕ್ಕಾಗಿ ಜನರ ಭಾವನೆಗಳನ್ನು ಪ್ರಚೋದಿಸಲು ಪ್ರಾರಂಭಿಸಿದ್ದಾರೆ. ಭಾವನೆಗಳನ್ನು ಕೆದಕುವುದು ಸುಲಭ. ಅದಕ್ಕಾಗಿಯೇ ದೇವರ ಕಾಡು ಪ್ರದೇಶವನ್ನು ಮೊದಲು ತೆಗೆದುಕೊಂಡಿದ್ದಾರೆ. ವಲಸಿಗರನ್ನು ಹೊರದಬ್ಬಬೇಕೆನ್ನುವಾಗ ಸ್ಥಳೀಯರು ನಮಗೆ ಬೆಂಬಲ ಕೊಡುತ್ತಾರೆ, ಅರಣ್ಯ ವಾಸಿಗಳ ಐಕ್ಯತೆ ಮುರಿದು ಹೋಗುತ್ತದೆ, ಎನ್ನುವುದು ಅವರ ಚಿಂತನೆ. ಸಂಸ್ಕೃತಿಯ ಹೆಸರಿನಲ್ಲಿ ಅರಣ್ಯವಾಸಿಗಳನ್ನು ವಿಭಜಿಸುವುದು, ಸ್ಥಳೀಯರ ಭಾವನೆಗಳನ್ನು ಕೆರಳಿಸಿ ಅವರನ್ನು ಪ್ರಯೋಗಿಸಿಕೊಂಡು ವಲಸಿಗರೆಂದು ಅನ್ಯ ಭಾಷಿಗರನ್ನು ಹೊರದಬ್ಬುವುದು ಅನಂತರ ಸ್ಥಳೀಯರನ್ನು ದಬ್ಬುವುದು! ದೇವರ ಕಾಡಿನಲ್ಲಿ ಈ ಕಾರ್ಯಚರಣೆ ಯಶಸ್ವಿಯಾದ ನಂತರ ಈ ತಂತ್ರವನ್ನು ಇತರ ಅರಣ್ಯ ಪ್ರದೇಶಗಳಿಗೂ ವಿಸ್ತರಿಸುವುದು. ಇದು ಪರಿಸರವಾದಿಗಳೆನ್ನುವವರ ತಂತ್ರವೆನ್ನುವುದನ್ನು ಕೊಡಗಿನ ಸಮಾನ್ಯ ಜನತೆ ಅರ್ಥಮಾಡಿಕೊಳ್ಳಬೇಕು.

ಸಂಸ್ಕೃತಿಯ ರಕ್ಷಣೆಯ ಮಾತು ಕೇಳಿ ಬರುತ್ತಿದೆ. ಸಂಸ್ಕೃತಿ ಎನ್ನುವುದು ನಿಂತ ನೀರಲ್ಲ,



ಅದು ಕಾಲವನ್ನನುಸರಿಸಿ ನಿರಂತರ ಬದಲಾವಣೆಯಾಗುತ್ತದೆ.

1855ರಲ್ಲಿ ಮಡಿಕೇರಿಯಲ್ಲಿ ಇಂಗ್ಲೀಷ್ ಶಾಲೆಯನ್ನು ತೆರೆದಾಗ ಕೊಳವಂಡ ಮನೆಯ ಕಾರ್ಯಪ್ಪ ಎಂಬ ಯುವಕ ಆ ಶಾಲೆಗೆ ಸೇರಿದ್ದರು. ಇಂಗ್ಲೀಷ್ ಕಲಿಯುವುದು ತಮ್ಮ ಸಂಸ್ಕೃತಿಗೆ ವಿರೋಧವೆಂದು ಅಂದಿನ ಹಿರಿಯರು ಆಗ ಅದನ್ನು ವಿರೋಧಿಸಿದ್ದರು. ಆದರೆ ಇಂದು ಇಂಗ್ಲೀಷ್ ಶಾಲೆಗೆ ಸೇರುವುದು ಹೆಮ್ಮೆಯ, ಘನತೆಯ ಪ್ರತೀಕವೆಂದು ಪರಿಗಣಿಸಲಾಗುತ್ತಿದೆ. ಇಂಗ್ಲೀಷ್ ಶಾಲೆಗೆ ಸೇರದಿರುವುದೇ ಅಪರಾಧ ಎಂಬ ರೀತಿ ಕೀಳರಿಮೆಯಿಂದ ಕಾಣಲಾಗುತ್ತಿದೆ.

ಪ್ರಾರಂಭದಲ್ಲಿ ಕೊಡವ ಸಂಪ್ರದಾಯದಲ್ಲಿ ಬೆಳಕು ಹಚ್ಚಿ ಗುರು ಕಾರಣರನ್ನು ಮಾತ್ರವೇ ಪ್ರಾರ್ಥಿಸಲಾಗುತ್ತಿತ್ತು. ಅಂದು ಇನ್ಯಾವ ದೇವರ ವಿಗ್ರಹಾರಾಧನೆಯೂ ಸಂಸ್ಕೃತಿಯ ಭಾಗವಾಗಿರಲಿಲ್ಲ. ಆದರೆ ಇಂದು ಎಲ್ಲಾ ಹಿಂದೂ ದೇವತೆಗಳ ಆರಾಧನೆಯೂ ಕೊಡವ ಸಂಪ್ರದಾಯದ ಭಾಗವಾಗಿದೆ.

ಸಾಂಸ್ಕೃತಿಕ ಮೌಲ್ಯಗಳಲ್ಲಿ, ಆಚರಣೆಗಳಲ್ಲಿ ನಿರಂತರ ಬದಲಾವಣೆಗಳ ಬಗ್ಗೆ ಈ ರೀತಿಯ ಬೇಕಷ್ಟು ಉದಾಹರಣೆಗಳನ್ನು ಕೊಡಬಹುದು.

ಕೊಡಗಿನಲ್ಲಿ ತಲಾಂತರದಿಂದ ವಾಸಿಸುತ್ತಿರುವ ಅನ್ಯ ಭಾಷಿಗರನ್ನು 'ಅತಿಕ್ರಮಣ ಮಾಡಿಕೊಂಡಿರುವ ವಲಸೆಗಾರರು' ಎಂದು ವ್ಯಾಖ್ಯಾನಿಸುವುದು ಅಪಾಯಕಾರಿ ನಿಲುವಾಗುತ್ತದೆ. ಭಾರತದಲ್ಲಿ ನೆಲೆಸಿರುವ ಎಲ್ಲರೂ ಭಾರತೀಯರು. ಅವರವರು ಆಡುವ ಭಾಷೆಯನ್ನನುಸರಿಸಿ ಆಡಳಿತಾತ್ಮಕ ಮತ್ತು ಅಭಿವೃದ್ಧಿಯ ಕಾರಣಗಳಿಗಾಗಿ ರಾಜ್ಯಗಳು ರೂಪುಗೊಂಡಿವೆ. ಈ ಎಲ್ಲಾ ಭಾಷಿಗರೂ ಒಂದಾಗಿ ಭಾರತ ಆಗುತ್ತದೆ. ಭಾರತದ ಎಲ್ಲಾ ರಾಜ್ಯಗಳಿಗೂ ಒಂದಾಗಿ ದೇಶಕ್ಕೆ ಸಂವಿಧಾನವಿದ್ದು ಅದು ಭಾರತೀಯರು ದೇಶದ ಯಾವುದೇ ಭಾಗದಲ್ಲಿ ಜೀವಿಸಲೂ ಹಕ್ಕು ಕೊಟ್ಟಿದೆ. ಅದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಅಲ್ಲಗಳೆಯಲೆತ್ನಿಸುವುದು ರಾಷ್ಟ್ರೀಯ ಭಾವೈಕ್ಯತೆಗೆ ಧಕ್ಕೆ ತರುವಂತಹಾ ಕೃತ್ಯವಾಗುತ್ತದೆ, ಸಂವಿಧಾನ ವಿರೋಧಿ ವರ್ತನೆಯಾಗುತ್ತದೆ.

ನೆರೆ ಜಿಲ್ಲೆಯ ಸಾಮಾನ್ಯರು ಹಲವು ವರ್ಷಗಳಿಂದ ಇಲ್ಲಿ ವಾಸಿಸುತ್ತಿರುವವರು ತುಂಡು ನೆಲ ಕೈ ವಶಮಾಡಿಕೊಂಡವರನ್ನು ಅತಿಕ್ರಮಣ ಮಾಡಿರುವ ವಲಸೆಗಾರರು ಎಂದು ಚಿತ್ರಿಸುವವರು ಟಾಟಾ, ಮಹೇಂದ್ರರಂತಹವರು, ಜಯಲಲಿತ, ಚಿದಂಬರರಂತವರು ಕೊಡಗಿನ ಭೂಮಿಯನ್ನು ವಶಪಡಿಸಿಕೊಳ್ಳುವುದರ ಬಗ್ಗೆ ಏಕೆ ಮೌನವಾಗಿದ್ದಾರೆ?

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ವಿಶ್ವ ಬಂಡವಾಳಿಗರ ಸಮಾವೇಶದ ಸಂದರ್ಭ ಕೊಡಗಿನಲ್ಲಿ ಪ್ರವಾಸೋದ್ಯಮಕ್ಕಾಗಿ ಸುಮಾರು 10,000 ಕೋಟಿ ರೂ. ಬಂಡವಾಳ ಹೂಡಲು ಸಿದ್ಧರಾಗಿರುವ ಬಗ್ಗೆ ಏಕೆ ತುಟಿಪಿಟಿಕ್ ಎನ್ನುತ್ತಿಲ್ಲ? ಇದರಿಂದ ಕೊಡಗಿನ ಸಂಸ್ಕೃತಿ ಉಳಿಯುವುದೇ?

ಪ್ರತಿಯೊಂದು ಗ್ರಾಮದವರು ಪಕ್ಕದ ಗ್ರಾಮದವರನ್ನು, ಪ್ರತಿಯೊಂದು ತಾಲೂಕಿನವರು ಪಕ್ಕದ ತಾಲೂಕಿನವರನ್ನು, ಪ್ರತಿಯೊಂದು ಜಿಲ್ಲೆಯವರು ಪಕ್ಕದ ಜಿಲ್ಲೆಯವರನ್ನು, ಪ್ರತಿಯೊಂದು ರಾಜ್ಯದವರು ಪಕ್ಕದ ರಾಜ್ಯದವರನ್ನು, ಪ್ರತಿಯೊಂದು ಭಾಷಿಕರು ಪಕ್ಕದ ಅನ್ಯಭಾಷಿಗರನ್ನು ವಲಸಿಗರೆಂದು ಕರೆಯ ಹೊರಟು ಅವರ ಬಗ್ಗೆ ದ್ವೇಷ ಭಾವನೆಯನ್ನು ಹುಟ್ಟಿಸಿ ಬೆಳೆಸಹೊರಟರೆ ನಮ್ಮ ದೇಶದ ಅಖಂಡತೆಯ ಗತಿ ಏನಾದೀತು. ಈ ದೇಶ ನುಚ್ಚುನೂರಾಗದೇ, ಹೋಳು ಹೋಳಾಗದೇ.?

ಮಲೆಯಾಳಿಗಳು ವಲಸಿಗರೆಂದು ಅಪಥ್ಯರಾದರೆ ಮಲೆಯಾಳದಿಂದ ಬಂದ ದೇವತೆಗಳೂ ಅಪಥ್ಯರಾಗಬೇಕಾಗುತ್ತದೆ. ಆದರೆ ಕೊಡಗಿನಲ್ಲಿ ಆರಾಧಿಸುವ ದೇವತೆಗಳೆಲ್ಲರೂ ಕೇರಳದಿಂದ ಬಂದವರು, ಹೊರಗಿನವರಾಗಿದ್ದಾರೆ ಎಂದು ನೆನಪುಮಾಡಿಕೊಳ್ಳಬೇಕು.

ಕೊಡಗಿಗೆ ಹೊರ ಜಿಲ್ಲೆಗಳಿಂದ ಬರುತ್ತಿರುವ ವಲಸಿಗರಾದರೆ ಕೊಡಗಿನಿಂದ ಹೊರ ಹೋಗಿರುವವರೂ ಆ ಜಿಲ್ಲೆಗಳಲ್ಲಿ, ರಾಜ್ಯಗಳಲ್ಲಿ ವಲಸಿಗರೆನ್ನಿಸಿಕೊಳ್ಳುತ್ತಾರೆ.

ಕೊಡಗು ಕೊಡಗಾಗಿ ಉಳಿಯಬೇಕಿದ್ದರೆ ಕೊಡಗಿನಲ್ಲಿ ಆಡಳಿತ ಭಾಷೆಯಾಗಿ ಕೊಡಗಿನ ಭಾಷೆಗಳಾದ ಕೊಡವ, ಅರೆಕನ್ನಡ ಭಾಷೆಗಳನ್ನು ಕನ್ನಡದೊಂದಿಗೆ ಆಡಳಿತ ಭಾಷೆಯನ್ನಾಗಿ ಮಾಡಬೇಕು. ಕೃಷಿ ಜಿಲ್ಲೆಯಾದ ಕೊಡಗಿನ ಕೃಷಿ ಉಳಿಯಲು ಕಾಫಿ, ಬತ್ತ, ಕರಿಮೆಣಸುಗಳಿಗೆ ಸ್ಥಿರವಾಗಿ ಲಾಭದಾಯಕ ಬೆಲೆ ಸಿಕ್ಕಿ ಕೃಷಿ ರಂಗದಲ್ಲಿ ಇಂದು ಇರುವ ಅನಿಶ್ಚಿತತೆ ಕೊನೆಗೊಳ್ಳಬೇಕು. ಕೃಷಿಯನ್ನಾಧರಿಸಿಯೂ ಇತರ ವೃತ್ತಿಗಳವರಂತೆ ಜೀವಿಸಲು ಸಾಧ್ಯ ಎಂಬ ವಿಶ್ವಾಸ ರೈತರಲ್ಲಿ ಮೂಡಿ ಬರಬೇಕು. ಕೊಡಗಿನಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ಶಾಲೆ, ಆರೋಗ್ಯಕ್ಕಾಗಿ ಸರ್ಕಾರೀ ಆಸ್ಪತ್ರೆಗಳು ಹೆಚ್ಚಬೇಕು, ವಿದ್ಯುತ್ ಸರಬರಾಜು ಕಲ್ಪಿಸಬೇಕು. ಆಗ ಕೊಡಗಿನವರ್‍ಯಾರೂ ಕೊಡಗಿನಲ್ಲಿರುವ ಭೂಮಿ ಮಾರಿ ಕೊಡಗಿನಿಂದ ಹೊರ ಹೋಗಲಾರರು.

ಕೊಡಗಿನ ಸಂಸ್ಕೃತಿಯಲ್ಲಿ ಪುರೋಗಾಮಿ ಅಂಶಗಳನ್ನು ಎತ್ತಿ ಬೆಳೆಸಲು ಸರ್ಕಾರ ಮತ್ತು ಜನತೆ ಪ್ರೋತ್ಸಾಹಿಸಬೇಕು.

ರಾಜಕೀಯ ಪಕ್ಷಗಳವರು ತಕ್ಷಣದ ಲಾಭಕ್ಕಾಗಿ ಪ್ರದೇಶಿಕತೆ, ಅನ್ಯ ಭಾಷಾ ದ್ವೇಷಗಳಂತಹ ಐಕ್ಯಭಂಜಕ ವಿಚಾರಗಳಿಗೆ ಪ್ರತ್ಯಕ್ಷ, ಪರೋಕ್ಷ ಬೆಂಬಲ ಕೊಟ್ಟು ಪೋಷಿಸುವುದನ್ನು ನಿಲ್ಲಿಸಬೇಕು.

ವಿವಿಧ ಭಾಷೆಗಳು ಮತ್ತು ಸಂಸ್ಕೃತಿಗಳ ತವರೂರಾದ ಭಾರತದಲ್ಲಿ ಒಂದು ಭಾಷೆಯವರು ಇನ್ನೊಬ್ಬರನ್ನು, ಒಂದು ರಾಜ್ಯದವರು ಇನ್ನೊಂದು ರಾಜ್ಯದವರೆಂದು ಶೋಷಿಸುತ್ತಾರೆನ್ನುವುದು ಸತ್ಯವಲ್ಲ ಎಂದು ಮನಗಾಣಬೇಕು.

ಕೇರಳ ರಾಜ್ಯ ವಿಸ್ತರಣೆಗಾಗಿ ನಡೆಸುತ್ತಿರುವ ಒಂದು ಷಡ್ಯಂತ್ರವೆಂದು ಮಾತೊಂದನ್ನು ವಾಲ್ನೂರಿನಲ್ಲಿನಡೆದ ಸಭೆಯೊಂದರಲ್ಲಿ ಮೇಜರ್ ನಂದಾ ನಂಜಪ್ಪನವರು ಹೇಳಿದ್ದಾರೆಂದು ಕೊಡಗಿನ ಸ್ಥಳೀಯ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ. ಮಲೆಯಾಳ ಮಾತನಾಡುವವರ ಬಗ್ಗೆ ದ್ವೇಷ ಮೂಡಿಸುವ ಏಕೋದ್ದೇಶದಿಂದ ಅವರಂತಹಾ ಹಿರಿಯರೂ ಹಸಿಹಸಿ ಸುಳ್ಳೊಂದನ್ನು ಹೇಳುವ ಮಟ್ಟಕ್ಕೆ ಇಳಿದದ್ದು ತುಂಬಾ ಖೇದದ ವಿಷಯ. ಕೇರಳದ ಗರೀಬರ ಬಗ್ಗೆ ಕೊಡಗಿನಲ್ಲಿ ದ್ವೇಷ ಹುಟ್ಟಲೆಂದು ಇಂತಹ ಸುಳ್ಳನ್ನು ಪೋಣಿಸಿರುವ ಶ್ರೀಯುತರು ಟಾಟಾ, ಮಹೇಂದ್ರಗಳಂತಹ ಕಂಪನಿಗಳ ಬಗ್ಗೆ ಏಕೆ ಧ್ವನಿ ಎತ್ತುತ್ತಿಲ್ಲ ಎಂದು ವಿವರಿಸಬೇಕು?

ಬೆಳ್ತಂಗಡಿಯಲ್ಲಿ ಆದಿವಾಸಿ ಸಮಿತಿಯಿಂದ ಪ್ರತಿಭಟನೆ

ಕಡಲತಡಿ

ವರದಿ : ವಾ.ಉ.

ಮಲೆಕುಡಿಯರೇ ಮೊದಲಾದ ಆದಿವಾಸಿ ಬುಡಕಟ್ಟು ಜನಾಂಗದವರು ವಾಸಿಸುವ ಊರುಗಳಿಗೆ ರಸ್ತೆ, ಶಾಲೆ, ವಿದ್ಯುತ್ ಸಂಪರ್ಕ, ಆರೋಗ್ಯಸೇವೆ ಮೊದಲಾದ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಒತ್ತಾಯಿಸಿ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಮತ್ತು ಡಿವೈಎಫ್ಐ ತಾಲೂಕು ಸಮಿತಿಗಳ ಆಶ್ರಯದಲ್ಲಿ ಅಕ್ಟೋಬರ್.17, 2012 ರಂದು ಬೆಳ್ತಂಗಡಿಯ ಅರಣ್ಯ ಇಲಾಖೆ ವನ್ಯಜೀವಿ ವಿಭಾಗ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಸರಕಾರಗಳು ಮೂಲ ನಿವಾಸಿಗಳಿಗೆ ಹಲವು ಸೌಲಭ್ಯಗಳನ್ನು ನೀಡುವುದಾಗಿ ಒಂದು ಇಲಾಖೆಯ ವತಿಯಿಂದ ಘೋಷಿಸಿ, ಮತ್ತೊಂದು ಇಲಾಖೆಯ ಮೂಲಕ ಅದಕ್ಕೆ ಅವಕಾಶ ನಿರಾಕರಿಸುವ ನಾಟಕವಾಡಿ ಮೂಲ ನಿವಾಸಿಗಳನ್ನು ವಂಚಿಸುವ ಕಾರ್ಯ ಮಾಡುತ್ತಿವೆ ಎಂಬುದಾಗಿ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಡಿವೈಎಫ್ಐ ರಾಜ್ಯಾಧ್ಯಕ್ಷ ಎಸ್.ಎಲ್.ಭರತ್‌ರಾಜ್ ಟೀಕಿಸಿದರು. ನಕ್ಸಲ್ ಪೀಡಿತ ಪ್ರದೇಶಗಳ ಅಭಿವೃದ್ಧಿಗೆ ಸರಕಾರ ಕೂಡಲೇ ಕ್ರಮ ಕೈಗೊಳ್ಳದಿದ್ದರೆ ಉಗ್ರ ಹೋರಾಟ ಮುಂದುವರೆಸುವುದಾಗಿ ಅವರು ಎಚ್ಚರಿಕೆ ನೀಡಿದರು.

ಡಿವೈಎಫ್ಐ ದ.ಕ.ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ, ವಿಠಲ ಮಲೆಕುಡಿಯನನ್ನು ಕಾಲೇಜಿನಿಂದಲೇ ವಶಪಡಿಸಿ ಕೊಂಡೊಯ್ದ ಪೋಲೀಸರು ಆತ ನಕ್ಸಲ್ ಎಂದು ಆರೋಪಿಸಿದರು. ಆತನ ವಿದ್ಯಾಭ್ಯಾಸ ಮುಂದುವರಿಕೆಗೂ ವಂಚನೆ ಮಾಡಿದ ಪೋಲೀಸರು, ಇದೀಗ ಎಂಟು ತಿಂಗಳುಗಳೇ ಕಳೆದಿದ್ದರೂ ಇನ್ನೂ ಚಾರ್ಜ್‌ಶೀಟ್ ಸಲ್ಲಿಸಿರುವುದಿಲ್ಲ. ಆಗ ಪೋಲೀಸರ ಬಳಿ ಇದ್ದ ದಾಖಲೆಗಳು ಈಗ ಎಲ್ಲಿಗೆ ಹೋದವು ಎಂದು ಮುನೀರ್ ಪ್ರಶ್ನಿಸಿದರು. ಮೂಲ ನಿವಾಸಿಗಳನ್ನು ನಕ್ಸಲೀಯರಾಗಿಸುವ ಕೃತ್ಯದಲ್ಲಿ ಪೋಲೀಸರು ಮತ್ತು ಅರಣ್ಯ ಇಲಾಖೆಯವರು ತೊಡಗಿದ್ದಾರೆ ಎಂದು ಖಂಡಿಸಿ ಮಾತನಾಡಿದರು.

ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಮುಖಂಡರಾದ ಶಿವ ಕುಮಾರ್, ಬಿ.ಎಂ.ಭಟ್, ಆದಿವಾಸಿ ಹಕ್ಕುಗಳ ಸಮಿತಿಯ ಶೇಖರ ಲಾಯಿಲ, ವಸಂತ ನಡ, ಈಶ್ವರಿ, ವಿಠಲ ಮಲೆಕುಡಿಯ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಪ್ರತಿಭಟನಾ ಸ್ಥಳದಲ್ಲಿ ಪೋಲೀಸ್ ಬಂದೋಬಸ್ತ್ ಬಿಗಿಯಾಗಿತ್ತು. ಜಿಲ್ಲಾಧಿಕಾರಿ ನಕ್ಸಲ್ ಪೀಡಿತ ಪ್ರದೇಶಗಳಿಗಾಗಿ ಪ್ರಕಟಿಸಿದ ಅಭಿವೃದ್ಧಿ ಕಾಮಗಾರಿಗಳಿಗೆ ಅರಣ್ಯ ಇಲಾಖೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸುವ ಮನವಿಯನ್ನು ಅಧಿಕಾರಿಗಳಿಗೆ ಸಲ್ಲಿಸಲಾಯಿತು.

ಬಿಸಿಯೂಟ ನೌಕರರಿಂದ ಅಲ್ಲಲ್ಲಿ ಪ್ರತಿಭಟನೆ:

ಕಳೆದ ಎಂಟು ವರ್ಷಗಳಿಂದ ಕರ್ನಾಟಕ ರಾಜ್ಯ ಸರ್ಕಾರವು ಬಿಸಿಯೂಟ ನೌಕರರ ಬೇಡಿಕೆಗಳ ಬಗ್ಗೆ ನಿರ್ಲಕ್ಷ್ಯ ತಾಳಿದ ಪರಿಣಾಮವಾಗಿ ಅಕ್ಟೋಬರ್ 20 ರಂದು ಬೆಂಗಳೂರಿನಲ್ಲಿ ಬಿಸಿಯೂಟ ಕಾರ್ಮಿಕರ ರಾಜ್ಯ ಸಂಘಟನೆ (ಸಿಐಟಿಯು) ವತಿಯಿಂದ ಬೃಹತ್ ಪ್ರತಿಭಟನಾ ರ‍್ಯಾಲಿ ನಡೆಯಲಿರುವ ಹಿನ್ನೆಲೆಯಲ್ಲಿ ಅದಕ್ಕೂ ಹಿಂದಿನ ದಿನಗಳಲ್ಲಿ ದ.ಕ.ಜಿಲ್ಲೆಯಲ್ಲಿ ಅಲ್ಲಲ್ಲಿ ಬಿಸಿಯೂಟ ಕಾರ್ಮಿಕರು ಪ್ರತಿಭಟನೆ ನಡೆಸಿದರು.

ಬಿಸಿಯೂಟ ಕಾರ್ಮಿಕರ ವೇತನ ಏರಿಕೆಯ ಬಗ್ಗೆಯಾಗಲೀ, ಅವರ ಸೇವಾ ಭದ್ರತೆಯ ಬಗ್ಗೆಯಾಗಲೀ ಸರಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಶಾಲಾ ಶಿಕ್ಷಣಕ್ಕೆ ಸಂಬಂಧಿಸಿ ಪ್ರೊ.ಆರ್.ಗೋವಿಂದ ಅವರು ರಾಜ್ಯ ಸರಕಾರಕ್ಕೆ ಸಲ್ಲಿಸಿದ ವರದಿಯ ಪ್ರಕಾರ, ಕಡಿಮೆ ವಿದ್ಯಾರ್ಥಿಗಳುಳ್ಳ ಶಾಲೆಗಳನ್ನು ಸಮೀಪದ ಶಾಲೆಯೊಂದಿಗೆ ವಿಲೀನಗೊಳಿಸಬೇಕಾಗಿದೆ; ಬಿಸಿಯೂಟ ನೌಕರರನ್ನು ವರ್ಗಾವಣೆ ಮಾಡುವ ಮೂಲಕ ಕೆಲಸದಿಂದ ಕ್ರಮೇಣ ಕೈಬಿಡುವ ಹುನ್ನಾರವು ಇದರಲ್ಲಿದೆ. ದ.ಕ.ಜಿಲ್ಲೆಯಲ್ಲಿ ಬೀಡಿ ಉದ್ಯಮದ ಕುಸಿತದಿಂದಾಗಿ ನಿರುದ್ಯೋಗಿಗಳಾಗಿದ್ದ ಮಹಿಳಾ ಕಾರ್ಮಿಕರಿಗೆ ಆಸರೆಯಾಗಿದ್ದ ಬಿಸಿಯೂಟ ಯೋಜನೆ ಕೂಡಾ ಬಡ ಮಹಿಳೆಯರ ಕೈ ಜಾರುವ ಸಂಭವವಿದೆ. ಏಕೆಂದರೆ ಬಿಸಿಯೂಟ ಯೋಜನೆಯನ್ನು ಈಗಾಗಲೇ ಸರಕಾರ ಖಾಸಗಿಯವರಿಗೆ ನೀಡುವ ಉತ್ಸಾಹದಲ್ಲಿದೆ.

ಬಿಸಿಯೂಟ ಕಾರ್ಮಿಕರಿಗೆ ಸೇವಾ ಭದ್ರತೆ ಒದಗಿಸಬೇಕು; ಅವರಿಗೆ ತಿಂಗಳಿಗೆ ಕನಿಷ್ಟ ರೂ.10,000 ಗೌರವಧನ ನೀಡಬೇಕು;



ನೇಮಕಾತಿಯನ್ನು ಖಾಯಂಗೊಳಿಸಬೇಕು; ಇಎಸ್ಐ, ಭವಿಷ್ಯನಿಧಿ, ಸಂಬಳ ಸಹಿತ ಹೆರಿಗೆ ರಜೆ ಸೌಲಭ್ಯ ಕೊಡಬೇಕು; ಸೇವಾ ನಿಯಮಾವಳಿ ಜಾರಿಯಾಗಬೇಕು; ಯಾವುದೇ ಕಾರಣಕ್ಕೂ ಬಿಸಿಯೂಟವನ್ನು ಖಾಸಗೀಕರಣಗೊಳಿಸಬಾರದು ಎಂಬುದು ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಬಿಸಿಯೂಟ ಕಾರ್ಮಿಕರು ಈ ಪ್ರತಿಭಟನೆಯಲ್ಲಿ ಆಗ್ರಹಿಸಿರುತ್ತಾರೆ.

ಬಂಟ್ವಾಳ ಅಕ್ಷರ ದಾಸೋಹ ನೌಕರರ ಸಂಘದ ವತಿಯಿಂದ ಬಿ.ಸಿ.ರೋಡಿನಲ್ಲಿ ಅಕ್ಟೋಬರ್ 18 ರಂದು ಪ್ರತಿಭಟನಾ ಮೆರವಣಿಗೆ ನಡೆಸಿ ಬಳಿಕ ತಾಲೂಕು ಪಂಚಾಯತ್ ಕಚೇರಿಗೆ ಮುತ್ತಿಗೆ ಹಾಕಲಾಯಿತು. ಸಿಐಟಿಯು ಮುಖಂಡರಾದ ರಾಮಣ್ಣ ವಿಟ್ಲ, ಶೀನ ಬಂಗೇರ, ಬಿಸಿಯೂಟ ನೌಕರ ಸಂಘದ ಲಲಿತಾ ಕುಮಾರಿ, ರೇವತಿ ಕುಲಾಲ್, ಮೀನಾಕ್ಷಿ, ಸೌಮ್ಯ ಶೆಟ್ಟಿ, ಪ್ರೇಮಾ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಗುರುಪುರದಲ್ಲಿ ಅಕ್ಷರ ದಾಸೋಹ ಕಾರ್ಮಿಕರು ಅಕ್ಟೋಬರ್ 18 ರಂದು ಗುರುಪುರ ಕೈಕಂಭ ನಾಡ ಕಚೇರಿಯ ಎದುರು ಪ್ರತಿಭಟನೆ ನಡೆಸಿದರು. ಸಿಐಟಿಯು ಮುಂದಾಳುಗಳಾದ ಯು.ಬಿ.ಲೋಕಯ್ಯ, ಸದಾಶಿವ ದಾಸ್, ವಸಂತಿ, ಭವ್ಯಾ ಮತ್ತು ಮೋನಮ್ಮ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.

ಪುತ್ತೂರಿನಲ್ಲಿ ಅಕ್ಷರ ದಾಸೋಹ ಪುತ್ತೂರು ತಾಲೂಕು ಸಮಿತಿ ವತಿಯಿಂದ 19 ರಂದು ಅಲ್ಲಿನ ತಾಲೂಕು ಪಂಚಾಯತ್ ಕಚೇರಿಯ ಬಳಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನಾ ಸಭೆಗೂ ಮುಂಚೆ ಪುತ್ತೂರಿನ ಎನ್‌ಜಿಓ ಸಭಾಂಗಣದ ಬಳಿಯಿಂದ ತಾಲೂಕು ಪಂಚಾಯತ್ ಕಚೇರಿಯ ತನಕ ಪ್ರತಿಭಟನಾ ರ‍್ಯಾಲಿ ನಡೆಸಲಾಯಿತು. ಸಿಐಟಿಯು ರಾಜ್ಯ ಸಮಿತಿಯ ಸದಸ್ಯ ಬಿ.ಎಂ.ಭಟ್ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಿಐಟಿಯು ತಾಲೂಕು ಸಮಿತಿ ಕಾರ್ಯದರ್ಶಿ ಪಿ.ಕೆ.ಸತೀಶನ್ ಬಿಸಿಯೂಟ ನೌಕರರ ಸಂಘದ ತಾಲೂಕು ಅಧ್ಯಕ್ಷೆ ಜಯಂತಿ, ಕಾರ್ಯದರ್ಶಿ ಲಿಸಿ, ತಾಲೂಕು ಸಮಿತಿ ಸದಸ್ಯ ಕೇಶವ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ●

ತಲ್ಲೂರು: ಮನೆ ನಿವೇಶನ ರಹಿತರ ಬೃಹತ್ ಸಮಾವೇಶ

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಮತ್ತು ತಲ್ಲೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ನಿವೇಶನ ರಹಿತರ ಹೋರಾಟ ಸಮಿತಿಯ ನೇತೃತ್ವದಲ್ಲಿ ಮನೆ, ನಿವೇಶನ ರಹಿತರ ಬೃಹತ್ ಸಮಾವೇಶವು ತಲ್ಲೂರು ಗ್ರಾಮ ಪಂಚಾಯತ್ ಕಚೇರಿಯ ಬಳಿ ಯಶಸ್ವಿಯಾಗಿ ಜರುಗಿತು. ತಲ್ಲೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ತಲ್ಲೂರು ಮತ್ತು ಉಪ್ಪಿನಕುದ್ರು ಪ್ರದೇಶದ ಬಡ ನಿವೇಶನ ರಹಿತರಿಂದ ಸ್ವೀಕರಿಸಿದ 520 ಅರ್ಜಿಗಳನ್ನು ಸ್ಥಳೀಯ ಗ್ರಾಮ ಪಂಚಾಯತ್ ಅಧ್ಯಕ್ಷರಿಗೆ ಹಸ್ತಾಂತರಿಸಲಾಯಿತು. ಮನೆ, ನಿವೇಶನ ರಹಿತರ ಬೃಹತ್ ಸಮಾವೇಶವನ್ನು ಉದ್ಘಾಟಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಯಾದವ್ ಶೆಟ್ಟಿ ಮಾತನಾಡುತ್ತಾ ಬಾಲ ಸುಬ್ರಹ್ಮಣ್ಯ ಸಮಿತಿಯ ವರದಿಯಲ್ಲಿ ಹೇಳಿದಂತೆ ರಾಜ್ಯದಲ್ಲಿ 12,00,000 ಎಕ್ರೆ ಜಮೀನು ಒತ್ತುವರಿಯಾಗಿರುತ್ತದೆ. ಒತ್ತುವರಿ ಭೂಮಿಯನ್ನು ಸರ್ಕಾರ ಕೂಡಲೇ ವಶಕ್ಕೆ ತೆಗೆದುಕೊಂಡು ಬಡವರಿಗೆ ಹಂಚಬೇಕು. ಬಡವರು ಭೂಮಿಯ ಹಕ್ಕಿಗಾಗಿ ಹೋರಾಡುತ್ತಾರೆ, ಸರ್ಕಾರಗಳು, ಮಂತ್ರಿಗಳು ಭೂ ಕಬಳಿಕೆಯಲ್ಲಿ ತೊಡಗಿದ್ದಾರೆ. ನಿವೇಶನ ರಹಿತರಿಗೆ ಹಕ್ಕುಪತ್ರ ಕೊಡದಿದ್ದರೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟಕ್ಕೆ ಇಳಿಯಲಿದ್ದೇವೆ ಎಂದು ಸರ್ಕಾರವನ್ನು ಎಚ್ಚರಿಸಿದರು. ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ತಾಲೂಕು ಅಧ್ಯಕ್ಷ ರಾಜೀವ್ ಪಡುಕೋಣೆ, ಕಾರ್ಯದರ್ಶಿ ವೆಂಕಟೇಶ್ ಕೋಣಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಮನೆ, ನಿವೇಶನ ರಹಿತರ ರಾಜ್ಯಮಟ್ಟದ ಹೋರಾಟ ನವೆಂಬರ್ 5 ರಂದು ಎಲ್ಲಾ ಜಿಲ್ಲಾ ಮತ್ತು ತಾಲೂಕು ಕೇಂದ್ರದಲ್ಲಿ 'ಜೈಲ್ ಭರೋ' ಕಾರ್ಯಕ್ರಮದ ಮೂಲಕ ಹೋರಾಟ ನಡೆಸಲಾಗುವುದು. ಇದರ ಭಾಗವಾಗಿ ಕುಂದಾಪುರ ತಾಲೂಕು ಪಂಚಾಯತ್ ಕಚೇರಿಯನ್ನು ನವೆಂಬರ್ 5 ರಂದು ಮುತ್ತಿಗೆ ಹಾಕುವುದರ ಮೂಲಕ ತಾಲೂಕಿನಾದ್ಯಂತ ನಿವೇಶನ ರಹಿತರು ಹಕ್ಕುಪತ್ರಕ್ಕಾಗಿ ಒತ್ತಾಯಿಸಿ ಬಂಧನಕ್ಕೊಳಗಾಗುತ್ತಾರೆ ಎಂದು ತಿಳಿಸಿದರು. ತಲ್ಲೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ನಿವೇಶನ ರಹಿತರ ಹೋರಾಟ ಸಮಿತಿಯ ಸಂಚಾಲಕರಾದ ನೆಲ್ಲಿಕಟ್ಟೆ ಲಕ್ಷ್ಮಣ, ಚಂದ್ರ ಉಪ್ಪಿನಕುದ್ರು, ಲಕ್ಷ್ಮಣ ಪೂಜಾರಿ, ಚಂದ್ರ ಪೂಜಾರಿ, ಕೃಷ್ಣ ದೇವಾಡಿಗ, ಸಂತೋಷ ಪೂಜಾರಿ, ಹಟ್ಟಿಯಂಗಡಿ ಗ್ರಾಮ ಪಂಚಾಯತ್ ಸದಸ್ಯ ಅಶೋಕ ದೇವಾಡಿಗ ಹಾಗೂ ಸಿಐಟಿಯು ತಾಲೂಕು ಅಧ್ಯಕ್ಷ ಎಚ್. ನರಸಿಂಹ ಉಪಸ್ಥಿತರಿದ್ದರು. ●

ಜನಶಕ್ತಿ
ಕನ್ನಡ ವಾರಪತ್ರಿಕೆ

ಮಹಿಳೆಯ ಬಾಳಿನ ಗೋಳಿಗೆ ಕೊನೆ ಇಲ್ಲವೇ ?

ಕೆ.ಎಸ್. ಲಕ್ಷ್ಮಿ

ಹೆಚ್ಚುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯಗಳ ಕುರಿತು ಲೇಖನ ಬರೆಯಲು ಕುಂತಾಗ ಕಾಡಿದ ಪ್ರಶ್ನೆ, ದೌರ್ಜನ್ಯದ ಸ್ವರೂಪವನ್ನು ವ್ಯಾಖ್ಯಾನಿಸುವುದು ಹೇಗೆ? ಕಾನೂನಿನ ನಿಘಂಟಿನಲ್ಲಿ ಸುಲಭ ವ್ಯಾಖ್ಯಾನ ಸಿಗಬಹುದಾದರೂ, ಆ ವ್ಯಾಖ್ಯಾನದ ಪರಿಮಿತಿ ತುಂಬಾ ಸೀಮಿತವಾದುದ್ದು. ಹಿಂಸೆಯ ಆಗಾಧತೆಯನ್ನು ಅಳೆಯಲು ವೈಜ್ಞಾನಿಕ ಮಾಪನಗಳೇ ಇಲ್ಲದಿರುವಾಗ ಸರಳ ವ್ಯಾಖ್ಯಾನಗಳ ಮೂಲಕ ವಿಶ್ಲೇಷಿಸುವುದು ಅಪೂರ್ಣವೇ ಸರಿ. ಮಹಿಳೆಯರ ಬಹುಮುಖಿ ಸಮಸ್ಯೆಗಳು, ಬಹುಮುಖಿ ಆಯಾಮದೊಂದಿಗೆ ಬೆಸೆದು ಕೊಂಡಿದ್ದು, ಬಹುಮುಖಿ ಪರಿಹಾರಗಳನ್ನು ಖಾತ್ರಿಗೊಳಿಸುವ ರಾಜಕೀಯ ಇಚ್ಚಾಶಕ್ತಿಯ ಕೊರತೆ ಆಳುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಎದ್ದು ಕಾಣುತ್ತದೆ.

ಇತ್ತೀಚೆಗೆ ಬಾಗೇಪಲ್ಲಿಯ ಪಾತಪಾಳ್ಯದಲ್ಲಿ ಮಹಿಳೆಯರ ಸಭೆ ನಡೆಯುವಾಗ ಮುಸ್ಲಿಂ ಮಹಿಳೆಯೊಬ್ಬರು, "ಮೇಡಂ, ತಾಯಿಯಾದವರ ಕಷ್ಟ ಬೇರೆ ಯಾರಿಗೂ ಬೇಡ, ಊರಲ್ಲಿ ಬರ, ಕೂಲಿ ಕೆಲಸ ಕಡಿಮೆ, ರೇಷನ್ ಅಂಗಡಿಗಳಲ್ಲಿ ಕೊಡುವ ತಲಾ 4 ಕೆ.ಜಿ. ಅಕ್ಕಿಯಿಂದ ಮಕ್ಕಳ ಹೊಟ್ಟೆಯನ್ನು ತುಂಬಿಸಲಾಗುತ್ತಿಲ್ಲ. ಮಕ್ಕಳು ಊಟಕ್ಕೆ ಕುಂತು ಇನ್ನೊಂದು ಸಲಿ ಅನ್ನ ಹಾಕಮ್ಮ ಅಂದರೆ ಕರುಳೇ ಕಿತ್ತು ಬರುವಂಗಾಗುತ್ತೆ" ಎಂದು ಹೇಳಿಕೊಳ್ಳುತ್ತಾ ಅಸಂಖ್ಯಾತ ಬಡ ತಾಯಂದಿರ ಪ್ರತಿನಿಧಿಯಾಗಿ ನಿಲ್ಲುತ್ತಾಳೆ.



ಬೆಂಗಳೂರಿನ ಬಿಬಿಎಂಪಿಯಲ್ಲಿ ದಿನಗೂಲಿಯಾಗಿರುವ ಅನಿತಾ ಮಗಳು ಸೌಮ್ಯಗೆ ಮೂಳೆಯ ಕ್ಯಾನ್ಸರ್. ಚಿಕಿತ್ಸೆ ಕೊಡಿಸಲು ಬಿಪಿಎಲ್ ರೇಷನ್ ಕಾರ್ಡು ಇಲ್ಲ. ಯಶಸ್ವಿನಿ ಕಾರ್ಡು ಸಹ ಇಲ್ಲ. "ಆರಂಭದ ವೈದ್ಯಕೀಯ ವೆಚ್ಚಗಳಿಗೆ ಕನಿಷ್ಠ 60 ರಿಂದ 80 ಸಾವಿರ ರೂ. ಬೇಕು, ಮಾರಿಕೊಳ್ಳಲು ಆಸ್ತಿಪಾಸ್ತಿಯೂ ಇಲ್ಲ. ಕಣ್ಣಮುಂದೆ ಮಗಳ ಸಂಕಟ ನೋಡುವುದಕ್ಕಿಂತ ಈ ಜೀವನ ಸಾಕು ಮಾಡಿಕೊಳ್ಳೋಣ ಅಂತ ಪದೇ ಪದೇ ಮನಸ್ಸು ಹೇಳುತ್ತಿದೆ ಮೇಡಂ" ಎಂದು ಕಣ್ಣೀರಿಡುವ ಅನಿತಾಳ ಸಂಕಟ.

ತನ್ನ ಹದಿನಾರು ವರ್ಷದ ಅಂಗವಿಕಲ ಮತ್ತು ಮಾನಸಿಕ ಅಸ್ವಸ್ಥ ಮಗು ತನಗೂ ಮುನ್ನ ಕಣ್ಣು ಮುಚ್ಚಬೇಕು. ಇದೊಂದೆ ದೇವರಲ್ಲಿ ನನ್ನ ಪ್ರಾರ್ಥನೆ. ಅವನಿಗೂ ಮುನ್ನ ನಾನು ಸತ್ತರೆ ನನ್ನ ಮಗುವನ್ನು ಯಾರು ನೋಡುತ್ತಾರೆ ಎಂದು ಕಣ್ಣೀರಿಡುವ ಮನೆಗೆಲಸ ಮಾಡುವ ಗೆಳತಿ ಅಲಮೇಲು.

"ಮೇಡಂ, ಜೀವನ ತುಂಬಾ ಕಷ್ಟವಾಗುತ್ತಿದೆ. 3 ತಿಂಗಳಿಂದ ಮಕ್ಕಳಿಗೆ ಸ್ಕೂಲ್ ಫೀಜ್ ಕಟ್ಟಿಲ್ಲ. ನಾನು ಅವರ ಹೊಟ್ಟೆ ನೋಡಲಾ.., ಇಲ್ಲ ಶಾಲೆ ನೋಡಲಾ..ಏನ್ ಮಾಡಕಾಗುತ್ತೆ ಹೇಳಿ. ಮೊದಲು ಹೊಟ್ಟೆ ಅಲ್ವ ಮೇಡಂ. ಇನ್ನೂ ಸ್ವಲ್ಪ ದಿನ ನೋಡ್ತೀನಿ. ಶಾಲೆ ಫೀಸ್ ಕಟ್ಟಕಾಗಲ್ಲ ಅಂದ್ರೇ ಶಾಲೆ ಬಿಡಿಸಿ ಕೂಲಿಗಾಕ್ತೀನಿ" ಎಂದು ಹೇಳಿಕೊಳ್ಳುವ ಫ್ಯಾಕ್ಟರಿಯ ದಿನಗೂಲಿ ಕಾರ್ಮಿಕ ದಂಪತಿ.

ಈ ಹಿಂಸೆಯ ಮುಖಗಳು ದಾಖಲೆಗಳು ಎನ್‌ಸಿಆರ್‌ಬಿ ವರದಿಗಳಲ್ಲಿ ಕಾಣುವುದಿಲ್ಲ. ಯಾಕೆಂದರೆ, ಈ ಹಿಂಸೆಯ ವಿರುದ್ಧ ಎಲ್ಲಿಯೂ ದೂರು ದಾಖಲಾಗಿರುವುದಿಲ್ಲ. ಷೇರು ಮಾರುಕಟ್ಟೆ ಆಧಾರಿತ ಅಭಿವೃದ್ಧಿಯೇ ನಿಜವಾದ ಅಭಿವೃದ್ಧಿ ಎಂದು ಹೇಳಿಕೊಳ್ಳುವ ಆಳುವ ಸರ್ಕಾರಗಳಿಗೆ ಜನರ ಜೀವನ ಮಟ್ಟ ಮಹಿಳೆಯರ ಸ್ಥಿತಿಗತಿಗಳು ಎಂದೂ ಅಳತೆಗೋಲಾಗಿರುವುದಿಲ್ಲ. ಇಂತಹ ಜನವಿರೋಧಿ ನೀತಿಗಳ ದೌರ್ಜನ್ಯಗಳು ಇವುಗಳಾದರೆ ದೌರ್ಜನ್ಯದ ಇನ್ನೊಂದು ಮುಖ ಸಮಾಜದ ಆರ್ಥಿಕ ಸಾಮಾಜಿಕ ಸಂರಚನೆಯೊಂದಿಗೆ ಬೆಸೆದು ಕೊಂಡಿರುವ ಪಾಳೇಗಾರಿ ಮೌಲ್ಯಗಳಿಂದ ಪ್ರೇರಿತಗೊಂಡ ದೌರ್ಜನ್ಯಗಳು. ಇಂದಿಗೂ ಲಿಂಗ ತಾರತಮ್ಯ, ಜಾತಿ ತಾರತಮ್ಯ, ಹೆಣ್ಣು ಭ್ರೂಣಹತ್ಯೆ, ವರದಕ್ಷಿಣೆ, ಕೌಟುಂಬಿಕ ದೌರ್ಜನ್ಯಗಳನ್ನು ಮಹಿಳೆಯ ವಿಭಾಗೀಯ ಪ್ರಶ್ನೆಗಳಾಗಿಯೂ ನೋಡಲಾಗುತ್ತಿದೆ. ಈ ಪ್ರಶ್ನೆಗಳು ದೇಶದ ಅಭಿವೃದ್ಧಿಯ ನೇರ ಪ್ರಶ್ನೆಗಳಾಗಿದ್ದು ಎಲ್ಲಿಯವರೆಗೆ ಮಹಿಳೆಯರನ್ನು ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಸಬಲರನ್ನಾಗಿಸಲಾರೆವೋ ಅಲ್ಲಿಯವರೆಗೆ ಪರಿಪೂರ್ಣ ಅಭಿವೃದ್ಧಿಯನ್ನು ಸಾಧಿಸಲಾಗದು ಎಂಬುದನ್ನು ಸರ್ಕಾರಗಳು ಅರ್ಥ ಮಾಡಿಕೊಳ್ಳ ಬೇಕಾಗಿದೆ.

ಸಂವಿಧಾನ ಮಹಿಳೆಯರಿಗೆ ಸಮಾನ ಪೌರತ್ವ ಹಕ್ಕುಗಳನ್ನು ನೀಡಿದ್ದರೂ ಸಂವಿಧಾನದ ಆಶಯಗಳನ್ನು ಸಮರ್ಪಕವಾಗಿ ಜಾರಿಗೆ ತರುವಲ್ಲಿ ಕಾರ್ಯಾಂಗದೊಳಗಿನ ಕೊರತೆಗಳು ಅಥವಾ ವಿಫಲತೆಯಿಂದ ಅಸಮಾನತೆಯ ಆಧಾರಿತ ಹಿಂಸೆ ಇಂದಿಗೂ ನಗರ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಾ ವರ್ಗದ ಜನರ ನಡುವೆಯೂ ಒಪ್ಪಿತ ಮೌಲ್ಯವಾಗಿರುವುದನ್ನು ಕಾಣಬಹುದು.

ಉದಾ :- ಗಂಡನಿಂದ ವರ್ಷಗಟ್ಟಲೆ ಹಿಂಸೆಗೆ ಒಳಗಾದ ಮಹಿಳೆ ದೂರು ದಾಖಲಿಸಲು ಪೊಲೀಸ್ ಠಾಣೆಗೆ ಹೋದರೆ, "ಗಂಡ ತಾನೇ ಹೊಡೆದದ್ದು, ಅಡುಗೆ ಸರಿಯಾಗಿ ಮಾಡಕ್ಕಾಗಲ್ವ" ಎಂದು ಕೇಳುವ ಪೊಲೀಸ್ ಇನ್ಸ್‌ಪೆಕ್ಟರ್, ಸಾಮೂಹಿಕ ಅತ್ಯಾಚಾರಕ್ಕೆ ಸಂಬಂಧಿಸಿ ಮಹಿಳಾ ಸಂಘಟನೆಗಳ ನಿಯೋಗ ಪೊಲೀಸ್‌ರನ್ನು ಭೇಟಿ ಮಾಡಿದ ಪ್ರಕರಣ ಒಂದರಲ್ಲಿ ಇನ್ಸ್‌ಪೆಕ್ಟರ್ ಹೇಳಿದ್ದು "ಏನೇ ಆಗ್ಲಿ ಮೇಡಂ, ಆ ಹುಡುಗಿಗೆ ಹೀಗಾಗಬಾರದ್ದಿತ್ತು. ಮೇಡಂ ಏನು ಅನ್ನೋಬೇಡಿ, ಹೆಣ್ಣಮಕ್ಕಳು ಎಂತದೆಂತದೊ ಡ್ರೆಸ್ ಹಾಕೊಳ್ಳೋದು ಸರಿಯಲ್ಲ. ರಾತ್ರಿ ವೇಳೆ ಯಾಕೆ ಮೇಡಂ ಓಡಾಡಬೇಕಿತ್ತು ?" ಅಂತ ಕೇಳುತ್ತಿರುವುದು ನೋಡಿ ಅತ್ಯಾಚಾರ ಮಾಡಿದವರಿಗಿಂತ ಅತ್ಯಾಚಾರಕ್ಕೆ ಒಳಗಾದವರನ್ನೇ ಗುರಿಯಾಗಿಸುವಂತಿತ್ತು. ಇತ್ತೀಚೆಗೆ ಕರ್ನಾಟಕ ರಾಜ್ಯದ ಹೈಕೋರ್ಟ್ ವಿಭಾಗೀಯ ಪೀಠದ ನ್ಯಾಯಮೂರ್ತಿಗಳೊಬ್ಬರು ವಿಚಾರಣೆ ವೇಳೆ "ಒಂಭತ್ತು ತಿಂಗಳು ಮಗುವನ್ನು ಗರ್ಭದಲ್ಲಿಟ್ಟುಕೊಂಡು ಮಗುವಿಗೆ ಜನ್ಮ ನೀಡಿ ಹೆರಿಗೆ ನೋವು ಸಹಿಸಿಕೊಂಡವರಿಗೆ ಗಂಡನ ಹಿಂಸೆ ಸಹಿಸಿಕೊಳ್ಳಲಾಗದೆ?" ಎಂದು ಪ್ರಶ್ನಿಸಿದ್ದು ರಾಷ್ಟ್ರವ್ಯಾಪಿ ಟೀಕೆಗೆ ಒಳಗಾಗಿ ಕೊನೆಗೆ ನ್ಯಾಯಮೂರ್ತಿಗಳು ಸ್ಪಷ್ಟೀಕರಣ ನೀಡುವಂತಾಯಿತು. ಕುಟುಂಬದೊಳಗೆ ಯಜಮಾನಿಕೆ ಎಂಬುದೇ ಇರಬಾರದು. ಯಾರು ಯಾರ ಮೇಲೂ ದೌರ್ಜನ್ಯವೆಸಗಬಾರದು ಎಂದು ಹೇಳುತ್ತಿರುವಾಗಲೇ ಒಂದೊಮ್ಮೆ ಮಹಿಳೆಯೊಬ್ಬರು ಗಂಡನ ಮೇಲೆ ದೌರ್ಜನ್ಯವೆಸಗಿದರೆ ಸಹಿಸಿಕೊ ಎಂದು ಪುರುಷನಿಗೆ ಗೀತೋಪದೇಶ ಹೇಳುತ್ತಿದ್ದರೆ? ಖಂಡಿತ ಇಲ್ಲ. ಇಂತಹ ಉಪದೇಶಗಳ ಹಿಂದೆ ವ್ಯವಸ್ಥಿತ ಪಾಳೇಗಾರಿ ಸಿದ್ಧಾಂತ ಇದೆ. ಮಹಿಳೆ ಎದುರಿಸುವ ಪ್ರತಿ ದೌರ್ಜನ್ಯ ಮತ್ತು ಶೋಷಣೆಯ ಹಿಂದೆ ಇರುವ ಪಾಳೇಗಾರಿ ಸಿದ್ಧಾಂತವನ್ನು ಸೈದ್ಧಾಂತಿಕವಾಗಿ ಮತ್ತು ಸಂಘಟನಾತ್ಮಕವಾಗಿ ಎದುರಿಸಲು ಸನ್ನದ್ಧರಾಗಬೇಕಿದೆ. ಇಂತಹ ಪಾಳೇಗಾರಿ ವರ್ಗಗುಣ ಹೊಂದಿರುವ ರಾಜಕೀಯ ಪಕ್ಷಗಳು ಮಹಿಳೆಯ ಮೇಲಿನ ದೌರ್ಜನ್ಯವನ್ನು ಹೇಗೆ ತಡೆಗಟ್ಟಿಯಾರು? ಇದಕ್ಕೊಂದು ನಿದರ್ಶನ ಇತ್ತೀಚೆಗೆ ಕೇಂದ್ರ ಸಚಿವ ಜೆಸ್‌ಬಾಲ್‌ರವರು ಉತ್ತರ ಪ್ರದೇಶದ ಖಾನ್‌ಪುರದಲ್ಲಿ ವಿದ್ಯಾರ್ಥಿನಿಯರ ಕಾಲೇಜಿನಲ್ಲಿ ಕ್ರಿಕೆಟ್ ವಿಜಯೋತ್ಸವವನ್ನು ಮದುವೆಗೆ ಹೋಲಿಸಿ ಆಡಿದ ಮಾತು. "ವಿಜಯೋತ್ಸವ ಅಲ್ಪಕಾಲದ ಸಂಭ್ರಮ, ಹಾಗೆಯೇ ಮದುವೆ ಕೂಡ. ಮದುವೆಯಾಗಿ ಹೊಸತರಲ್ಲಿ ಇರುವ ಸಂಭ್ರಮ ಹೆಂಡತಿಗೆ ವಯಸ್ಸಾದಂತೆ ಕಡಿಮೆ ಆಗುತ್ತೆ. ವಯಸ್ಸಾದ ಹೆಂಡತಿಯಿಂದ ಮಜಾ ಸಿಗೋದಿಲ್ಲ" ಎಂದರು ಕೇಂದ್ರ ಸಚಿವರು. ಈ ಮಾತಿಗೆ ದೇಶವ್ಯಾಪಿ ಪ್ರತಿರೋಧ ಕಂಡು ಬಂದರೂ ಕಾಂಗ್ರೆಸ್ ಪಕ್ಷ ಮತ್ತು ಇತರ ಪಕ್ಷಗಳು ಕನಿಷ್ಠ ಪ್ರತಿಕ್ರಿಯೆಯನ್ನೂ ನೀಡದಿರುವುದನ್ನು ಗಮನಿಸಬಹುದು.

ಅದೇ ರೀತಿ ರಾಜ್ಯದಲ್ಲಿ ಶಾಸಕ ರಘುಪತಿ ಭಟ್ ಅವರ ಹೆಂಡತಿ ಅಸಹಜ ಸಾವಿಗೆ ಈಡಾದಾಗ, ಸಚಿವ ಹಾಲಪ್ಪ ಗೆಳೆಯನ ಪತ್ನಿಯ ಮೇಲೆ ಅತ್ಯಾಚಾರ ಎಸಗಿದಾಗ, ಸಚಿವ ರೇಣುಕಾಚಾರ್ಯ ಪತ್ನಿ ಇರುವಾಗಲೇ ಇನ್ನೊಬ್ಬ ಮಹಿಳೆಯನ್ನು ಬಯಸಿ ಆಕೆಗೆ ಲೈಂಗಿಕ ಕಿರುಕುಳ ನೀಡಿದಾಗ, ಸಂಪುಟದ ಸಚಿವರೇ ಸದನದಲ್ಲಿ ಕುಳಿತು ಬ್ಲೂ ಫಿಲ್ಮಂ ವಿಕ್ಷಿಸಿ ಸಿಕ್ಕಿಬಿದ್ದಾಗ, ಈ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸದಿರುವುದನ್ನು ಕಾಣುತ್ತೇವೆ.

ಇದರೊಂದಿಗೆ ವಿಶ್ವ ಬಂಡವಾಳದ ಹರಿವು ಸಾರ್ವಜನಿಕ ಉದ್ದಿಮೆಗಳನ್ನು ದುರ್ಬಲಗೊಳಿಸುತ್ತಿದ್ದು, ವಿದೇಶಿ ಖಾಸಗಿ ಬಂಡವಾಳಗಾರರನ್ನು ಪ್ರೋತ್ಸಾಹಿಸಲಾಗುತ್ತಿದೆ ಮತ್ತು ಸಂರಕ್ಷಿಸಲಾಗುತ್ತಿದೆ. ಈ ವಲಯಗಳು ಕಾರ್ಮಿಕ ಇಲಾಖೆಯ ಮತ್ತು ಕಾನೂನಿನ ನಿರ್ದೇಶನಗಳನ್ನೇ ಗಾಳಿಗೆ ತೂರಿ ವ್ಯವಹರಿಸುತ್ತಿರುವಾಗ ಅಲ್ಲಿ ಸಾಮಾಜಿಕ ನ್ಯಾಯ, ಸಮಾನತೆಯ ಮಾತುಗಳಿಗೆ ಅರ್ಥವೇ ಸಿಗುವುದಿಲ್ಲ. ಅಕರ್ಷಣೆಯ ಸಂಬಳಗಳ ಹಿಂದಿನ ಮಹಿಳೆಯರ ಅಭದ್ರತೆ ಹಲವು ನಮೂನೆಯ ದೌರ್ಜನ್ಯದ ಪ್ರಕರಣಗಳನ್ನು ಅತ್ಯಂತ ವ್ಯವಸ್ಥಿತವಾಗಿ ಮಾಡಿ ಅದನ್ನು ಪ್ರಶ್ನಿಸಿದರೆ, ಮಾಧ್ಯಮಕ್ಕೆ ಪ್ರತಿಕ್ರಿಯೆಯನ್ನು ನೀಡಿದರೆ ಕೆಲಸವನ್ನೇ ಕಳೆದುಕೊಳ್ಳುವ ಭೀತಿಯ ನಡುವೆ ಅದೆಷ್ಟೋ ಹೆಣ್ಣುಮಕ್ಕಳ ಕಣ್ಣೀರ ಕಥೆಯಿದೆ. ರಾಷ್ಟ್ರವ್ಯಾಪಿಯಾಗಿ ಎಡಪಕ್ಷಗಳು ಮತ್ತು ಮಹಿಳಾ ಚಳುವಳಿಗಳಿಂದಾಗಿ ಬಂಡವಾಳಶಾಹಿ ತನ್ನ ಅಸ್ತಿತ್ವಕ್ಕಾಗಿ ಕೆನೆ ಪದರದ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಿ ಕೆಲ ಮಹಿಳಾ ಪರ ಕಾನೂನುಗಳನ್ನು ತಂದಿದ್ದರೂ. ಅವುಗಳನ್ನು ಸಮರ್ಪಕವಾಗಿ ಜಾರಿಗೊಳಿಸಲು ಮತ್ತು ಪೂರಕ ವಾತಾವರಣ ನಿರ್ಮಿಸುವಲ್ಲಿನ ಇಚ್ಛಾಶಕ್ತಿಯ ಕೊರತೆ ಈ ಅವಧಿಯಲ್ಲಿ ಮಹಿಳೆಯರ ಮೇಲಿನ ಅಪರಾಧಗಳನ್ನು ತೀವ್ರಗೊಳಿಸಿದೆ.

ಪುಟ 15 ಕ್ಕೆ

ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಭ್ರಷ್ಟಾಚಾರದ ಪರಂಪರೆಯನ್ನು ಮುಂದುವರೆಸುವ ದಾರಿಯಲ್ಲಿ ಸಾಗಿರುವಂತೆ ಕಾಣುತ್ತಿದೆ. ಬಿಜೆಪಿಯ ಈಗಿನ ಅಧ್ಯಕ್ಷರು ಹಿಂದಿನ ಒಬ್ಬ ಅಧ್ಯಕ್ಷರ ಪದಚಿಹ್ನೆಗ್ಗಳಲ್ಲಿ, ಹಿಮಾಚಲದ ಕಾಂಗ್ರೆಸ್ ಕೇಂದ್ರ ಮಂತ್ರಿ ಅದೇ ರಾಜ್ಯಕ್ಕೆ ಸೇರಿದ್ದ ಹಿಂದಿನ ಒಬ್ಬ ಕೇಂದ್ರ ಮಂತ್ರಿಯ ಪದಚಿಹ್ನೆಗಳಲ್ಲಿ ಸಾಗಿರುವಂತೆ ಕಾಣುತ್ತಿದೆ. ಆದರೆ ಎರಡಕ್ಕೂ ಬೆಲೆ ತೆರಬೇಕಾದವರು ಮಾತ್ರ ನಮ್ಮ ಜನಸಾಮಾನ್ಯರು. ಆದ್ದರಿಂದ ಇಲ್ಲಿ ಭ್ರಷ್ಟಾಚಾರ ಎಂಬುದು 'ಕೆಡುಕಿನ' ಮೇಲೆ 'ಒಳಿತಿನ' ವಿಜಯದ ನೈತಿಕ ಪ್ರಶ್ನೆ ಮಾತ್ರವಲ್ಲ, ಅದು ಜನಸಾಮಾನ್ಯರ ಬದುಕನ್ನು ಉತ್ತಮಗೊಳಿಸಬೇಕಾದ ದೇಶದ ಹಣದ, ಸಂಪನ್ಮೂಲಗಳ ಲೂಟಿಯನ್ನು ತಡೆಯುವ ಪ್ರಶ್ನೆ ಕೂಡ. ಇಂತಹ ಲೂಟಿಗೆ ಮಹಾದ್ವಾರವನ್ನು ತೆರೆದು ಕೊಟ್ಟಿರುವ ನವ-ಉದಾರವಾದಿ ನೀತಿಗಳನ್ನು ಹಿಮ್ಮೆಟ್ಟಿಸದೆ ಭ್ರಷ್ಟಾಚಾರದ ರಾವಣನ ಸಂಹಾರ ಸಾಧ್ಯವಿಲ್ಲ. ಪೂರ್ಣ ಅರ್ಥದಲ್ಲಿ 'ಕೆಡುಕಿನ' ಮೇಲೆ 'ಒಳಿತಿನ' ವಿಜಯ ಸಾಧ್ಯವಿಲ್ಲ.

ಸೀತಾರಾಂ ಯೆಚುರಿ



ಭ್ರಷ್ಟಾಚಾರದ ರಾವಣನ ಸಂಹಾರ ಇನ್ನೂ ಆಗಿಲ್ಲ

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ವಿಜಯ ದಶಮಿ ಆಚರಣೆ ಮುಗಿದಿದೆ. ನಮ್ಮ ಜನತೆಯ ಒಂದು ದೊಡ್ಡ ವಿಭಾಗ ಮತ್ತೊಮ್ಮೆ ಕೆಡುಕಿನ ಮೇಲೆ ಒಳಿತಿನ ಪೌರಾಣಿಕ ವಿಜಯದ ಆಚರಣೆ ನಡೆಸಿದ್ದಾರೆ. ಇಲ್ಲೊಂದು ವಿಡಂಬನೆಯನ್ನು ಗಮನಿಸದಿರಲು ಸಾಧ್ಯವಿಲ್ಲ. ಈ ವಿಡಂಬನೆಯಿರುವುದು ನಮ್ಮ ಸಮಕಾಲೀನ ವಾಸ್ತವತೆಯಲ್ಲಿ- ಇಲ್ಲಿ ರಾವಣನ ಹತ್ತು ತಲೆಗಳೂ ಕಮ್ಮಿಯೇ- ಆ ಸಂಖ್ಯೆಯನ್ನು ಎಂದೋ ದಾಟಿ ಭ್ರಷ್ಟಾಚಾರದ ಕೆಡುಕುಗಳು ಮತ್ತೆ ಮತ್ತೆ ತಲೆ ಎತ್ತುತ್ತಲೇ ಇವೆ. ರಾವಣನ ಸಾವು ಕೆಡುಕಿನ ಮೇಲೆ ಒಳಿತಿನ ವಿಜಯದ ಸಂಕೇತ- ಆದರೆ ಇಲ್ಲಿ ನಮ್ಮ ವ್ಯವಸ್ಥೆಯಿಂದ ಭ್ರಷ್ಟಾಚಾರವನ್ನು ಮೂಲೋತ್ಪಾಟನೆ ಸಾಧ್ಯವೇ ಇಲ್ಲವೇನೋ ಎಂದನಿಸುತ್ತಿದೆ.

ಚಮಚಾ ಬಂಡವಾಳಶಾಹಿಗೆ ಪ್ರಕೃತಿ ನಿಯಮದ ಬಂಧನವೂ ಇಲ್ಲ. ಚಳಿಗಾಲ ಕಾಲಿಡುತ್ತಿದ್ದರೂ ಅದು ಪೂರ್ಣವಾಗಿ ಅರಳಿ ನಿಂತಿದೆ, ತನ್ನ ಹೆಡೆಗಳನ್ನೆಲ್ಲಾ ಬಿಚ್ಚಿಕೊಂಡು. ಕಾಂಗ್ರೆಸ್ ಮತ್ತು ಬಿಜೆಪಿ ಪರಸ್ಪರರ ಮುಖಂಡರ ವಿರುದ್ಧ ಆಪಾದನೆಗಳ ಮಳೆಗರೆಯುವಲ್ಲಿ ಮಗ್ನವಾಗಿವೆ. ಈಗ ಕಾಣುತ್ತಿರುವ ನವ-ಉದಾರವಾದಿ ಆರ್ಥಿಕದ ಮತ್ತು ಸುಧಾರಣೆಗಳ ರಚನೆಯನ್ನು ಕಟ್ಟಿ ನಿಲ್ಲಿಸಿರುವುದು ಈ ಎರಡು ಪಕ್ಷಗಳೇ. ಇದು ಬ್ರಹ್ಮಾಂಡ ಭ್ರಷ್ಟಾಚಾರಕ್ಕೆ ಹಿಂದೆಂದೂ ಕಂಡು-ಕೇಳರಿಯದಷ್ಟು ದಾರಿಗಳನ್ನು ತೆರೆದಿಟ್ಟಿದೆ.



ಕೃಪೆ : ದಿ ಹಿಂದು

ಈ ನವ- ಉದಾರವಾದಿ ದಿಕ್ಪಥ ಅತ್ಯಂತ ಹೊಲಸು ಮಾದರಿಯ ಚಮಚಾ ಬಂಡವಾಳಶಾಹಿ ಅಣಬೆಗಳಂತೆ ಬೆಳೆಯಲು ಅವಕಾಶ ಕಲ್ಪಿಸಿದೆ. ಇದರ ಫಲಿತಾಂಶವಾಗಿ ಈಗಾಗಲೇ ಲಕ್ಷಾಂತರ ಕೋಟಿ ರೂ.ಗಳ ಲೂಟಿ ನಡೆದಿದೆ, ನಡೆಯುತ್ತಲೇ ಇದೆ. ಕಳೆದ ಮೂರು ವರ್ಷಗಳಲ್ಲಿ ಹತ್ತು-ಹಲವು ಮಹಾ ಹಗರಣ್ಗಗಳು ಬೆಳಕಿಗೆ ಬಂದವು- 2ಜಿ ತರಂಗಾಂತರ ಹಂಚಿಕೆ, ಕಲ್ಲಿದ್ದಲು ಗಣಿಗಳ ಹಂಚಿಕೆ, ಕಾಮನ್ವೆಲ್ತ್ ಕ್ರೀಡಾಕೂಟ ಹಗರಣ, ಆದರ್ಶ ಹೌಸಿಂಗ್ ಹಗರಣ ಇತ್ಯಾದಿ, ಇತ್ಯಾದಿ, ಇತ್ಯಾದಿ. ಇವುಗಳಲ್ಲಿ ಹಲವಕ್ಕೆ ಸದ್ಯದ ಸರಕಾರ, ಅಂದರೆ ಕಾಂಗ್ರೆಸ್ ನೇತೃತ್ವದ ಯುಪಿಎ-2 ಸರಕಾರ ವಿವರಣೆ ಕೊಡಬೇಕಾಗಿದ್ದರೂ, ಇವುಗಳಲ್ಲಿ ಕೆಲವದರ ಮೂಲ 1998-2004ರ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಕಾಲಕ್ಕೆ ಸೇರಿದ್ದು ಕೂಡ ಎನ್ನುವುದನ್ನು ಗಮನಿಸದಿರಲು ಸಾಧ್ಯವಿಲ್ಲ. ಇವುಗಳಲ್ಲಿ ಹಲವು ಹಗರಣಗಳ ಪೂರ್ಣವಾದ ತನಿಖೆಯೇ ಇನ್ನೂ ನಡೆದಿಲ್ಲ, ತಪ್ಪಿತಸ್ಥರ ವಿಚಾರಣೆ ಮತ್ತು ಅವರಿಗೆ ಶಿಕ್ಷೆ ಇನ್ನೂ ಆಗಿಲ್ಲ. ಇಂತಹ ವಿಷಯಗಳಲ್ಲಿ ತಪ್ಪಿತಸ್ಥರನ್ನು ಶಿಕ್ಷಿಸುವಲ್ಲಿ ಭಾರತದ ದಾಖಲೆ ನಿಜಕ್ಕೂ ಶೋಚನೀಯ.

ಬಲಿಯಾಗಿರುವುದು ಜನಸಾಮಾನ್ಯರ ಬದುಕು

ಭ್ರಷ್ಟಾಚಾರದ ಆಪಾದನೆ ಸಾಬೀತಾಗಿರುವ ಭಾರತದ ಕೆಲವೇ ಉನ್ನತ ಮುಖಂಡರಲ್ಲಿ ಬಿಜೆಪಿಯ ಮಾಜಿ ಅಧ್ಯಕ್ಷ ಬಂಗಾರು ಲಕ್ಷ್ಮಣ ಒಬ್ಬರು. ಈಗ ಬಿಜೆಪಿಯ ಪ್ರಸಕ್ತ ಅಧ್ಯಕ್ಷರು ಆಪಾದನೆಗಳನ್ನು ಎದುರಿಸುತ್ತಿದ್ದಾರೆ, ತನ್ನ ಹಿರಿಯರ ಪದಚಿಹ್ನೆ ಗಳಲ್ಲಿಯೇ ತಾನು ಸಾಗಿದ್ದೇನೆ ಎಂದು ಸಾಬೀತು ಪಡಿಸಲು ಅವರು ಮುಂದಾಗಿರುವಂತೆ ಕಾಣುತ್ತದೆ. ಕಾಂಗ್ರೆಸ್ ಪಕ್ಷದ ಒಬ್ಬ ಪ್ರಧಾನ ಕಾರ್ಯದರ್ಶಿ 'ಗಂಭೀರ ವಂಚನೆಗಳ ತನಿಖಾ ಕಚೇರಿ' ಪ್ರಸಕ್ತ ಬಿಜೆಪಿ ಅಧ್ಯಕ್ಷರು ರಚಿಸಿರುವ ಕನಿಷ್ಟ ಐದು ಕಂಪನಿಗಳ ವಿರುದ್ಧ ಮತ್ತು ಅವುಗಳು ವಂಚಕ ಚಟುವಟಿಕೆಗಳನ್ನು ನಡೆಸುತ್ತಿವೆ ಎಂಬ ಆಪಾದನೆಗಳ ತನಿಖೆ ನಡೆಸುವಂತೆ ಆದೇಶ ನೀಡಬೇಕು ಎಂದು ಪ್ರಧಾನ ಮಂತ್ರಿಗಳನ್ನು ಆಗ್ರಹಿಸಿದ್ದಾರೆ. ಅತ್ತ ಬಿಜೆಪಿ ತಮ್ಮ ಅಧ್ಯಕ್ಷರು "ಒಂದು ಮುಕ್ತ ಮತ್ತು ನ್ಯಾಯಪೂರ್ಣ ತನಿಖೆ"ಗೆ ಸಿದ್ಧವಾಗಿದ್ದಾರೆ ಎಂದು ಹೇಳಿದೆ. ಬಿಜೆಪಿ, ಕರ್ನಾಟಕದಲ್ಲಿ ಈಗಾಗಲೇ ದೇಶದ ನೈಸರ್ಗಿಕ ಸಂಪನ್ಮೂಲಗಳ ಲೂಟಿ ಹೊಡೆಯುವ ಅಕ್ರಮ ಗಣಿಗಾರಿಕೆ ಸೇರಿದಂತೆ ಬೃಹತ್ ಹಗರಣಗಳ ಆಪಾದನೆಗಳನ್ನು ಎದುರಿಸುತ್ತಿದೆ. ಅದರ ಆಗಿನ ಮುಖ್ಯ ಮಂತ್ರಿಯನ್ನು ಈ ಆಪಾದನೆಗಳಿಂದಾಗಿ ಅಧಿಕಾರದಿಂದ ತೆಗೆದು ಹಾಕಬೇಕಾಯಿತು, ಸದ್ಯಕ್ಕೆ ಆತ ಒಂದು ಆಂತರಿಕ ಬಂಡಾಯದ ನೇತೃತ್ವ ವಹಿಸಿದ್ದಾರೆ.


ಜನಾರ್ಧನರೆಡ್ಡಿ ಕೊಟ್ಟ ಚಿನ್ನದ ಖಡ್ಗ ಎತ್ತಿ ಹಿಡಿದಿರುವ ನಿತಿನ್ ಗಡ್ಕರಿ

ಇನ್ನೊಂದೆಡೆ, ಬಿಜೆಪಿ ಕಾಂಗ್ರೆಸ್ ವಿರುದ್ಧ ಪ್ರತಿದಾಳಿ ನಡೆಸಿದೆ, ಕೇಂದ್ರ ಸಂಪುಟದ ಮಾಜಿ ಮಂತ್ರಿ, ಮತ್ತು ಹಿಮಾಚಲ ಪ್ರದೇಶದಲ್ಲಿ ಈಗ ಮುಖ್ಯಮಂತ್ರಿಯಾಗುವ ನಿರೀಕ್ಷೆ ಹೊಂದಿರುವ ಮುಖಂಡರ ಮೇಲೆ ಗುರಿಯಿಟ್ಟಿದೆ. ಅಲ್ಲಿಯ ವಿಧಾನಸಭೆಗೆ ಚುನಾವಣಾ ಪ್ರಚಾರ ಭರದಿಂದ ಸಾಗಿದೆ. ವೀರಭದ್ರ ಸಿಂಗ್ ತನ್ನ ಆದಾಯ ತೆರಿಗೆ ಪತ್ರವನ್ನು ಪರಿಷ್ಕರಿಸಿ 12 ಪಟ್ಟು ಹೆಚ್ಚಿಸಿದ್ದಾರೆ, 2010ರಲ್ಲಿ 51.05 ಲಕ್ಷ ರೂ.ಗಳಷ್ಟಿದ್ದ ಕೃಷಿ ಆದಾಯವನ್ನು 2012ರಲ್ಲಿ 6.15 ಕೋಟಿ ರೂ. ಎಂದು ತೋರಿಸಿದ್ದಾರೆ ಎಂದು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ಬಿಜೆಪಿ ನಾಯಕ ಆಪಾದಿಸಿದ್ದಾರೆ. ಈ ಆಪಾದನೆಗಳ ತನಿಖೆಗೆ ಒಂದು ವಿಶೇಷ ತನಿಖಾ ತಂಡ(ಎಸ್‌ಐಟಿ) ನೇಮಿಸಬೇಕು ಎಂದು ಬಿಜೆಪಿ ಆಗ್ರಹಿಸಿದೆ. ಈ ಮೊದಲು ಭ್ರಷ್ಟಾಚಾರದ ಆಪಾದನೆಯ ಮೇಲೆ ಅವರನ್ನು ಕೇಂದ್ರ ಸಂಪುಟ ಮಂತ್ರಿ ಸ್ಥಾನದಿಂದ ಹೊರಗೆ ಕಳಿಸಲಾಗಿತ್ತು. ಬಹಳ ವರ್ಷಗಳ ಹಿಂದೆ ಹಿಮಾಚಲ ಪ್ರದೇಶಕ್ಕೆ ಸೇರಿದ ಒಬ್ಬ ಕೇಂದ್ರ ಮಂತ್ರಿ ಒಂದು ದೊಡ್ಡ ಹಗರಣದ ಕೇಂದ್ರ ಬಿಂದುವಾಗಿದ್ದರು. ಅಂದರೆ ಈಗಿನ ಬಿಜೆಪಿ ಅಧ್ಯಕ್ಷರಂತೆ ಶ್ರೀಯುತ ವೀರಭದ್ರ ಸಿಂಗ್ ಕೂಡ ತಮ್ಮ ಹಿರಿಯರ ಪರಂಪರೆಯನ್ನು

ಮುಂದುವರೆಸಿರಬಹುದೇ?

ಈಗ ಅನುಸರಿಸುತ್ತಿರುವ ನವ-ಉದಾರವಾದಿ ಆರ್ಥಿಕ ಸುಧಾರಣೆಗಳು ಕಪ್ಪು ಹಣವನ್ನು ಬಿಳಿ ಮಾಡುವ ಕೃತ್ಯಗಳಿಗೆ, ಜೂಜುಕೋರತನಕ್ಕೆ ಮತ್ತು ತಮ್ಮ ಆಪ್ತರಿಗೆ ಅನುಕೂಲಕರವಾದ ವ್ಯವಹಾರ ಗಳನ್ನು ನಡೆಸಲು ಮಹಾದ್ವಾರ ವನ್ನೇ ತೆರೆದು ಕೊಟ್ಟಿದೆ; ಇವು ನಿರಂತರವಾಗಿ ವೈಯಕ್ತಿಕ ಲಾಭಕ್ಕಾಗಿ ಅಪಾರ ಹಣವನ್ನು, ಸಂಪನ್ಮೂಲಗಳನ್ನು ಲೂಟಿ ಮಾಡುತ್ತಿವೆ. ಬಹಳ ಮಹತ್ವದ ಸಂಗತಿಯೆಂದರೆ ಇದನ್ನೆಲ್ಲ ನಮ್ಮ ಜನರಿಗೆ ಉತ್ತಮ ಬದುಕನ್ನು ನಿರಾಕರಿಸುವ ಮೂಲಕ ಮಾಡಲಾಗುತ್ತಿದೆ.

ನೈತಿಕ ಪ್ರಶ್ನೆಯಷ್ಟೇ ಅಲ್ಲ

ಇಂತಹ ಭ್ರಷ್ಟಾಚಾರ ಕೇವಲ ಒಂದು ನೈತಿಕ ಪ್ರಶ್ನೆಯಲ್ಲ. ಅದು ಅತ್ಯಂತ ಅನೈತಿಕ, ನೀತಿ ಬಾಹಿರ, ಅಪ್ರಾಮಾಣಿಕ ಮತ್ತು ಹಗಲುದರೋಡೆ ಎಂಬುದರಲ್ಲಿ ಎರಡು ಮಾತಿಲ್ಲ. ಅಂತಹ ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು. ಆದರೆ, ಅದೇ ವೇಳೆಗೆ, ಹೀಗೆ ಲೂಟಿ ಹೊಡೆದ ಹಣ ಸಾಮಾಜಿಕ ಕಲ್ಯಾಣ ಕ್ರಮಗಳಿಗೆ ಸಿಗುವಂತಿದ್ದರೆ, ಬಹುಮುಖೀ ಆರ್ಥಿಕ ಹೊರೆಗಳಿಂದ ನರಳುತ್ತಿರುವ ನಮ್ಮ ಬಹುಪಾಲು ಜನಸಾಮಾನ್ಯರಿಗೆ ಬಹಳಷ್ಟು



ಪ್ರಯೋಜನವಾಗುತ್ತಿತ್ತು ಎಂಬುದನ್ನು ಗಮನಿಸಬೇಕು.

ಆದ್ದರಿಂದ, ಸಮಕಾಲೀನ ಭಾರತದ ವಾಸ್ತವ ಪರಿಸ್ಥಿತಿಗಳಲ್ಲಿ ಮಹಾ ಭ್ರಷ್ಟಾಚಾರದ ವಿರುದ್ಧ ಹೋರಾಟ 'ಕೆಡುಕಿನ' ಮೇಲೆ 'ಒಳಿತಿನ' ವಿಜಯದ ಒಂದು ನೈತಿಕ ಪ್ರಶ್ನೆಯಷ್ಟೇ ಅಲ್ಲ. ಈ ಹೋರಾಟದಲ್ಲಿ ಯಶಸ್ಸಿನ ನೇರ ಪರಿಣಾಮವಾಗಿ ನಮ್ಮ ಜನಗಳಿಗೆ ಒಂದು ಉತ್ತಮ ಗುಣಮಟ್ಟವನ್ನು ಕೊಡಲು ಸಾಧ್ಯವಾಗುತ್ತದೆ. ಈ ಹೋರಾಟದಲ್ಲಿ ಇಂತಹ ಯಾವುದೇ ಯಶಸ್ಸಿನ ಆರಂಭ ಈಗಿನ ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ದಿಕ್ಪಥದ ವಿರುದ್ಧ ಗುರಿಯಿಟ್ಟರೆ ಮಾತ್ರವೇ ಸಾಧ್ಯ. ಏಕೆಂದರೆ ಇಂತಹ ಸುಧಾರಣೆಗಳೇ ಇಂತಹ ಮಹಾಭ್ರಷ್ಟಾಚಾರದ ಮೂಲಸ್ರೋತಗಳು. ನಮ್ಮ ದೇಶದ ಪ್ರಸಕ್ತ ಧೋರಣೆಯ ದಿಕ್ಕನ್ನು ಬದಲಿಸಬೇಕೆನ್ನುವುದಕ್ಕೆ ಹಲವು ಮಹತ್ವದ ಕಾರಣಗಳಿವೆ. ಹಾಗೆ ಮಾಡದೆ ಈ ತೆರನ ಮಹಾ ಭ್ರಷ್ಟಾಚಾರವನ್ನು ತೊಡೆದು ಹಾಕುವುದು ಅಸಾಧ್ಯ ಎಂಬುದಂತೂ ಸತ್ಯ.

ಆದ್ದರಿಂದ 'ಕೆಡುಕಿನ' ಮೇಲೆ 'ಒಳಿತಿನ' ವಿಜಯವನ್ನು ಸಂಪೂರ್ಣ ಅರ್ಥದಲ್ಲಿ ಸಾಧಿಸ ಬೇಕಾದರೆ, ಜನತೆಯ ಹೋರಾಟಗಳನ್ನು ಬಲಗೊಳಿಸಿ ಈ ನವ-ಉದಾರವಾದಿ ಆರ್ಥಿಕ ಸುಧಾರಣೆಯ ದಿಕ್ಕನ್ನು ಬದಲಿಸಲೇ ಬೇಕಾದ ಬಲವಂತವನ್ನು ಉಂಟು ಮಾಡುವುದು ಅನಿವಾರ್ಯ.

'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ
- 25.10.2012

ಪಶ್ಚಿಮ ಬಂಗಾಳ: ಜಂಗೀಪುರ ಲೋಕಸಭಾ ಉಪಚುನಾವಣೆ

ಫಲಿತಾಂಶ ಬದಲಿಸಿದ 18 ಬೂತ್‌ಗಳು

ಕೇವಲ 18 ಬೂತ್‌ಗಳಲ್ಲಿ ಬಂದ ಮತಗಳ ಫಲಿತಾಂಶ ಕಾಂಗ್ರೆಸ್‌ನ ಅಭಿಜಿತ್ ಮುಖರ್ಜಿ ಅವರ ಕೂದಲೆಳೆ ಅಂತರದ ವಿಜಯಕ್ಕೆ ಕಾರಣವಾಯಿತು. ಇದು ಪಶ್ಚಿಮ ಬಂಗಾಳದ ಜಂಗೀಪುರ ಲೋಕಸಭಾ ಕ್ಷೇತ್ರದ ಚುನಾವಣೆಯ ಮುಖ್ಯ ಹೈಲೈಟ್.

ಜಂಗೀಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿಪಿಐ(ಎಂ)ನ ಉಮೇದುವಾರ ಮುಜಾಫರ್ ಹುಸೈನ್ ಅವರನ್ನು 2,536 ಮತಗಳ ಅತ್ಯಲ್ಪ ಅಂತರದಿಂದ ಸೋಲಿಸಿದರು. ಕಾಂಗ್ರೆಸ್‌ನ ಅಭಿಜಿತ್ ಮುಖರ್ಜಿ 3,32,999 ಮತಗಳನ್ನು ಪಡೆದರೆ ಸಿಪಿಐ(ಎಂ) ಅಭ್ಯರ್ಥಿ 3,30,383 ಮತಗಳನ್ನು ಪಡೆದರು.

ರಾಷ್ಟ್ರಪತಿಯಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ಸಂಸದ ಪ್ರಣಬ್ ಮುಖರ್ಜಿ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದರಿಂದ ತೆರವಾದ ಸ್ಥಾನಕ್ಕೆ ಈ ಚುನಾವಣೆ ನಡೆಯಿತು. 2009ರಲ್ಲಿ ಹಿರಿಯ ಕಾಂಗ್ರೆಸ್ ನಾಯಕ ಪ್ರಣಬ್ ಈ ಕ್ಷೇತ್ರದಲ್ಲಿ 1 ಲಕ್ಷ 30 ಸಾವಿರ ಮತಗಳ ಅಂತರದಿಂದ ಭರ್ಜರಿ ಜಯ ದಾಖಲಿಸಿದ್ದರು. ಮತಗಳ ಗಳಿಕೆಯಲ್ಲಿ ಕಾಂಗ್ರೆಸ್ ಹಿಂದಿನ ಶೇಕಡಾ 54ರಿಂದ ಗಣನೀಯ ಕುಸಿತ ಕಂಡಿದ್ದು 2012ರಲ್ಲಿ ಕೇವಲ 39.01 ಮತಗಳನ್ನಷ್ಟೇ ಗಳಿಸಲು ಶಕ್ತವಾಯಿತು. ಇಲ್ಲಿ ಕಾಂಗ್ರೆಸ್ ಸುಮಾರು 15 ಶೇಕಡಾ ಮತಗಳ ಕುಸಿತ ಕಂಡಿತು. ಸಿಪಿಐ(ಎಂ) ಈ ಬಾರಿ ಶೇಕಡಾ 38.71 ಪ್ರಮಾಣದಲ್ಲಿ ಮತಗಳಿಕೆಯ ದಾಖಲೆ ಮಾಡಿತು. ರಾಷ್ಟ್ರಪತಿಯವರ ಪುತ್ರ ಅಭಿಜಿತ್ ಮುಖರ್ಜಿ ಈ ಕ್ಷೇತ್ರವನ್ನು ಕೇವಲ ಶೇಕಡಾ 0.30 ಮತಗಳ ಅಂತರದಲ್ಲಿ ತನ್ನದಾಗಿಸಿಕೊಂಡರು.

ಇನ್ನೊಂದು ಗಮನಾರ್ಹ ಅಂಶ ಎಂದರೆ ಬಿಜೆಪಿ 85 ಸಾವಿರಕ್ಕೂ ಅಧಿಕ ಮತಗಳನ್ನು ಪಡೆದರೆ ಎಸ್‌ಡಿಪಿಐ 24,691 ಮತ್ತು ಡಬ್ಲುಪಿಐ 41,620 ಮತಗಳನ್ನು ಪಡೆದು ಗಮನ ಸೆಳೆಯಿತು. ಈ ಉಪ ಚುನಾವಣೆ ತೃಣಮೂಲ ಕಾಂಗ್ರೆಸ್ ಯುಪಿಎಯಿಂದ ಹೊರಬಂದ ನಂತರ ನಡೆದಿದೆ ಎಂಬುದೂ ಉಲ್ಲೇಖಾರ್ಹ. ತೃಣಮೂಲದ ಮೈತ್ರಿ ಇಲ್ಲದೆ ಕಾಂಗ್ರೆಸ್ ಈ ಸ್ಪರ್ಧೆ ನಡೆಸಿದರೆ, ತನ್ನ ಅಭ್ಯರ್ಥಿಯನ್ನು ಕಣಕ್ಕೆ ಇಳಿಸದಿರಲು ತೃಣಮೂಲ ನಿರ್ಧರಿಸಿತು. ಇದು ಪ್ರಣಬ್ ಮುಖರ್ಜಿ ಅವರಿಗೆ ಮಮತಾ ಬ್ಯಾನರ್ಜಿ ತೋರಿದ ಕೃಪೆ ಎಂಬಂತಾಯಿತು. ತೃಣಮೂಲದ ಅಭ್ಯರ್ಥಿ ಇಲ್ಲದ ಕಾರಣ ಬಿಜೆಪಿ ಮತ್ತು ಇತರ ಎರಡು ಪಕ್ಷಗಳು ಗಮನಾರ್ಹ ಪ್ರಮಾಣದಲ್ಲಿ ಮತಗಳನ್ನು ಗಳಿಸಿತು.

ಈ ಸಂಸದೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈ ಬಾರಿ ಸಿಪಿಐ(ಎಂ) ನಾಲ್ಕು ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿತು. ಕಾಂಗ್ರೆಸ್ ಮೂರರಲ್ಲಿ ಮುಂದಿತ್ತು. 2011ರ ವಿಧಾನಸಭಾ ಚುನಾವಣೆಯಲ್ಲಿ ಇಲ್ಲಿನ ಒಟ್ಟು ಏಳು ಕ್ಷೇತ್ರಗಳ ಪೈಕಿ ಸಿಪಿಐ(ಎಂ) ಕೇವಲ ಒಂದರಲ್ಲಿ ಜಯ ಗಳಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಎಲ್ಲ ಟ್ರೆಂಡ್‌ಗಳನ್ನು ಮೀರಿಸಿ ಚುನಾವಣೆಯ ಫಲಿತಾಂಶದ ದಿಕ್ಕನ್ನೇ ಬದಲಿಸಿ ಕಾಂಗ್ರೆಸ್ ಮೇಲುಗೈ ಸಾಧಿಸುವಂತೆ ಮಾಡಿದ್ದು ಕೇವಲ 18 ಬೂತ್‌ಗಳು ಎಂಬುದು ಮತ್ತೊಂದು ಗಮನಾರ್ಹ ಅಂಶ. ಈ ಬೂತ್‌ಗಳು ರಘುನಾಥ್ ಗಂಜ್ ವಿಧಾನಸಭಾ ಕ್ಷೇತ್ರದ ಗಿರಿಯಾಸಿಕೇಂದ್ರ ಎಂಬ ಪ್ರದೇಶಕ್ಕೆ ಸೇರಿದ ಎರಡು ಗ್ರಾಮಗಳದ್ದು. ಈ ಪ್ರದೇಶ ಕಳೆದ ಕೆಲವು ತಿಂಗಳಿನಿಂದ ಭಯಭೀತಿಯ ವಾತಾವರಣದಿಂದ ನಲುಗುತ್ತಿತ್ತು. ಹೆಚ್ಚಿನೆಲ್ಲ ಸಿಪಿಐ(ಎಂ) ಕಾರ್ಯಕರ್ತರು ಪ್ರಾಣಭೀತಿಯಿಂದ ಬೇರೆಡೆ ವಲಸೆ ಹೋಗಿದ್ದರು. ಎಡರಂಗದ ಅಭ್ಯರ್ಥಿ ಈ ಪ್ರದೇಶದಲ್ಲಿ ತನ್ನ ಮತಪ್ರಚಾರವನ್ನು ಮಾಡಲೂ ಸಾಧ್ಯವಾಗಿರಲಿಲ್ಲ. ಈ ಬೂತ್‌ಗಳಲ್ಲಿ ಮತದಾನದ ವೇಳೆ ಸಿಪಿಐ(ಎಂ) ಅಭ್ಯರ್ಥಿ ಪರ ಏಜೆಂಟ್‌ರನ್ನೂ ಕರ್ತವ್ಯ ನಿರ್ವಹಿಸಲು ಬಿಡಲಿಲ್ಲ. ಕಾಂಗ್ರೆಸ್ ಗೂಂಡಾಗಳು ಮತಗಟ್ಟೆಯನ್ನು ವಶಪಡಿಸಿ ಗಂಟೆಗಟ್ಟಲೆ ಮುಕ್ತವಾಗಿ ನಕಲಿ ಮತದಾನವನ್ನು ಮಾಡಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರನ್ನು ಬಲವಂತವಾಗಿ ಮತಗಟ್ಟೆಯಿಂದ ಹೊರಗಿಡಲಾಯಿತು. ಟಿವಿ ಚಾನೆಲ್‌ಗಳ ಕ್ಯಾಮರಾಗಳು ಸಹಿತ ಈ ದೃಶ್ಯವನ್ನು ಸೆರೆ ಹಿಡಿದಿದ್ದವು. ಸತತ ಮನವಿಯ ಬಳಿಕ ಪೊಲೀಸರು ತೋರಿಕೆ ಎಂಬಂತೆ ಕೆಲವು ನಿಮಿಷಗಳ ಕಾಲ ನಿಂತರು. ಆದರೆ ಯಾರೂ ಈ ಅಕ್ರಮವನ್ನು ತಡೆಯಲಿಲ್ಲ. ಇಂತಹ ಘಟನೆ ನಡೆಯಬಹುದು ಎಂದು ಸಿಪಿಐ(ಎಂ) ಅಭ್ಯರ್ಥಿ ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದರೂ ಪ್ರಯೋಜನವಾಗಲಿಲ್ಲ. ಈ 18 ಬೂತ್‌ಗಳಲ್ಲಿ ಕಾಂಗ್ರೆಸ್‌ಗೆ 600 ರಿಂದ 700 ಮತಗಳು ಬಿದ್ದರೆ ಸಿಪಿಐ(ಎಂ)ಗೆ ಬೆರಳೆಣಿಕೆಯ ಐದಾರು ಮತಗಳು ಬಿದ್ದವು. ಮತಗಟ್ಟೆ 23ರಲ್ಲಿ 685 ಮತಗಳಲ್ಲಿ ಕಾಂಗ್ರೆಸ್‌ಗೆ 679 ಮತ ಸಿಕ್ಕಿದರೆ ಸಿಪಿಐ(ಎಂ)ಗೆ ಯಾವುದೇ ಮತ ಬೀಳಲಿಲ್ಲ. ಅತ್ಯಂತ ಕ್ರೂರ ಕ್ರಿಮಿನಲ್‌ಗಳೆನ್ನಲಾದ ಜಾರ್ಖಂಡ್‌ನ ಗೂಂಡಾಗಳನ್ನು ಕಾಂಗ್ರೆಸ್ ಇಲ್ಲಿಗೆ ನಿಯೋಜಿಸಿತ್ತು. ಒಟ್ಟಾರೆಯಾಗಿ ಈ ಎಲ್ಲ ಕೃತ್ಯಗಳಿಂದ 18 ಬೂತ್‌ಗಳಲ್ಲಿ ಕಾಂಗ್ರೆಸ್ ಸುಮಾರು 7,000ಕ್ಕೂ ಅಧಿಕ ಮತಗಳ ಮುನ್ನಡೆಯನ್ನು ಪಡೆದುಕೊಂಡು ಪ್ರತಿಷ್ಠಿತ ಕ್ಷೇತ್ರವನ್ನು ಉಳಿಸಿಕೊಂಡು ಮುಖಭಂಗವನ್ನು ತಪ್ಪಿಸಿಕೊಂಡಿತು. ಪ್ರಣಬ್ ಹೆಸರಿನಲ್ಲಿ ಚುನಾವಣೆ ಎದುರಿಸಿದ್ದರಿಂದ ಜಯ ಕಾಂಗ್ರೆಸ್‌ಗೆ ಅನಿವಾರ್ಯವಾಗಿತ್ತು.

ಜಂಗೀಪುರದ ಈ ವಿಜಯ ಕಾಂಗ್ರೆಸ್‌ನ ಪಾಲಿಗೆ ಕೇವಲ ತಾಂತ್ರಿಕ ಜಯ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ವ್ಯಾಖ್ಯಾನಿಸಿದ್ದಾರೆ. ಕಾಂಗ್ರೆಸ್ ಮತಗಳಿಕೆಯಲ್ಲಿ ಗಣನೀಯ ಕುಸಿತ ಕಂಡಿದೆ ಎಂದು ಎಡರಂಗದ ಅಧ್ಯಕ್ಷ ಬಿಮನ್ ಬಸು ವಿಶ್ಲೇಷಿಸಿದ್ದಾರೆ.

ಸಿಮ್ಮಿಸಿ

ಕೊಡಗು: ದುಡಿಯುವ ಜನರ ಸಂಕಟಗಳಿಗೆ ದನಿಯಾದ ಕೆಂಬಾವುಟ

ಅಕ್ಷರ ದಾಸೋಹ ನೌಕರರ ವೇತನ ಹೆಚ್ಚಳಕ್ಕೆ ಒತ್ತಾಯಿಸಿ, ನಿವೇಶನ ರಹಿತರಿಗೆ ನಿವೇಶನಕ್ಕೆ, ದುಡಿಯುವ ಜನರಿಗೆ ಕನಿಷ್ಠ ಕೂಲಿಗೆ ಆಗ್ರಹಿಸಿ....ಆನೆ ಹಾವಳಿ ವಿರುದ್ಧ ಸೂಕ್ತ ರಕ್ಷಣೆ ನೀಡದ ನಿರ್ಲಕ್ಷ್ಯ ಧೋರಣೆ ಖಂಡಿಸಿ, ಕೊಡಗು ಜಿಲ್ಲೆಯ ಜನರ ಬದುಕಿನ ನಾನಾ ಪ್ರಶ್ನೆಗಳ ಆಧಾರದಲ್ಲಿ ನಡೆದ ವಿವಿಧ ಹೋರಾಟಗಳ ವರದಿ ಇದು.

ವರದಿ: ರಮೇಶ ಹೆಚ್.ವಿ.

ಅಕ್ಷರ ದಾಸೋಹ ವೇತನ ಹೆಚ್ಚಳಕ್ಕೆ ಒತ್ತಾಯ

ದಿ.11-10-2012 ರಂದು ಜಿಲ್ಲೆಯಲ್ಲಿ ಅಕ್ಷರ ದಾಸೋಹ ನೌಕರರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಂಘದ ಪದಾಧಿಕಾರಿಗಳು ಮತ್ತು ನೌಕರರು ಪ್ರತಿಭಟನೆ ನಡೆಸಿದರು. ಅಕ್ಷರ ದಾಸೋಹ



ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎ. ಮಹದೇವ ಮಾತನಾಡಿ ಕಳೆದ ಹಲವು ವರ್ಷಗಳಿಂದ ಕಡಿಮೆ ವೇತನಕ್ಕೆ ದುಡಿಯುತ್ತಿರುವ ನೌಕರರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು. ಅಕ್ಷರ ದಾಸೋಹ ನೌಕರರನ್ನು ಖಾಯಂ ಗೊಳಿಸಬೇಕು, ದಿನವೊಂದಕ್ಕೆ 200 ರೂ. ವೇತನ ನಿಗದಿ ಮಾಡಿ ನೀಡಬೇಕು, ಬೆಲೆ ಏರಿಕೆಯ ಆಧಾರದಲ್ಲಿ ತಿಂಗಳ ಸಂಭಾವನೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು. ಶಾಲೆಗಳ ಶಿಕ್ಷಕರನ್ನು ಬೇರೆ ಶಾಲೆಗೆ ವರ್ಗಾವಣೆ ಮಾಡುವಂತೆ ಅಗತ್ಯವಿದ್ದ ಅಕ್ಷರ ದಾಸೋಹ ನೌಕರರಿಗೂ ವರ್ಗಾವಣೆ ಮಾಡಬೇಕೆಂದು ಆಗ್ರಹಿಸಿದರು. ತಮ್ಮ ಬೇಡಿಕೆ ಈಡೇರದಿದ್ದಲ್ಲಿ ವಿಧಾನಸೌಧ ಚಲೋ ಚಳುವಳಿ ನಡೆಸುವುದಾಗಿ ಅವರು ಎಚ್ಚರಿಕೆ ನೀಡಿದರು. ಎ.ಎಂ. ಕಾವೇರಿ, ಉಪಾಧ್ಯಕ್ಷೆ ನಾಗಮ್ಮ ಉಪ ಕಾರ್ಯದರ್ಶಿ ಕೆ.ಕೆ. ಜಾಜಿ ಹಾಗು ಕುಸುಮಾ ಖಜಾಂಚಿ ಪ್ರಮೀಳ, ಸುಷ್ಮ ಹಾಗು ಜಿಲ್ಲೆಯ ಹಲವು ಶಾಲೆಯ ಅಕ್ಷರ ದಾಸೋಹ ನೌಕರರು ಪಾಲ್ಗೊಂಡಿದ್ದರು. ಎ. ಮಹದೇವ ಪ್ರಧಾನ ಕಾರ್ಯದರ್ಶಿ ನೇತೃತ್ವ ವಹಿಸಿದ್ದರು.

ಅಡಿಗೆ ಮಾಡುವ ಸಂದರ್ಭದಲ್ಲಿ ಯಾವುದೆ ಅಪಘಾತ ಸಂಭವಿಸಿದರೆ ರೂ. ಒಂದು ಲಕ್ಷವನ್ನು ಪರಿಹಾರವಾಗಿ ನೀಡಬೇಕು. ಅಕ್ಷರ ದಾಸೋಹ ನೌಕರರಿಗೆ ಅಂತ್ಯೋದಯ ಕಾರ್ಡು ನೀಡಬೇಕು. ಅಕ್ಷರ ದಾಸೋಹ ನೌಕರರಿಗೆ ಪಂಚಾಯತ್ ಸದಸ್ಯರಿಂದ ಹಾಗು ನೌಕರರಿಂದ ಕಿರುಕುಳ ನಿಲ್ಲಬೇಕು. ಏಪ್ರಿಲ್ ಹಾಗು ಮೇ ತಿಂಗಳ ರಜೆಯ ಸಂಬಳವನ್ನು ನೀಡಬೇಕು ಎಂದು ಸಹ ಈ ಸಂದರ್ಭದಲ್ಲಿ ಒತ್ತಾಯಿಸಲಾಯಿತು.

ನಿವೇಶನ ಹೋರಾಟ

ಮನೆ ಇಲ್ಲದ – ಮನೆ ಕಟ್ಟಿಕೊಳ್ಳಲು ನಿವೇಶನ ಇಲ್ಲದ ಜನರ ಪರವಾಗಿ, ಅವರಿಗೆ ಮನೆ ನಿವೇಶನದ ವ್ಯವಸ್ಥೆ ಮಾಡುವಂತೆ ಒತ್ತಾಯಿಸಿ ಕೊಡಗು ಜಿಲ್ಲೆಯ ಕಾರ್ಮೊಡು ಗ್ರಾಮ ಪಂಚಾಯತ್ ಎದುರು 17-09-2012 ರಂದು ಅಮ್ಮತ್ತಿ ಹೋರಾಟ ಸಮಿತಿ ಮತ್ತು ಸಿಐಟಿಯು ನೇತೃತ್ವದಲ್ಲಿ ಹೋರಾಟಕ್ಕೆ ಮುಂದಾದ ಸಂದರ್ಭದಲ್ಲಿ ಮೆರವಣಿಗೆ ಹೋಗದಂತೆ ಅಮ್ಮತ್ತಿ ನಿವಾಸಿಗಳನ್ನು ತಡೆಯಲು, ಪೋಲೀಸ್ ಇಲಾಖೆ ಮಧ್ಯ ಪ್ರವೇಶಿಸಿತು. ಮೆರವಣಿಗೆ ಹೊರಡುವ ಸ್ಥಳಕ್ಕೆ ಕಂದಾಯ ಪರಿವೀಕ್ಷಕರು, ತಹಶೀಲ್ದಾರ್ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಅರಣ್ಯ ಅಧಿಕಾರಿಗಳನ್ನು ಕರೆಸಲಾಗಿತ್ತು. ಅಧಿಕಾರಿಗಳು ಮನವಿ ಪತ್ರವನ್ನು ಸ್ವೀಕರಿಸಿ ರಸ್ತೆಯಲ್ಲಿಯೇ ನಿಂತು ಭರವಸೆ ನೀಡಿ ಬೇಡಿಕೆ ಈಡೇರಿಕೆಗೆ ಎರಡು ತಿಂಗಳ ಕಾಲಾವಕಾಶ ಕೇಳಿಕೊಂಡಿದ್ದರು. ಈ ಸಂದರ್ಭದಲ್ಲಿ ದೇವರಕಾಡು ಸಂರಕ್ಷಣೆಯ ಹೆಸರಿನಲ್ಲಿ ಕಾರ್ಮಿಕರ ಮೇಲೆ ಹಲ್ಲೆ ನಡೆಸಲು ಮುಂದಾಗಿರುವುದನ್ನು ಖಂಡಿಸಲಾಯಿತು. ಅಲ್ಲದೆ ನಿವೇಶನ ಹೋರಾಟಕ್ಕೆ ನಾಯಕತ್ವ ನೀಡಿರುವ ಎ. ಮಹದೇವರಿಗೆ ಅವಾಚ್ಯ ಶಬ್ದಗಳಿಂದ ಬೈದು



ಕೊಲೆ ಬೆದರಿಕೆ ಹಾಕಿರುವುದನ್ನು ಖಂಡಿಸಿ ಪೋಲೀಸ್ ಇಲಾಖೆಗೆ ದೂರು ನೀಡಲಾಯಿತು. ಈ ಹೋರಾಟದಲ್ಲಿ ಎ. ಮಹದೇವ ಸಿಐಟಿಯು ಜಿಲ್ಲಾ ಕಾರ್ಯದರ್ಶಿ, ಹೋರಾಟ ಸಮಿತಿ ಅಧ್ಯಕ್ಷರಾದ ಡೇವಿಡ್, ಉಪಾಧ್ಯಕ್ಷರಾದ ಇಬ್ರಾಹಿಂ, ಕಾರ್ಯದರ್ಶಿ ಚಂದ್ರು, ಖಜಾಂಚಿ ಮುತ್ತಪ್ಪ, ಆದಿವಾಸಿಗಳ ಸಂಘಟನೆಯ ರಾಜ್ಯ ಸಂಚಾಲಕರಾದ ಗಣೇಶ ವೈ.ಎಂ., ಗೌರವ ಅಧ್ಯಕ್ಷರಾದ ಶ್ರೀಧರ್ ಮತ್ತು ರಾಧ ಭಾಗವಹಿಸಿರುತ್ತಾರೆ. ಸಿಪಿಐ(ಎಂ) ಪಕ್ಷದ ಪ್ರದೇಶ ಸಮಿತಿ ಕಾರ್ಯದರ್ಶಿ ಕಾಂ. ಜೋಸ್, ಜಿಲ್ಲಾ ಸಂಘಟನಾ ಸಮಿತಿ ಸದಸ್ಯ ರಮೇಶ ಸಹ ಈ ಹೋರಾಟದಲ್ಲಿ ಭಾಗವಹಿಸಿದ್ದರು.



ಕನಿಷ್ಟ ವೇತನಕ್ಕಾಗಿ ಕಾರ್ಮಿಕರ ಪ್ರತಿಭಟನೆ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರವೇ ನಿಗದಿ ಮಾಡಿರುವ ಕನಿಷ್ಠ ವೇತನವನ್ನು ಕಾರ್ಮಿಕರ ಎಲ್ಲಾ ವಿಭಾಗಗಳಿಗೂ ಕೂಡಲೆ ಜಾರಿ ಮಾಡುವಂತೆ ಕೊಡಗು ಜಿಲ್ಲಾ ವರ್ಕರ್ಸ್ ಯೂನಿಯನ್ ಪದಾಧಿಕಾರಿಗಳು ದಿ. 25-09-2012 ರಂದು ನಡೆದ ಪ್ರತಿಭಟನೆಯ ಸಂರ್ಭದಲ್ಲಿ ಆಗ್ರಹಿಸಿದರು. ಈ ಬೇಡಿಕೆಯನ್ನು ಈಡೇರಿಸಬೇಕೆಂದು ಒತ್ತಾಯಿಸಿ ಗಾಂಧಿ ಮೈದಾನದಿಂದ ಪ್ರತಿಭಟನಾ ಮೆರವಣಿಗೆ ಹೊರಟು ಜಿಲ್ಲಾಧಿಕಾರಿಗಳ ಕಛೇರಿ ತಲುಪಿ ಮನವಿ ಪತ್ರವನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಎನ್. ಶಿವಶಂಕರರವರಿಗೆ ನೀಡಲಾಯಿತು. ಈ ಸಂದರ್ಭ ಯೂನಿಯನ್ ಪ್ರಧಾನ ಕಾರ್ಯದರ್ಶಿ ಎ. ಮಹದೇವ ಮಾತನಾಡಿ ಕಾರ್ಮಿಕರಿಗೆ ತುಟ್ಟಿಭತ್ಯೆ ನೀಡಬೇಕು, ಎಲ್ಲಾ ತೋಟ ಕಾರ್ಮಿಕರಿಗೆ ಬಿಪಿಎಲ್ ಕಾರ್ಡು ವಿತರಿಸಬೇಕು, ಕನಿಷ್ಟ ವೇತನ ಕೂಡಲೇ ಜಾರಿ ಮಾಡುವಂತೆ ಒತ್ತಾಯಿಸಿದರು. ಬಿಪಿಎಲ್ ಪಡಿತರ ಚೀಟಿ ಹೊಂದಿರುವವರಿಗೆ 10 ಲೀಟರ್ ಸೀಮೆ ಎಣ್ಣೆ ಹಾಗು ಕೆ.ಜಿ.ಗೆ ರೂ. 2 ರಂತೆ 35 ಕೆ.ಜಿ ಅಕ್ಕಿ ನೀಡಬೇಕು ಈಗ ನಿಗದಿ ಪಡಿಸಿರುವ ಬಿಪಿಎಲ್ ಮಾನದಂಡದ 11 ಸಾವಿರ ರೂ ಆದಾಯ ಮಿತಿ ತೆಗೆದು ಹಾಕಬೇಕು ಎಂದು ಆಗ್ರಹಿಸಿದರು. ಕಾಡಾನೆ ಹಾವಳಿಯಿಂದ ಕಾರ್ಮಿಕರನ್ನು ಹಾಗು ರೈತರನ್ನು ರಕ್ಷಿಸಬೇಕು, ಆನೆ ದಾಳಿಯಿಂದ ಕಾರ್ಮಿಕರು ಸತ್ತರೆ 10 ಲಕ್ಷ ರೂಪಾಯಿ ಪರಿಹಾರ ಧನ ನೀಡಿ ಅವರ ಕುಟುಂಬದವರಿಗೆ ಸರಕಾರಿ ಉದ್ಯೋಗ ನೀಡಬೇಕು. ಅಂಗವಿಕಲರಾದರೆ 5 ಲಕ್ಷ ಪರಿಹಾರ ಕೊಡಬೇಕು. ಆನೆ ಇರುವ ಪ್ರದೇಶದಲ್ಲಿ ಕಾರ್ಮಿಕರ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗುವ, ಮನೆಗೆ ತಂದು ಬಿಡುವ ವಾಹನ ವ್ಯವಸ್ಥೆಯಾಗಬೇಕು, ರೈತರ ಪಸಲು ನಾಶವಾದರೆ ಸೂಕ್ತ ಪರಿಹಾರವನ್ನು ನೀಡಬೇಕು ಎಂದು ಅಗ್ರಹಿಸಲಾಯಿತು. ಪ್ರತಿಭಟನೆಯಲ್ಲಿ ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್‌ನ ಜಿಲ್ಲಾಧ್ಯಕ್ಷರಾದ ಡಾ. ದುರ್ಗಾಪ್ರಸಾದ್, ಜಂಟಿ ಕಾರ್ಯದರ್ಶಿ ಹೆಚ್.ವಿ ರಮೇಶ, ಆದಿವಾಸಿ ಸಮನ್ವಯ ಸಮಿತಿ ರಾಜ್ಯ ಸಂಚಾಲಕರು ಗಣೇಶ, ರೈತ ಸಂಘಟನೆಯ ಜಿಲ್ಲಾಧ್ಯಕ್ಷರಾದ ವಸಂತಕುಮಾರ ಹೊಸಮನೆ ಹಾಗು ಜಿಲ್ಲಾ ಸಮಿತಿ ಸದಸ್ಯರು ಭಾಗವಹಿಸಿದ್ದರು.

ಭೂಮಿಯ ಪ್ರಶ್ನೆ ಇಂದೂ ಪ್ರಸ್ತುತ

ನಿತ್ಯಾನಂದಸ್ವಾಮಿ


ಇದೇ ಅಕ್ಟೋಬರ್ 11 ರಂದು ದೇಶದ ರಾಜಧಾನಿಗೆ ಕಾಲ್ನಡಿಯಿಂದ ಹೊರಟಿದ್ದ ಸಾವಿರಾರು ಜನ ವಸತಿರಹಿತರು ಮತ್ತು ಭೂರಹಿತರು ತಮ್ಮ ಕಾಲ್ನಡಿಗೆ ಜಾಥಾವನ್ನು ಆಗ್ರಾ ನಗರದಲ್ಲಿ ಅಂತ್ಯಗೊಳಿಸಿ ಕೇಂದ್ರ



ಸರ್ಕಾರದೊಂದಿಗೆ ಒಂದು ಒಪ್ಪಂದಕ್ಕೆ ಸಹಿ ಹಾಕಿದರು. ಅಲ್ಲಿಗೆ ಆಗಮಿಸಿದ್ದ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಿ ಜೈರಾಮ್ ರಮೇಶ್ ಅವರು ಕೇಂದ್ರ ಸರ್ಕಾರದ ಪರವಾಗಿ ಸಹಿ ಹಾಕಿದ ಒಪ್ಪಂದವು ಮುಂದಿನ 6 ತಿಂಗಳಲ್ಲಿ ಭೂ ಸುಧಾರಣೆಗಳನ್ನು ಕೈಗೊಳ್ಳುವ ಮತ್ತು ಎಲ್ಲಾ ವಸತಿರಹಿತರಿಗೆ 10 ಸೆಂಟ್ಸ್ ಜಾಗವನ್ನು ಪಡೆಯುವ ಹಕ್ಕನ್ನು ಕಾನೂನುಬದ್ಧಗೊಳಿಸುವ ಭರವಸೆಯನ್ನು ನೀಡುತ್ತದೆ. ಭೂಮಿಗೆ ಸಂಬಂಧಪಟ್ಟ ಪ್ರಕರಣಗಳನ್ನು ತುರ್ತಾಗಿ ಇತ್ಯರ್ಥಪಡಿಸುವ ವಿಶೇಷ ನ್ಯಾಯಮಂಡಳಿಗಳನ್ನು ರಚಿಸುವುದು ಈಗಾಗಲೇ ಜಾರಿಯಲ್ಲಿರುವ ಕಾಯ್ದೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಿ ಆದಿವಾಸಿಗಳು ದಲಿತರು ಮತ್ತು ಇತರ ದುರ್ಬಲ ವರ್ಗಗಳಿಗೆ ಸೇರಿದ ಜನರಿಗೆ ಭೂಮಿಯ ಹಕ್ಕನ್ನು ನೀಡುವುದು ಈ ಒಪ್ಪಂದದ ಇತರ ಕೆಲವು ಭರವಸೆಗಳು. ಈ ಒಪ್ಪಂದವನ್ನು ಜಾರಿಗೆ ತರಲು ಸಚಿವ ಜೈರಾಮ್ ರಮೇಶ್ ನೇತೃತ್ವದಲ್ಲಿ ಒಂದು ಕಾರ್ಯಪಡೆಯನ್ನು ರಚಿಸಲಾಗಿದ್ದು ಅದರ ಮೊದಲ ಸಭೆ ಅಕ್ಟೋಬರ್ 17 ರಂದು ನಡೆಯಲಿದೆ ಎನ್ನಲಾಗಿತ್ತು.

ಈ ಬೃಹತ್ ಪಾದಯಾತ್ರೆ 2011ರ ಅಕ್ಟೋಬರ್ ತಿಂಗಳಲ್ಲಿ ಕನ್ಯಾಕುಮಾರಿಯಿಂದ ಹೊರಟಿತ್ತು, ಸುಮಾರು 352 ಜಿಲ್ಲೆಗಳಲ್ಲಿ ಹಾದು 80,000 ಕಿ.ಮಿ. ಕ್ರಮಿಸಿ ರಾಜಧಾನಿಗೆ ತಲುಪಿತ್ತು. ಪಾದಯಾತ್ರೆ ಮಧ್ಯಪ್ರದೇಶದ ಗ್ವಾಲಿಯರ್ ತಲುಪಿದಾಗ ಸುಮಾರು 60,000 ಸಾವಿರ ಜನ ಪಾದಯಾತ್ರೆಯಲ್ಲಿ ಸೇರಿಕೊಂಡಿದ್ದರು ಎಂದು ಅಕ್ಟೋಬರ್ 3 ರ 'ಹಿಂದೂ' ಪತ್ರಿಕೆ ವರದಿ ಮಾಡಿತ್ತು. ಇಷ್ಟೊಂದು ಸಂಖ್ಯೆಯಲ್ಲಿ ಜನ ರಾಜಧಾನಿಗೆ ಲಗ್ಗೆ ಹಾಕಲು ಬರುತ್ತಿರುವುದನ್ನು ಗಮನಿಸಿ ಗಾಬರಿಗೊಂಡ ಕೇಂದ್ರ ಸರ್ಕಾರ ಇಬ್ಬರು ಮಂತ್ರಿಗಳನ್ನು ಗ್ವಾಲಿಯರ್‌ಗೆ ಕಳುಹಿಸಿತು. ಅಲ್ಲಿಗೆ ಹಾರಿ ಬಂದ ಗ್ರಾಮೀಣ ಅಭಿವೃದ್ಧಿ ಮಂತ್ರಿ ಜೈರಾಮ್ ರಮೇಶ್ ಮತ್ತು ವಾಣಿಜ್ಯ ಮಂತ್ರಿ ಜ್ಯೋತಿರ್ಯಾಧಿತ್ಯ ಸಿಂಧಿಯಾ ಇಬ್ಬರೂ ಎಷ್ಟೇ ಪ್ರಯತ್ನ ಪಟ್ಟರು ಪಾದಯಾತ್ರೆಯನ್ನು ನಿಲ್ಲಿಸಲು ಜನ ಒಪ್ಪಲಿಲ್ಲ.

ಭೂಮಿಯ ಪ್ರಶ್ನೆ ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಸೇರುವ ಪ್ರಶ್ನೆಯಾಗಿದೆ ಎಂದು ಮಂತ್ರಿಗಳು ಜನರಿಗೆ ತಿಳಿಹೇಳಲು ಪ್ರಯತ್ನಸಿದರು. ಕೇಂದ್ರ ಸರ್ಕಾರ ಕಾರ್ಪೊರೇಟ್ ಕಂಪನಿಗಳಿಗೆ ಸಾವಿರಾರು ಎಕರೆ ಭೂಮಿಯನ್ನು ಹಸ್ತಾಂತರಿಸಲು ದೋರಣೆಗಳನ್ನು ರೂಪಿಸಲು ಸಾಧ್ಯವಿದೆ ಎನ್ನುವುದಾದರೆ ಬಡ ಭೂರಹಿತರಿಗೆ ನಿವೇಶನ ರಹಿತರಿಗಾಗಿ ಭೂಮಿಯನ್ನು ಒದಗಿಸಲು ಯಾಕೆ ಸಾಧ್ಯವಿಲ್ಲ ಎಂದು ಪ್ರಶ್ನಿಸುವ ಮೂಲಕ ಜನ ಮಂತ್ರಿಗಳ ಬಾಯಿ ಮುಚ್ಚಿಸಿದರು. ಧನಲಕ್ಷ್ಮಿ ಎಂಬ ತಮಿಳುನಾಡಿನ ಪಲಿಯಾರ್ ಬುಡಕಟ್ಟು ಸಮುದಾಯಕ್ಕೆ ಸೇರಿದ ಮಹಿಳೆ ಹೇಳಿದ್ದು ಗಮನಿಸಿ, ಜಿಲ್ಲಾಧಿಕಾರಿಯ ಹತ್ತಿರ ಹೋದರೆ, ಮೇಲಿಂದ ಆದೇಶ ತೆಗೆದುಕೊಂಡು ಬನ್ನಿ ಎನ್ನುತ್ತಾರೆ. ಆದ್ದರಿಂದ ಮೇಲಿನಿಂದ ಆದೇಶ ತರುವುದಕ್ಕಾಗಿ ದೆಹಲಿಗೆ



ಹೋಗುತ್ತಿದ್ದೇವೆ. 2006ರ ಅರಣ್ಯ ಹಕ್ಕುಗಳ ಕಾಯ್ದೆ ಜಾರಿಗೆ ಬಂದ ನಂತರವು ಆದಿವಾಸಿ ಗಿರಿಜನರಿಗೆ ಅರಣ್ಯ ಹಕ್ಕು ಲಭ್ಯವಾಗುತ್ತಿಲ್ಲ. ಅವರು ಹುಟ್ಟಿ [illegible] ಭೂಮಿಯಿಂದ ಅವರನ್ನು ಒಕ್ಕಲೆಬ್ಬಿಸಲಾಗಿದ್ದು ಅವರು ದೊಡ್ಡ ದೊಡ್ಡ ಪ್ಲಾಂಟರುಗಳ ಕೋಟೆಗಳಲ್ಲಿ ಜೀತದಾಳಾಗಿ ದುಡಿಯುತ್ತಿದ್ದಾರೆ. ಇದೇ ರೀತಿಯ ಒಂದು ಪಾದಯಾತ್ರೆಯು 2007ರಲ್ಲಿ ಸಂಘಟಿಸಲಾಗಿತ್ತು. ಆಗ [illegible] ಸಾವಿರ ಜನ ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು. ಅದರ ಪರಿಣಾಮವಾಗಿ ಪ್ರಧಾನ ಮಂತ್ರಿ ನೇತೃತ್ವದಲ್ಲಿ ಭೂಸುಧಾರಣೆಗಳ ಕೌನ್ಸಿಲ್ ರಚನೆಯಾಗಿತ್ತು. ಈಗ ಸುಮಾರು 5 ವರ್ಷಗಳಾಗುತ್ತಿದ್ದರೂ ಅದರ ಒಂದು ಸಭೆಯನ್ನು ಇದುವರೆಗೂ ಕರೆದಿಲ್ಲ. ಉದಾರೀಕರಣದ ವ್ಯಾಮೋಹಕ್ಕೆ ಸಿಕ್ಕಿ ಹಾಕಿಕೊಂಡಿರುವ ಭಾರತ ಸರ್ಕಾರ "ಭೂಸುಧಾರಣೆಗಳು ಮುಗಿದ ಅಧ್ಯಾಯ" ಎಂದು ಪ್ರತಿಪಾದಿಸುತ್ತಿದೆ. ಆದರೆ ಈ ಬೃಹತ್ ಪಾದಯಾತ್ರೆಯಲ್ಲಿ ಸುಮಾರು ಒಂದು ಲಕ್ಷ ಬಡ ಭೂರಹಿತರು ಪಾಲ್ಗೊಂಡು ದೆಹಲಿಗೆ ಕಾಲ್ನಡಿಗೆಯಲ್ಲಿ ಹೊರಟಿರುವುದು ಏನನ್ನು ತೋರಿಸುತ್ತಿದೆ. ಭೂಮಿಯ ಹಸಿವು ಅವರನ್ನು ಸುಡುತ್ತಿದೆ. ಅವರು ಯಾರನ್ನು ಕಾಯಲು ಸಿದ್ದರಿಲ್ಲ. ಅವರು ನುಗ್ಗುತ್ತಾರೆ. ಭೂಮಿಯನ್ನು ವಶಪಡಿಸಿ ಕೊಳ್ಳುತ್ತಾರೆ. ಜಮಿನ್ದಾರರ ಭೂಮಿ, ಸರ್ಕಾರದ ಭೂಮಿ, ಅರಣ್ಯ ಭೂಮಿ ಯಾವುದನ್ನು ಅವರು ಬಿಡಲಾರರು. ಯಾವ ಕಾನೂನು ಅವರನ್ನು ತಡೆಹಿಡಿಯಲಾರದು. ಯಾವ ಜೈಲು ಅವರನ್ನು ಬಂಧಿಸಲಾರದು. ಭೂಮಿಯ ಪ್ರಶ್ನೆ ಆದ್ದರಿಂದ ಇಂದಿಗೂ ಪ್ರಸ್ತುತವಾಗಿದೆ. ಅದು ಇತ್ಯಾರ್ಥವಾಗದೆ ದೇಶದ ಪ್ರಗತಿ ಸಾಧ್ಯವಿಲ್ಲ. ಜಾತಿಪದ್ದತಿ, ಲಿಂಗತಾರತಮ್ಯ ಇಂತಹ ಸಾಮಾಜಿಕ ಅನಿಷ್ಠಗಳು ನಿರ್ಮೂಲನೆ ಆಗುವುದಿಲ್ಲ. ಆದ್ದರಿಂದ ಕರ್ನಾಟಕ ಪ್ರಾಂತ ರೈತಸಂಘ, ಕೃಷಿಕೂಲಿಕಾರರ ಸಂಘ ಹಮ್ಮಿಕೊಂಡಿರುವ ಜೈಲ್ ಭರೋ ಚಳುವಳಿ ಮಹತ್ವದಾಗುತ್ತಿದೆ.

ವಸತಿ ಸಮಸ್ಯೆ ಬಗೆಹರಿಸಿ

ಪುಟ 3 ರಿಂದ

ಜಿಲ್ಲೆಗಳಲ್ಲಿ ಅರಣ್ಯ ಭೂಮಿಯಲ್ಲಿ ವಾಸಿ ಇರುವ ಜನರ ಸಮಸ್ಯೆ ಇನ್ನೊಂದು ರೀತಿಯದ್ದಾಗಿದ್ದು 2006ರ ಅರಣ್ಯ ಹಕ್ಕುಗಳ ಕಾಯ್ದೆಗೆ ಅಗತ್ಯ ತಿದ್ದುಪಡಿಮಾಡಿ ಅವರಿಗೆ ಅರಣ್ಯ ಭೂಮಿಯ ಹಕ್ಕು ದೊರೆಯುವಂತಾಗಬೇಕಾಗಿದೆ.

2009 ರ ನೆರೆ ಹಾವಳಿಗೆ ತುತ್ತಾದ ಉತ್ತರ ಕರ್ನಾಟಕದ ಸಂತ್ರಸ್ತರಿಗೆ ಇದುವರೆಗೂ ಪೂರ್ಣ ಪ್ರಮಾಣದಲ್ಲಿ ಮನೆಗಳ ನಿರ್ಮಾಣವಾಗಲಿಲ್ಲ. ಕೆಲವು ಕಡೆ ಮನೆಗಳನ್ನು ವಿತರಿಸಲಾಗಿದ್ದರೂ, ಮನೆಗಳಿಗೆ ವಿದ್ಯುತ್ ಸಂಪರ್ಕ, ಕುಡಿಯುವ ನೀರಿನ ವ್ಯವಸ್ಥೆ, ರಸ್ತೆ, ಚರಂಡಿ ನಿರ್ಮಾಣ ಮುಂತಾದವುಗಳು ಆಗಿಲ್ಲ. ಕೆಲವು ಕಡೆ ಕಟ್ಟಿದ ಮನೆಗಳು ಯಾವುದೇ ಕ್ಷಣದಲ್ಲಿ ಬಿದ್ದು ಹೋಗುವ ಅಪಾಯವಿದ್ದು ಪಲಾನುಭವಿಗಳು ಆ ಮನೆಗಳೊಳಗೆ ಪ್ರವೇಶಿಸಲು ಹಿಂಜರಿಯುತ್ತಿದ್ದಾರೆ.

ಆಶ್ರಯ, ಬಸವ, ಇಂದಿರಾ ಅವಾಸ್, ವಾಜಪೇಯಿ, ಅಂಬೇಡ್ಕರ್, ರಾಜೀವ್‌ಗಾಂಧಿ ಮೊದಲಾದ ವಸತಿ ಯೋಜನೆ ಅಡಿಯಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ಸಬ್ಸಿಡಿ ಸಹಿತದ ಸಾಲವನ್ನು ನೀಡುವಾಗಲೂ ಫಲಾನುಭವಿಗಳು ಹಲವು ರೀತಿಯಿಂದ ಕಿರುಕುಳ ಅನುಭವಿಸುತ್ತಾರೆ. ಹಣದ ಕಂತನ್ನು ಸಕಾಲದಲ್ಲಿ ನೀಡದೆ ಸತಾಯಿಸುತ್ತಾರೆ. ಒಟ್ಟಾರೆಯಾಗಿ ನಿವೇಶನ ರಹಿತರು ಮತ್ತು ವಸತಿರಹಿತರು ತಮ್ಮ ಮೂಲಭೂತ ಹಕ್ಕನ್ನು ಅನುಭವಿಸಲು ಹರಸಾಹಸ ಪಡಬೇಕಾದ ಪರಿಸ್ಥಿತಿ ಇದೆ. ರಾಜ್ಯದ ಆದಿವಾಸಿ ಜನ ಸಮುದಾಯಗಳು, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದವರು ವಸತಿ ಸಮಸ್ಯೆಯನ್ನು ಅತಿ ಹೆಚ್ಚಾಗಿ ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಪ್ರಾಂತ್ರ ರೈತ ಸಂಘ ಮತ್ತು ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ಇದೇ ನವಂಬರ್ 5 ರಂದು ಮನೆ ನಿವೇಶನಗಳಿಗಾಗಿ ಮತ್ತು ಭೂಮಿಯ ಹಕ್ಕಿಗಾಗಿ ನಡೆಸಲು ಉದ್ದೇಶಿಸಿರುವ "ಬಂಧನಕ್ಕೆ ಒಳಗಾಗುವ ಚಳುವಳಿ" ತುಂಬಾ ಮಹತ್ವವನ್ನು ಪಡೆಯುತ್ತಿದೆ.

ಬಳ್ಳಾರಿ: ಗಣಿಗಾರಿಕೆ ರಾಷ್ಟ್ರೀಕರಣಕ್ಕೆ ಒತ್ತಾಯ ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿ

ಬೇಲೇಕೇರಿ ಅದಿರು ಹಗರಣದಲ್ಲಿ ಭಾಗಿಯಾದವರನ್ನು ಜೈಲಿಗೆ ಕಳುಹಿಸಬೇಕು, ಗಣಿಗಾರಿಕೆಯನ್ನು ರಾಷ್ಟ್ರೀಕರಿಸಬೇಕು ಎಂದು ಒತ್ತಾಯಿಸಿ ಸಿಪಿಐ(ಎಂ) ಪಕ್ಷದ ಬಳ್ಳಾರಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಸೆ. 17, 2012 ರಂದು ಬಳ್ಳಾರಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಪ್ರತಿಭಟನಾ ಧರಣಿಯನ್ನು ಸಂಘಟಿಸಲಾಗಿತ್ತು. ಈ ಸಂದರ್ಭದಲ್ಲಿ ಧರಣಿ ನಿರತರನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್. ನಾಗರಾಜ್, ರಾಜ್ಯ ಸಮಿತಿ ಸದಸ್ಯರು, ಬಳ್ಳಾರಿ ಜಿಲ್ಲಾ ಕಾರ್ಯದರ್ಶಿಗಳೂ ಆದ ಆರ್. ಎಸ್. ಬಸವರಾಜ ಮುಂತಾದವರು ಮಾತನಾಡಿದರು.

ಕರ್ನಾಟಕದ ಗಣಿ ಹಗರಣಗಳಿಗೆ ಸಂಬಂಧಿಸಿ ಸುಪ್ರೀಂಕೋರ್ಟು ನೀಡಿದ ಎರಡು ವರದಿಗಳ ಮೇಲೆ ಬೇಲೆಕೇರಿ ಬಂದರಿನ ಅದಿರು ಕಳ್ಳತನ ಮತ್ತು ಆಕ್ರಮ ಆದಿರು ರಫ್ತಿನ ಬಗ್ಗೆ ಸಿಬಿಐ ತನಿಖೆಗೆ ಸುಪ್ರೀಂಕೋರ್ಟು ನೀಡಿದ ಆದೇಶವನ್ನು ಸಿಪಿಐ(ಎಂ) ಸ್ವಾಗತಿಸಿದೆ. ಮತ್ತು ನಂತರ ಸಿಬಿಐ ಕೈಗೊಂಡಿರುವ ತನಿಖೆಗಳನ್ನು ಸಿಪಿಐ(ಎಂ) ಸ್ವಾಗತಿಸಿದೆ ಎಂದು ಜಿ.ಎನ್ ನಾಗರಾಜ್ ಹೇಳಿದರು.

ಆದರೆ ಈ ತನಿಖೆ ಜನವರಿ 10, 2009 ರಿಂದ ಮೇ 31, 2010 ರ ಅಲ್ಪಾವಧಿಗೆ ಮಾತ್ರ ಸೀಮಿತವಾಗಿದೆ. ಮತ್ತು ಈ ಅವಧಿಯ ಆಕ್ರಮ ಸಾಗಾಣಿಕೆ ಮತ್ತು ರಫ್ತಿನ ಬಗ್ಗೆ ಮಾತ್ರ ಮತ್ತು ಬೇಲೆಕೇರಿ ಎಂಬ ಒಂದು ಬಂದರಿನ ಆಕ್ರಮ ರಫ್ತಿಗೆ ಮಾತ್ರ ಸೀಮಿತವಾಗಿದೆ. ಗಣಿಗಾರಿಕೆಯ ಬಗ್ಗೆ ಇನ್ನುಳಿದ ಸಿಬಿಐ ತನಿಖೆ ಆಂಧ್ರ ಪ್ರದೇಶಕ್ಕೆ ಸಂಬಂಧಿಸಿದ್ದಾಗಿದೆ, ಕರ್ನಾಟಕದಲ್ಲಿ ನಡೆದಿರುವ ಅಕ್ರಮ ಗಣಗಾರಿಕೆಯ ಕುರಿತು ಸಮಗ್ರವಾದ ತನಿಖೆಯಾಗಬೇಕು ಎಂದು ಜಿ.ಎನ್. ಒತ್ತಾಯಿಸಿದರು.

ಸುಪ್ರೀಂಕೋರ್ಟಿನ ಈ ತೀರ್ಪು ಬೇಲೆಕೇರಿ ಬಂದರಿನ ಅದಿರು ಕಳ್ಳತನದ ಬಗ್ಗೆ ಕರ್ನಾಟಕದ ಸಿಡಿಐ ತನಿಖೆಯ ಅದಕ್ಷತೆ ಮತ್ತು ಈ ತನಿಖೆಯ ಮೇಲೆ ರಾಜಕೀಯ ಮಧ್ಯ ಪ್ರವೇಶದ ಪರಿಣಾಮವನ್ನು ಎತ್ತಿ ತೋರಿಸುತ್ತದೆ. ಇಲ್ಲಿಯವರಿಗೆ ಲೋಕಾಯುಕ್ತ ವರದಿಯನ್ನು ಆಧರಿಸಿ ತನಿಖೆ ನಡೆಸದ ಹಾಗೂ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ತೀರ್ಮಾನ ಕೈಗೊಳ್ಳದ ರಾಜ್ಯ ಬಿಜೆಪಿಯ ಮೂರು ಮುಖ್ಯಮಂತ್ರಿಗಳ ಸರ್ಕಾರಗಳ ಭ್ರಷ್ಟ ರಾಜಕೀಯ ಮತ್ತು ಆಡಳಿತವನ್ನೇ ಎತ್ತಿ ತೋರಿಸುತ್ತದೆ ಎಂದು ನಾಗರಾಜ್ ತೀಕ್ಷ್ಣವಾಗಿ ಟೀಕಿಸಿದರು.

ಈ ಹಿನ್ನಲೆಯಲ್ಲಿ ಸುಪ್ರೀಂ ಕೋರ್ಟ್ ತೀರ್ಪು ಕರ್ನಾಟಕ ಸರ್ಕಾರದ ಮುಖಕ್ಕೆ ಎತ್ತಿದಂತಾಗಿದೆ. ಮತ್ತು ಬಿಜೆಪಿ ಪಕ್ಷ ಮತ್ತು ಸರ್ಕಾರ ಕರ್ನಾಟಕ ಜನರ ಹಿತವನ್ನು, ಕರ್ನಾಟಕದ ನೈಸರ್ಗಿಕ ಸಂಪನ್ಮೂಲಗಳನ್ನು ಮತ್ತು ಕರ್ನಾಟಕ ಪರಿಸರವನ್ನು ಸಂರಕ್ಷಿಸಲಾಗದ ಸರ್ಕಾರ ಇದು ಎಂದು ಸಾಬೀತಾಗಿದೆ. ಲೋಕಾಯುಕ್ತ ಅಧಿಕಾರಿಗಳೇ ವಶಪಡಿಸಿಕೊಂಡ ಅದಿರನ್ನು ರಾಜರೋಷವಾಗಿ ಹಗಲು ದರೋಡೆ ಮಾಡಲು ಅವಕಾಶ ಮಾಡಿಕೊಟ್ಟ ಸರ್ಕಾರ– ರಾಜ್ಯ ಬಿಜೆಪಿ ಸರ್ಕಾರ ಎಂದು ಸಾಬೀತಾಗಿದೆ ಎಂದು ಜಿ.ಎನ್. ಕುಟುಕಿದರು.


ಕರ್ನಾಟಕ ರಾಜ್ಯಕ್ಕೆ ಒದಗಿದ ಇಂತಹ ದುಸ್ಥಿತಿಗೆ ಕಾರಣರಾದ ಕರ್ನಾಟಕ ಗೃಹ ಹಾಗು ಸಾರಿಗೆ ಸಚಿವ ಅಶೋಕ್ ಹಾಗು ಈ ಅದಿರು ಕಳ್ಳತನ ಮತ್ತು ಅಕ್ರಮ ದಂಧೆಯಲ್ಲಿ ಭಾಗಿಯಾಗಿರುವ ಇಂದಿನ ಸಚಿವರಾದ ಆನಂದಸಿಂಗ್ ಮೊದಲಾದವರ ರಾಜಿನಾಮೆಯನ್ನು ತಕ್ಷಣವೇ ಪಡೆಯ ಬೇಕೆಂದು

ಪುಟ 15 ಕ್ಕೆ



ಹಾಸ್ಟೆಲ್ ದಿನಗೂಲಿ ನೌಕರರ ಹೋರಾಟಕ್ಕೆ ಮೊದಲ ಜಯ: ಚೆಕ್ ಮೂಲಕ ವೇತನ ವಿತರಣೆ

ಗುಲ್ಬರ್ಗಾ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಇರುವ ಎಸ್.ಸಿ./ ಎಸ್.ಟಿ.,ಬಿ.ಸಿ.ಎಂ, ಹಾಸ್ಟೇಲುಗಳಲ್ಲಿ ಹಾಗೂ ಮುರಾರ್ಜಿ ಹಾಗೂ ಕಿತ್ತೂರ ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ದುಡಿಯುತ್ತಿರುವ ದಿನಗೂಲಿ ನೌಕರರು (ದಲಿತ ಮಹಿಳೆಯರೇ ಬಹುಸಂಖ್ಯಾತರು) ಇತ್ತೀಚೆಗೆ ಜಿಲ್ಲಾ ಸಮಾಜ



ಕಲ್ಯಾಣ ಇಲಾಖೆಯ ಕಛೇರಿ ಎದುರು ಏರ್ಪಡಿಸಿದ ಅನಿರ್ದಿಷ್ಟ ಸಾಮೂಹಿಕ ಧರಣಿ ಮುಷ್ಕರದಿಂದ ಮೊದಲ ಹಂತದ ಜಯ ಪ್ರಾಪ್ತವಾಗಿದೆ. ಧರಣಿ ಮುಷ್ಕರದ ಮಾರನೇ ದಿನ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹೋರಾಟ ನಿರತ ನೌಕರರ ಮುಖಂಡರೊಂದಿಗೆ ಚರ್ಚೆ ನಡೆಸಿ ಹಾಜರಿದ್ದ ನೌಕರರಿಗೆ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಸುರೇಶ್ ಜಾಧವ್ ಅವರು ಚೆಕ್ ವಿತರಣೆ ಮಾಡುವುದರೊಂದಿಗೆ ನೌಕರರ ತಕ್ಷಣದ ಒಂದು ಬೇಡಿಕೆ ಈಡೇರಿದಂತಾಗಿದೆ.




ರಾಜ್ಯದೆಲ್ಲೆಡೆ ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ ಅಡುಗೆ, ಸ್ವಚ್ಛತೆ, ವಾಚ್‌ಮನ್ ಮೊದಲಾದ ಕೆಲಸಗಳನ್ನು ಮಾಡುತ್ತಿರುವ ದಿನಗೂಲಿ (ಗುತ್ತಿಗೆ) ನೌಕರರು ತೀವ್ರ ಶೋಷಣೆಯನ್ನು ಅನುಭವಿಸುತ್ತಿರುತ್ತಾರೆ. ಹತ್ತಿಪ್ಪತ್ತು ವರ್ಷಗಳಿಂದ ಇವರು ದುಡಿಯುತ್ತಿದ್ದರೂ, ಕಾಯಂ ಸ್ವರೂಪದ ಕೆಲಸಕ್ಕಾಗಿ ಅವರನ್ನು ನಿಯೋಜಿಸಲಾಗಿದ್ದರೂ ಅವರ ಸೇವೆಯನ್ನು ಕಾಯಂಗೊಳಿಸಿ ಕಾನೂನುಬದ್ಧ ವೇತನ ಮತ್ತಿತ್ತರ ಸೌಲಭ್ಯಗಳನ್ನು ನಿರಾಕರಿಸಲಾಗಿದೆ. ಇವರನ್ನು ವಂಚಕ ಎನ್.ಜಿ.ಓ.ಗಳ ಮೂಲಕ ಗುತ್ತಿಗೆ ಆಧಾರದಲ್ಲಿ ದುಡಿಸುತ್ತಾರೆ. ಇವರಲ್ಲಿ ಒಬ್ಬೊರಿಗಾಗಿ ಸರ್ಕಾರ ಒದಗಿಸುವ ರೂ. 4,800 ಮತ್ತು ರೂ. 4,600 ರ ಬದಲಾಗಿ ರೂ. 2,600 ಮತ್ತು 2,400 ಮಾತ್ರ ನೀಡುತ್ತಾರೆ. ಹೀಗ್ಯಾಕೆ ಎಂದು ಪ್ರಶ್ನೆ ಮಾಡಿದರೆ ಕೆಲಸದಿಂದ ಕಿತ್ತುಹಾಕುವ ಬೆದರಿಕೆ ಹಾಕುತ್ತಾರೆ. ಹೀಗೆ ಈ ಎನ್.ಜಿ.ಓ.ಗಳು ಸರ್ಕಾರದಿಂದಲೂ ಕಮೀಶನ್ ಹೊಡೆಯುತ್ತಾರೆ ಮತ್ತು ನೌಕರರ ಹಣವನ್ನು ಕದಿಯುತ್ತಾರೆ.

ಬಹುದಿನಗಳ ಈ ಅನ್ಯಾಯವನ್ನು ಸಹಿಸಲಾಗದೆ ಗುಲ್ಬರ್ಗಾ ಜಿಲ್ಲೆಯ ಹಾಸ್ಟೇಲ್ ನೌಕರರು, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೆರವು ಹಾಗೂ ಮಾರ್ಗದರ್ಶನ ಅಡಿಯಲ್ಲಿ 'ಜಿಲ್ಲಾ ಸರ್ಕಾರಿ ವಿದ್ಯಾರ್ಥಿ ನಿಲಯಗಳ ದಿನಗೂಲಿ ನೌಕರರ ಸಂಘ' ರಚಿಸಿಕೊಂಡು ಸಂವಿಧಾನಬದ್ಧವಾಗಿ ಹೋರಾಟದ ದಾರಿ ಹಿಡಿದಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ರಾಜ್ಯದ ಸಮಾಜ ಕಲ್ಯಾಣ ಸಚಿವರಾದ ಎ. ನಾರಾಯಣಸ್ವಾಮಿ ಅವರನ್ನು ಒಮ್ಮೆ ಬೆಂಗಳೂರಿನಲ್ಲಿ ಮತ್ತೆ ಇನ್ನೊಮ್ಮೆ ಗುಲ್ಬರ್ಗಾದಲ್ಲಿ ಭೇಟಿಯಾಗಿ ತಮ್ಮ ಸಮಸ್ಯೆಗಳನ್ನು ವಿವರಿಸಿದ್ದಾರೆ. ಕೊನೆಗೆ ಅನಿವಾರ್ಯವಾಗಿ ಆ 9ರಿಂದ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಕಛೇರಿ ಎದುರು ಸಾಮೂಹಿಕ ಧರಣಿ ಮುಷ್ಕರ-ಹೂಡಿದ್ದಾರೆ. ಹಗಲು-ರಾತ್ರಿ ನಡೆದ ಈ ಮುಷ್ಕರದಲ್ಲಿ ಪಾಲ್ಗೊಂಡ ನೌಕರರು ರಸ್ತೆಯಲ್ಲೇ ಒಲೆ ಹಚ್ಚಿ ಅಡುಗೆ ಮಾಡಿಕೊಳ್ಳುವ ವಿನೂತನ ರೀತಿಯಲ್ಲಿ ಪ್ರತಿಭಟಿಸಿ ಸಾರ್ವಜನಿಕರ ಗಮನ ಸೆಳೆದಿದ್ದಾರೆ. ಮುಷ್ಕರ 3ನೇ ದಿನಕ್ಕೆ ಕಾಲಿಟ್ಟ ನಂತರವಷ್ಟೇ ಅಧಿಕಾರಿಗಳು ನೌಕರರ ವೇತನವನ್ನು ಚೆಕ್ ಮೂಲಕ ನೀಡಲು ಸಮ್ಮತಿಸಿದ್ದಾರೆ. ನೌಕರರನ್ನು ಎನ್.ಜಿ.ಓ. ಗಳ ಮೂಲಕ ದುಡಿಸುವುದನ್ನು ಕೈಬಿಟ್ಟು ಇಲಾಖೆಯೇ ನೇರವಾಗಿ ಸಂಬಳ ನೀಡಬೇಕು, ಇದುವರೆಗೆ ಸಂಬಳದಿಂದ ಕಡಿತ ಮಾಡಲಾದ ಇ.ಪಿ.ಎಫ್. ಮತ್ತು ಇ.ಎಸ್.ಐ. ಹಣವನ್ನು ಅವರವರ ಖಾತೆಗೆ ಜಮಾ ಮಾಡಬೇಕು. ಕನಿಷ್ಠ 5 ವರ್ಷ ಸೇವೆ ಸಲ್ಲಿಸಿದ ದಿನಗೂಲಿ ನೌಕರರನ್ನು


ಪುಟ 15 ಕ್ಕೆ

ಮತ್ತೆ ಪ್ರಧಾನಿಗಳ ಬುಡಕ್ಕೆ 2ಜಿ ಹಗರಣದ ಭೂತ



ವೇದರಾಜ ಎನ್.ಕೆ.

2ಜಿ ಹಗರಣದ ತನಿಖೆ ನಡೆಸುತ್ತಿರುವ ಜಂಟಿ ಸಂಸದೀಯ ಸಮಿತಿಯ(ಕಾಂಗ್ರೆಸ್ ಪಕ್ಷಕ್ಕೆ ಸೇರಿದ) ಅಧ್ಯಕ್ಷರು ಯಾವುದೇ ಅರ್ಥಪೂರ್ಣ ತನಿಖೆಯನ್ನು ಬುಡಮೇಲು ಮಾಡುತ್ತಿದ್ದಾರೆ ಎಂದು ಸಮಿತಿಯ ಸಿಪಿಐ ಸದಸ್ಯರು ಮತ್ತು ಬಿಜೆಪಿ ಸದಸ್ಯರು ಸಮಿತಿಯಿಂದ ಹೊರನಡೆಯುವ ನಿರ್ಧಾರ ಪ್ರಕಟಿಸಿರುವ ಸಂದರ್ಭದಲ್ಲೆ ಮಾಜಿ ಸಂಪುಟ ಕಾರ್ಯದರ್ಶಿಗಳು ಸಮಿತಿಯ ಮುಂದೆ ಪ್ರಶ್ನೆಗಳಿಗೆ ಉತ್ತರಿಸುತ್ತ ಹೇಳಿರುವ ಹೊಸ ಸಂಗತಿ ಯುಪಿಎ-2 ಸರಕಾರಕ್ಕೆ, ಮುಖ್ಯವಾಗಿ ಅದರ 'ಪ್ರಾಮಾಣಿಕ' ಮುಖ್ಯಸ್ಥರಿಗೆ ಹೊಸ ಪೇಚನ್ನು ತಂದಿದೆ.


ಕೃಪೆ : ದಿ ಹಿಂದು

ಜೆಪಿಸಿಯ ಸಿಪಿಐ ಸದಸ್ಯರ ತೀಕ್ಷ್ಣ ಪ್ರಶ್ನೆಗಳಿಗೆ ಉತ್ತರಿಸುತ್ತಾ ಈ ಹಗರಣದ ವೇಳೆಯಲ್ಲಿ ಸಂಪುಟ ಕಾರ್ಯದರ್ಶಿಯಾಗಿದ್ದ ಕೆ.ಎಂ. ಚಂದ್ರಶೇಖರ್ ತಾನು ಒಂದು ಟಿಪ್ಪಣಿಯನ್ನು ಪ್ರಧಾನಿಗಳಿಗೆ ಕಳಿಸಿದ್ದು, ಅದರಲ್ಲಿ ಅಖಿಲ ಭಾರತ 2ಜಿ ತರಂಗಾಂತರ ಬೆಲೆಯನ್ನು 2001 ಆಧಾರದಲ್ಲಿ ನಿರೂಪಿಸಿದ್ದ 1,651 ಕೋಟಿ ರೂ.ಗಳಿಂದ 36,000 ಕೋಟಿ ರೂ.ಗಳಿಗೆ ಏರಿಸಬೇಕೆಂದು ಶಿಫಾರಸು ಮಾಡಿದ್ದಾಗಿ ತಿಳಿಸಿದ್ದಾರೆ. ಇದುವರೆಗೆ ಈ ಹಗರಣದ ಕುರಿತ ಹೇಳಿಕೆ, ತನಿಖೆಗಳಲ್ಲಿ ಈ ಟಿಪ್ಪಣಿಯ ಪ್ರಸ್ತಾವ ಎಲ್ಲೂ ಕಂಡು ಬಂದಿರಲಿಲ್ಲ. ಸ್ವತಃ ಪ್ರಧಾನಿಗಳು ಫೆಬ್ರುವರಿ 2011ರಲ್ಲಿ ನಡೆಸಿದ ಪತ್ರಿಕಾ ಸಮ್ಮೇಳನದಲ್ಲಾಗಲೀ, ನಂತರ ಸಂಸತ್ತಿನಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ದೇಶದ ಆಡಳಿತದ ಈ ಅತ್ಯಂತ ಉನ್ನತ ಅಧಿಕಾರಿಯ ಟಿಪ್ಪಣಿಯ ಪ್ರಸ್ತಾಪವನ್ನೇ ಮಾಡಿಲ್ಲ ಎಂಬ ಸಂಗತಿಯ ಬಗ್ಗೆ ಈಗ ಸುದ್ದಿ ವಿಶ್ಲೇಷಕರು ಆಶ್ಚರ್ಯ ವ್ಯಕ್ತಪಡಿಸುತ್ತಿದ್ದಾರೆ.

ಈ ಟಿಪ್ಪಣಿ ಕಳಿಸಿದ್ದು ಡಿಸೆಂಬರ್ 4, 2007ರಂದು, ಅಂದರೆ ಈ ಹಗರಣ ಹುಟ್ಟುವ 5 ವಾರಗಳ ಮೊದಲು. ಸಂಪುಟ ಕಾರ್ಯದರ್ಶಿಯವರು ತಾವಾಗಿಯೇ ಈ ಟಿಪ್ಪಣಿ ಕಳಿಸಿರಲಿಲ್ಲ, ಬದಲಿಗೆ 2ಜಿ ತರಂಗಾಂತರದ ಹಂಚಿಕೆಯನ್ನು 2001ರ ಬೆಲೆಗಳಲ್ಲಿ ಮಾಡುವುದರ ಹಣಕಾಸು ಪರಿಣಾಮಗಳೇನು ಎಂಬ ಪ್ರಧಾನ ಮಂತ್ರಿಗಳ ನಿರ್ದಿಷ್ಟ ವಿಚಾರಣೆಗೆ ಉತ್ತರವಾಗಿ ಕಳಿಸಿದ್ದು ಎಂಬುದು ಗಮನಾರ್ಹ. ಮಾರುಕಟ್ಟೆಯ ಆಕಾರ, ಮೊಬೈಲ್ ಬಳಕೆಯಲ್ಲಿ ತೀವ್ರ ಹೆಚ್ಚಳ ಮತ್ತು ಪೂರೈಕೆಗಿಂತ ಬೇಡಿಕೆ ಹೆಚ್ಚಿದ್ದ ಮಾರುಕಟ್ಟೆ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಂಡು ಈ ಭಾರೀ ಹೆಚ್ಚಳವನ್ನು ಸೂಚಿಸಲಾಗಿತ್ತು ಎಂದು ಮಾಜಿ ಸಂಪುಟ ಕಾರ್ಯದರ್ಶಿಗಳು ಸಮಜಾಯಿಷಿಯನ್ನೂ ಕೊಟ್ಟರು. 2001ರಿಂದ 2007ರ ನಡುವೆ 34% ಹಣದುಬ್ಬರವನ್ನು ಲೆಕ್ಕಕ್ಕೆ ತಗೊಂಡು, 5.5ಶೇ. ಸಾಲ ಬಡ್ಡಿ ದರವನ್ನು ಕಳೆದು ಲೆಕ್ಕ ಹಾಕಿದರೆ ಅದು 36,000 ಕೋಟಿ ರೂ. ಆಗುತ್ತದೆ, ಅಲ್ಲದೆ ತಾನು ಇಂತಹ ಲೆಕ್ಕಾಚಾರಕ್ಕೆ ತರಂಗಾಂತರ ಶುಲ್ಕ ಅಥವ ರೆವಿನ್ಯೂ ಪಾಲು ಮುಂತಾದ ಬೇರೆ ಮಾದರಿಗಳನ್ನೂ ಆ ಟಿಪ್ಪಣಿಯಲ್ಲಿ ಸೂಚಿಸಿದ್ದಾಗಿ ಅವರು ಜೆಪಿಸಿ ಮುಂದೆ ಹೇಳಿದರು.

ಪ್ರಧಾನ ಮಂತ್ರಿಗಳಿಂದ ಈ ಟಿಪ್ಪಣಿಯ ನಂತರ ಯಾವ ಪ್ರತಿಕ್ರಿಯೆಯೂ ಬರಲಿಲ್ಲವಂತೆ. ಈ ಟಿಪ್ಪಣಿಯ ಪ್ರಕಾರ ನಡೆದುಕೊಂಡಿದ್ದರೆ ಈ ಹಗರಣವೇ ಉಂಟಾಗುತ್ತಿರಲಿಲ್ಲ ಎಂದು ಹೇಳಲಾಗುತ್ತಿದೆ.

ಇದುವರೆಗೆ ತನಿಖೆಗಳಿಂದ ತಿಳಿದು ಬಂದಿರುವ ಸಂಗತಿಗಳ ಪ್ರಕಾರ ನವಂಬರ್ 2, 2007ರಂದು ಅಂದಿನ ದೂರಸಂಪರ್ಕ ಮಂತ್ರಿಗಳು ಕಾನೂನಿನ ಮೂಲಕ ಸಾಧ್ಯವಿರುವಲ್ಲಿ ಹರಾಜಿನ ಮೂಲಕ ಹಂಚಿಕೆಯಾಗಲೀ, ಇಲ್ಲವೇ, ಪ್ರವೇಶ ಶುಲ್ಕವನ್ನು ಹೆಚ್ಚಿಸುವುದಾಗಲೀ ಸಾಧ್ಯವಿಲ್ಲವೆಂದು ಪ್ರಧಾನ ಮಂತ್ರಿಗಳಿಗೆ ತಿಳಿಸಿದ್ದರು. ಆದರೆ ನವಂಬರ್ 22ರಂದು ಆಗಿನ ಹಣಕಾಸು ಕಾರ್ಯದರ್ಶಿ 2001ರ ಬೆಲೆಗಳಲ್ಲಿ ಹಂಚಿಕೆ ಸರಿಯಲ್ಲ, ಆದ್ದರಿಂದ ಮುಂದಿನ ಹಂಚಿಕೆಗಳನ್ನು ನಿಲ್ಲಿಸಬೇಕು ಎಂದು ದೂರಸಂಪರ್ಕ ಇಲಾಖೆಗೆ ಪತ್ರ ಬರೆದರು. ಇಂತಹ ಯಾವುದೇ ಹರಾಜು ಸಾಧ್ಯವಿಲ್ಲವೆಂದು ವಾದಿಸುವ ಪತ್ರವನ್ನು ನವಂಬರ 29ರಂದು ದೂರಸಂಪರ್ಕ ಇಲಾಖೆಯ ಕಾರ್ಯದರ್ಶಿಗಳು ಉತ್ತರವಾಗಿ ಕಳಿಸಿದರು. ಅಂದರೆ ಪ್ರಧಾನಮಂತ್ರಿಗಳು ಮತ್ತು ದೂರಸಂಪರ್ಕ ಮಂತ್ರಿಗಳು ಹಾಗೂ ಹಣಕಾಸು ಮತ್ತು ದೂರಸಂಪರ್ಕ ಕಾರ್ಯದರ್ಶಿಗಳ ನಡುವಿನ ಪತ್ರವ್ಯಹಾರಗಳೆಲ್ಲ ಮುಗಿದ ಮೇಲೆ ಸಂಪುಟ ಕಾರ್ಯದರ್ಶಿಗಳು ಪ್ರಧಾನ ಮಂತ್ರಿಗಳ ಕೇಳಿಕೆಯ ಮೇಲೆಯೆ ಕಳಿಸಿದ ಟಿಪ್ಪಣಿಯಿದು. ಇಂತಹ ಮಹತ್ವದ ಪತ್ರದ ಬಗ್ಗೆ ಇದುವರೆಗೆ ಸಿಬಿಐ ತನಿಖೆ ಸೇರಿದಂತೆ ಎಲ್ಲೂ ಪ್ರಸ್ತಾಪವಾಗದಿರುವುದು ಕಳವಳಕಾರಿ ಎಂದು ಜೆಪಿಸಿ ಸದಸ್ಯರು ಹೇಳಿದ್ದಾರೆ.

ಆದರೆ ಎಂದಿನಂತೆ ಜೆಪಿಸಿಯ ಅಧ್ಯಕ್ಷರು ತಮ್ಮ ಸಮಿತಿಯ ಮುಂದಿನ ಈ ಕಲಾಪಗಳ ಬಗ್ಗೆ ಪತ್ರಿಕೆಗಳಿಗೆ ತಿಳಿಸುವ ಬದಲು, ಇದು ಪ್ರಧಾನ ಮಂತ್ರಿಗಳ ಜವಾಬ್ದಾರಿಯಲ್ಲ ಎಂದು ಮತ್ತೆ ಅವರ ರಕ್ಷಣೆಗೆ ಧಾವಿಸಿದ್ದಾರೆ. ಮಾಜಿ ಸಂಪುಟ ಕಾರ್ಯದರ್ಶಿಗಳೂ, ತಮ್ಮ ಟಿಪ್ಪಣಿಯಲ್ಲಿ ಏನೇ ಹೇಳಿದ್ದರೂ ಸರಕಾರದಿಂದ 'ಆದಾಯ ಬಿಟ್ಟುಕೊಡುವಂತ'ದ್ದೇನೂ ನಡೆದಿಲ್ಲ ಎಂದಿದ್ದಾರೆ, ಇಂತಹ ಹಂಚಿಕೆಗಳಲ್ಲಿ ಆದಾಯವನ್ನು ಗರಿಷ್ಟಗೊಳಿಸಬೇಕು ಎಂದು ಸಂವಿಧಾನವೇನೂ ವಿಧಿಸುವುದಿಲ್ಲ ಎಂದು ಸ್ವತಃ ಸುಪ್ರಿಂ ಕೋರ್ಟ್ ಅಭಿಪ್ರಾಯ ಪಟ್ಟಿಲ್ಲವೇ ಎಂದೂ ಅವರು ತರ್ಕ ಮಾಡಿದ್ದಾರೆ. ಬಹುಶಃ ಇದರ ಆಧಾರದಲ್ಲೇ ಎಂದಿನಂತೆ ಪ್ರಧಾನಿಗಳ ದಿವ್ಯಮೌನ ಮುಂದುವರೆದಿದೆ.

ನಮಗೆಷ್ಟು ಇರಾನೀ ತೈಲ ಬೇಕೆಂದು ಅಮೆರಿಕಾಕ್ಕೆ ಗೊತ್ತಂತೆ!

ಭಾರತಕ್ಕೆ ಇರಾನಿನಿಂದ ವರ್ಷಕ್ಕೆ 15 ಮಿಲಿಯ ಟನ್ ತೈಲ ಬೇಕು, ಇದು ಅಮೆರಿಕಾಕ್ಕೆ ಅರ್ಥವಾಗುತ್ತದೆ ಎಂದು ಯುಪಿಎ-2 ಪೆಟ್ರೋಲಿಯಂ ಮಂತ್ರಿಗಳು ದುಬೈಯಲ್ಲಿ ಹೇಳಿದ್ದಾರೆ. ನಮ್ಮ ಎರಡು ಸಾರ್ವಭೌಮ ದೇಶಗಳ ನಡುವಿನ ವ್ಯವಹಾರ ಮೂರನೇ ದೇಶವೊಂದಕ್ಕೆ ಏಕೆ ಅರ್ಥವಾಗಬೇಕು ಎಂಬುದು ಸಹಜ ಪ್ರಶ್ನೆ. ಯುಪಿಎ-2 ಸರಕಾರ ಅಮೆರಿಕಾದ ವಿದೇಶಾಂಗ ನೀತಿಯ ಮೇಲೆ ಎಷ್ಟು ಅವಲಂಬಿಸಿದೆ ಎಂಬುದು ಈಗಾಗಲೇ ಅರ್ಥವಾಗಿರುವವರಿಗೆ ಅಮೆರಿಕಾಕ್ಕೆ ಏಕೆ ಅರ್ಥವಾಗಬೇಕು ಎಂಬುದು ಚೆನ್ನಾಗಿಯೇ ಅರ್ಥವಾಗುತ್ತದೆ.

'ಅಮೆರಿಕಾಕ್ಕೆ ನಮ್ಮ ದೇಶದ ಒಟ್ಟು ಅಗತ್ಯಗಳ ಅರಿವಿದೆ, ಇರಾನೀ ಆಮದುಗಳ ಮೇಲೆ ನಮ್ಮ ಅವಲಂಬನೆಯನ್ನು ಕಡಿಮೆ ಮಾಡಲು ನಾವು ಮಾಡಿರುವ ಪ್ರಯತ್ನಗಳನ್ನು ನೋಡಿದೆ' ಎಂದು ದುಬೈಯಲ್ಲಿ ವಿಶ್ವ ಇಂಧನ ವೇದಿಕೆಯಲ್ಲಿ ಭಾಗವಹಿಸಲು ಹೋದ ನಮ್ಮ ಪೆಟ್ರೋಲಿಯಂ ಮಂತ್ರಿಗಳು ಪಾಶ್ಚಿಮಾತ್ಯ ಸುದ್ದಿ ಸಂಸ್ಥೆ ರಾಯ್ಟರ್ ಸಂಸ್ಥೆಗೆ ತಿಳಿಸಿದ್ದಾರೆ. ಅವರ ಮಾತುಗಳಿಂದ ಅಮೆರಿಕಾದ ಆಳರಸರಿಗೆ ನಮ್ಮ ದೇಶದ ಮೇಲೆ ಕರುಣೆ ಹುಟ್ಟಿದೆಯೋ ಗೊತ್ತಾಗಿಲ್ಲ. ಕೆಲವು ದಿನಗಳ ಹಿಂದೆ ಚಿಲ್ಲರೆ ವ್ಯಾಪಾರದಲ್ಲಿ, ವಿಮೆಯಲ್ಲಿ, ವಿಮಾನಯಾನದಲ್ಲಿ ಇತ್ಯಾದಿಗಳಲ್ಲಿ ವಿದೇಶಿ ನೇರ ಹೂಡಿಕೆಯನ್ನು ಏರಿಸುವ 'ಸುಧಾರಣಾ ರಭಸ' ಅಮೆರಿಕಾ ಅಥವ ಬೇರಾವುದೇ ದೇಶದವರನ್ನು ಖುಶಿಪಡಿಸಲೇನೂ ಅಲ್ಲ ಎಂದು ಕೆಲವು ತಿಂಗಳ ಹಿಂದೆ ಅಮೆರಿಕಾದ ಪತ್ರಿಕೆಗಳ ಲೇವಡಿಗೆ ಒಳಗಾಗಿದ್ದ ಪ್ರಧಾನ ಮಂತ್ರಿಗಳು ಹೇಳಿದ್ದರು. ಅವರ ಪೆಟ್ರೋಲಿಯಂ ಮಂತ್ರಿಗಳಿಗೆ ಈಗ ಇಂತಹ ಮುಚ್ಚುಮರೆ ಮಾಡುವ ಅಗತ್ಯವೂ ಕಾಣ ಬಂದಿಲ್ಲ!

ಇರಾನಿನ ಮೇಲೆ ತಾನು ಹೇರಿರುವ ನಿರ್ಬಂಧಗಳನ್ನು ಪಾಲಿಸದ ದೇಶದೊಂದಿಗೆ ತಾನು ಹಣಕಾಸು ವ್ಯವಹಾರವನ್ನು ಕಡಿದುಕೊಳ್ಳುತ್ತೇನೆ ಎಂಬ ಅಮೆರಿಕಾದ ಬೆದರಿಕೆಯ ಹಿನ್ನೆಲೆಯಲ್ಲಿ ಭಾರತ ಇರಾನಿನಿಂದ ತೈಲ ಖರೀದಿಯನ್ನು ಇಳಿಸಿರುವುದರಿಂದ ಈ ಬೆದರಿಕೆಯಿಂದ ಅದಕ್ಕೆ ವಿನಾಯ್ತಿ ನೀಡಿರುವದಾಗಿ ಅಮೆರಿಕಾ ಜೂನ್ ತಿಂಗಳಲ್ಲಿ ಪ್ರಕಟಿಸಿದ್ದನ್ನು ನೆನಪಿಸಿಕೊಂಡು ಯುಪಿಎ-2 ಸರಕಾರದ ಈ ಪ್ರತಿನಿಧಿಯ ಈ ಅಸಹಾಯಕತೆಯನ್ನು ದೇಶದ ಜನತೆ ಅರ್ಥಮಾಡಿಕೊಳ್ಳಬೇಕು ಎಂಬುದು ಅವರ ನಿರೀಕ್ಷೆಯಿರಬೇಕು. ●

ಆಹಾರ ಬೆಲೆಯೇರಿಕೆ 80 ಲಕ್ಷ ಜನರನ್ನು ಬಡತನದ ಸಂಕೋಲೆಯಲ್ಲಿ ಬಂಧಿಸಿಟ್ಟಿದೆ

ಹೀಗೆಂದಿರುವುದು ಕಳೆದ ವಾರ ಪ್ರಕಟವಾಗಿರುವ ವಿಶ್ವಸಂಸ್ಥೆಯ ಒಂದು ವರದಿ. ಆಹಾರದ ಬೆಲೆಯೇರಿಕೆಯನ್ನು ತಡೆದಿದ್ದರೆ ಈ 80 ಲಕ್ಷ ಭಾರತೀಯರು ಬಡತನದಿಂದ ಹೊರ ಬರಬಹುದಾಗಿತ್ತು ಎಂದು ಅದು ಲೆಕ್ಕ ಹಾಕಿದೆ.

ವಿಶ್ವಸಂಸ್ಥೆಯ 'ಏಶ್ಯಾ, ಶಾಂತಸಾಗರ ಆರ್ಥಿಕ ಮತ್ತು ಸಾಮಾಜಿಕ ಆಯೋಗ'(ಇಎಸ್‌ಸಿಎಪಿ)ದ ವರದಿಯ ಪ್ರಕಾರ ನೆರೆಯ ಬಾಂಗ್ಲಾದೇಶ ಸೇರಿದಂತೆ ಈ ಪ್ರದೇಶದ ಬೇರೆಡೆಗಳಲ್ಲಿ ಆಹಾರ ಬೆಲೆಯೇರಿಕೆಯಿಂದಾಗಿಯೇ 40 ಲಕ್ಷ ಮಂದಿ ಬಡತನದ ಕೂಪಕ್ಕೆ ತಳ್ಳಲ್ಪಟ್ಟಿದ್ದಾರೆ, ಅದಕ್ಕೆ ಹೋಲಿಸಿದರೆ ಭಾರತದ ಪರಿಸ್ಥಿತಿ ವಾಸಿಯಲ್ಲವೇ ಎಂದು ನಮ್ಮ 'ಆಮ್ ಆದ್ಮಿ' ಮಂತ್ರದ ಯುಪಿಎ-2 ಸರಕಾರದ ಮುಖಂಡರುಗಳು ಸಮಾಧಾನ ಪಡಬಹುದು.

ಆಹಾರ ಬೆಲೆಗಳು ಏರಿರುವುದು ಮುಖ್ಯವಾಗಿ ಕೃಷಿವಲಯ ಕಿರಿದಾಗುತ್ತಿರುವುದರಿಂದ, ಅದನ್ನು ನಿರ್ಲಕ್ಷಿಸುತ್ತಿರುವುದರಿಂದ ಎಂದು ಅದು ಅಭಿಪ್ರಾಯ ಪಟ್ಟಿದೆ. ರಸಗೊಬ್ಬರಗಳ ಬೆಲೆಯೇರಿಕೆ, ತೈಲ ಬೆಲೆಯೇರಿಕೆ, ಕೃಷಿ ಭೂಮಿಯ ಪ್ರಮಾಣದಲ್ಲಿ ಮತ್ತು

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ


ನಿರೀಕ್ಷೆಗೂ ಮೀರಿ ಯಶಸ್ವಿಯಾದ 'ಸಮುದಾಯ' ರಂಗ ನಿರ್ದೇಶಕರ ಕಾರ್ಯಾಗಾರ

ಯುವಜನರನ್ನು ರಂಗ ಬದುಕಿನ ಕೇಂದ್ರಕ್ಕೆ ತಂದು ಜನಮುಖಿ ಸಾಂಸ್ಕೃತಿಕ ಚಳುವಳಿಯನ್ನು ಕರ್ನಾಟಕದಲ್ಲಿ ವ್ಯಾಪಕಗೊಳಿಸುವ ದೃಷ್ಟಿಯಿಂದ 11 ದಿನಗಳ ರಾಜ್ಯ ಮಟ್ಟದ ರಂಗ ನಿರ್ದೇಶಕರ ಕಾರ್ಯಾಗಾರವನ್ನು ಅಕ್ಟೋಬರ್ 10 ರಿಂದ 21, 2012ರವರೆಗೆ ಬೆಂಗಳೂರಿನ ಜೈ ಭೀಮ್ ಭವನದಲ್ಲಿ ಕರ್ನಾಟಕ ರಾಜ್ಯ ಸಮುದಾಯ ಸಮನ್ವಯ ಸಮಿತಿಯು ಆಯೋಜಿಸಿತ್ತು. ನಾಡಿನ ಪ್ರತಿಭಾವಂತ ರಂಗಕರ್ಮಿ ಡಾ.ಶ್ರೀಪಾದ ಭಟ್ ಅವರು ಕಾರ್ಯಾಗಾರದ ನೇತೃತ್ವ ವಹಿಸಿದ್ದರು.

ಕಾರ್ಯಾಗಾರ

ಅಕ್ಟೋಬರ್ 10 ರಿಂದ 21ರವರೆಗೆ ನಡೆದ ಈ ಶಿಬಿರದಲ್ಲಿ ನಾಡಿನ ಪ್ರಸಿದ್ಧ ರಂಗಕರ್ಮಿಗಳಾದ ಪ್ರಸನ್ನ, ಬಿ.ಸುರೇಶ, ಸುರೇಶ ಅನಗಳ್ಳಿ, ಎ.ಎಂ.ಪ್ರಕಾಶ್. ಜಗದೀಶ್ ಮುಂತಾದವರು ನಾಟಕ ಕಟ್ಟುವ ಬಗೆ, ನಿರ್ದೇಶಕನ ಕಾರ್ಯಗಳು ಮತ್ತು ಜವಾಬ್ದಾರಿ, ನಟ ಮತ್ತು ಮಾಧ್ಯಮ, ರಂಗಭೂಮಿಯ ಸೌಂದರ್ಯಶಾಸ್ತ್ರ, ಪರಿಕರ ಮತ್ತು ನಟ, ರಂಗ ವಿನ್ಯಾಸ, ಬೆಳಕು ಮತ್ತು ಧ್ವನಿ, ಬಣ್ಣ ಮತ್ತು ರಂಗಭೂಮಿ ಮುಂತಾದ ನಿರ್ದಿಷ್ಟ ವಿಷಯಗಳ ಬಗ್ಗೆ ಪ್ರಾತ್ಯಕ್ಷಿಕೆಗಳ ಜತೆಗೆ ಶಿಬಿರಾರ್ಥಿಗಳೊಂದಿಗೆ ಸಂವಾದ ನಡೆಸಿದರು. 'ತಲೆದಂಡ', 'ಉತ್ತರರಾಮ ಚರಿತ', 'ಮೇಘದೂತ/ಶಾಕುಂತಲ' ಹಲವು ಪ್ರಮುಖ ನಾಟಕಗಳ ದೃಶ್ಯ ಸುರುಳಿಗಳ ವೀಕ್ಷಣೆ/ಚರ್ಚೆ ಶಿಬಿರದ ಭಾಗವಾಗಿತ್ತು. ದೆಹಲಿಯ ಜನ ನಾಟ್ಯ ಮಂಚ್(ಜನಮ್) ಸಂಚಾಲಕ ಮತ್ತು ಬೀದಿ ನಾಟಕದ ದೊಡ್ಡ ಹೆಸರಾದ ಸುಧನ್ವ ದೇಶಪಾಂಡೆ ಬೀದಿನಾಟಕ, ಮೂರನೇ ರಂಗಭೂಮಿಯನ್ನು ಜನಸಾಮಾನ್ಯರ ನೋವಿನ ದನಿಯಾಗಿ ಪರಿಣಾಮಕಾರಿಯಾಗಿ ಬಳಸುವುದು ಹೇಗೆ ಎಂಬುದನ್ನು ಮನೋಜ್ಞವಾಗಿ ತಿಳಿಸಿಕೊಟ್ಟರು. ಶಿಬಿರದಲ್ಲಿ ಪ್ರಸಿದ್ಧ ಹಿಂದಿ ನಾಟಕ 'ಔರತ್' (ಹೆಣ್ಣು) ಕವನ ಆಧರಿಸಿ ಒಂದು ಬೀದಿ ನಾಟಕವನ್ನು ಶಿಬಿರಾರ್ಥಿಗಳೇ ಸಿದ್ಧಪಡಿಸಲು ಸುಧನ್ವ ನೆರವಾದರು. ಮೂರು ಮಹಿಳೆಯರನ್ನು ಒಳಗೊಂಡಂತೆ ಇಪ್ಪತ್ತು ಶಿಬಿರಾರ್ಥಿಗಳು ಗುಲ್ಬರ್ಗಾ, ರಾಯಚೂರು, ಸಿಂಧನೂರು, ಧಾರವಾಡ, ಗದಗ, ರಾಮದುರ್ಗ, ಉತ್ತರ ಕನ್ನಡ, ಮಂಗಳೂರು, ಕುಂದಾಪುರ, ಕೆಜಿಎಫ್ ಹಾಗೂ ಬೆಂಗಳೂರು ಘಟಕಗಳಿಂದ ಭಾಗವಹಿಸಿದ್ದರು.

ಕವನ, ಕಾವ್ಯ, ಸಣ್ಣಕತೆ, ಪ್ರಬಂಧ, ಪ್ರಹಸನ, ಕಿರುನಾಟಕಗಳ ವಾಚನ ಮತ್ತು ಅವುಗಳನ್ನು ದೃಶ್ಯವಾಗಿ ಪರಿವರ್ತಿಸಿ ನೋಡುಗರ ಮನಸ್ಸನ್ನು ತಾಕುವಂತೆ ಮಾಡುವುದು ಶಿಬಿರಾರ್ಥಿಗಳ ಮುಂದಿದ್ದ ಸವಾಲು. ಎರಡನೇ ತರಗತಿಯವರೆಗೆ ಮಾತ್ರ ಶಿಕ್ಷಣ ಪಡೆದಿದ್ದ ಮತ್ತು ಇಲ್ಲಿಯವರೆಗೂ ರಂಗದ ಮೇಲೇ ಕಾಲಿಡದ ರಾಮದುರ್ಗದ ಪುಂಡಲೀಕ ಸಿದ್ದಪ್ಪ ಕುರಿಯ ಮುಗ್ಧ ಪ್ರಶ್ನೆಗಳು, ನಟನೆಯನ್ನು ಕಲಿಯಲೇಬೇಕೆಂಬ ಛಲ ಹಾಗೂ ಆ ನಿಟ್ಟಿನಲ್ಲಿ ಪಟ್ಟ ಶ್ರಮ ಒಂದು ಕಡೆಯಾದರೆ ಮತ್ತೊಂದೆಡೆ ಸ್ನಾತಕೋತ್ತರ ಪದವಿ ಪಡೆದ ಹಾಗೂ ಕಾಲೇಜು ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿರುವ ವಿಶ್ವಾರಾಧ್ಯ ತೋರಿದ ಆಸಕ್ತಿ, ವ್ಯಕ್ತಪಡಿಸಿದ ಕುತೂಹಲ, ಆಂಗಿಕ ವಾಚಿಕಗಳಲ್ಲಿ ತಮ್ಮ ಪ್ರತಿಭೆಯನ್ನು ತೆರೆದಿಟ್ಟದ್ದು ಕಾರ್ಯಾಗಾರದ ವಿಶೇಷ. ಮಂಗಳೂರಿನ ಮಂಜುಳಾ ಬ್ರಹ್ಮಾವರದ ಅಭಿಲಾಷ ಅವರು ತಮ್ಮ ನಟನಾ ಸಾಮರ್ಥ್ಯದ ಮೂಲಕ ಉಳಿದವರಿಗೆ ಮಾದರಿಯಾದರು. ಹತ್ತಾರು ವರ್ಷಗಳಿಂದ ರಂಗಭೂಮಿಯಲ್ಲಿ ಅನುಭವವಿದ್ದ ಈಗ ವೃತ್ತಿಯಿಂದ ನಿವೃತ್ತರಾಗಿರುವ ಸುಲೋಚನ ಅವರ ಪಾಲ್ಗೊಳ್ಳುವಿಕೆ ನಿಜಕ್ಕೂ ಅನುಕರಣೀಯ. ಶಿಬಿರಾರ್ಥಿಗಳನ್ನು ಅವರವರ ಶಕ್ತಿಗನುಸಾರವಾಗಿ ದುಡಿಸಿ ಅವರ ಒಳಗೆ ಹುದುಗಿದ್ದ ಸಾಮರ್ಥ್ಯವನ್ನು ಹೊರಗೆಡಹುವಲ್ಲಿ ಶ್ರೀಪಾದ ಭಟ್ ಕೊನೆಗೂ ಯಶಸ್ವಿಯಾದರು. ಅವರ ಬಲಗೈಯಾಗಿ ಭುಜಕ್ಕೆ ಭುಜ ಕೊಟ್ಟು ಕಾರ್ಯಾಗಾರವನ್ನು ಸುಸೂತ್ರವಾಗಿ ಮುಂದೆ ಕೊಂಡೊಯ್ಯುವಲ್ಲಿ ಸಾಥ್ ನೀಡಿದವರು ಮಂಗಳೂರಿನ ವಿದ್ದೂ ಉಚ್ಚಿಲ್.



ಕಾರ್ಯಾಗಾರದ ನೇತೃತ್ವ ವಹಿಸಿದ್ದ ರಂಗಕರ್ಮಿ ಡಾ.ಶ್ರೀಪಾದ ಭಟ್

ಕೆಂಪು ಅಂಗಿಯ ಪುಟ್ಟ ಹುಡುಗ


ಕಾರ್ಯಾಗಾರದ ಮೊದಲ ದಿನ ಬಾಗಿಲಲ್ಲಿ ಒಬ್ಬ ಹುಡುಗ ಪ್ರತ್ಯಕ್ಷ. 'ಸಾರ್, ಇಲ್ಲಿ ನಾಟಕ ಇದೆಯಂತೆ. ನಾನು ನೋಡಬಹುದಾ?" 'ನಾಟಕ ನಿರ್ದೇಶಕರ ಕಾರ್ಯಾಗಾರ ಇದು, ನಿನ್ನಂಥ ಪುಟ್ಟ ಹುಡುಗರಿಗೆ ಇಲ್ಲಿ ಅವಕಾಶ ಇಲ್ಲ. ನೀನು ಇನ್ನು ಹೊರಡಬಹುದು.' ಅಂತ ಹೇಳಿದರೆ ಜಾಗ ಬಿಟ್ಟು ಕದಲಲಿಲ್ಲ ಅವ. ಜಪ್ಪಯ್ಯ ಅಂದ್ರೂ ಹೋಗಲೊಲ್ಲ. ತನ್ನ ಮನೆ ಅಲ್ಲೇ ಇರುವುದಾಗಿಯೂ, ತಾನೀಗಾಗಲೇ ಎರಡು ಮೂರು ನಾಟಕಗಳಲ್ಲಿ ಪಾತ್ರ ಮಾಡಿರುವುದಾಗಿಯೂ, ತಾನು ಈ ಕಾರ್ಯಾಗಾರದಲ್ಲಿ ಪಾಲ್ಗೊಳ್ಳುವುದಾಗಿ ದುಂಬಾಲು ಬಿದ್ದ. ಅವನ ಆಸಕ್ತಿ, ಛಲ ಬಿಡದ ತ್ರಿವಿಕ್ರಮನಂಥಾ ಗಟ್ಟಿ ಮನಸ್ಸು ಹಾಗೂ ಪ್ರೀತಿಯ ಮಾತುಗಳು ನಮ್ಮನ್ನು ಬೌಲ್ಡ್ ಮಾಡಿದವು. ಕೊನೆಗೂ ಅವನನ್ನು ನಾವು ಗತ್ಯಂತರವಿಲ್ಲದೆ ಸೇರಿಸಿಕೊಳ್ಳಬೇಕಾಯಿತು. ಇಡೀ ಕಾರ್ಯಾಗಾರದಲ್ಲಿ ಎಲ್ಲಾ ಶಿಬಿರಾರ್ಥಿಗಳ ಅಚ್ಚುಮೆಚ್ಚಿನ ಪುಟ್ಟ ಗೆಳೆಯನಾಗಿ ಮೆರೆದ, ಆ ಕೆಂಪು ಅಂಗಿಯ ಪುಟ್ಟ ಹುಡುಗ–ವಾಸುದೇವ.

ಕೇರಳದ ಮಾಜಿ ಸಂಸ್ಕೃತಿ ಸಚಿವ ಎಂ.ಎ.ಬೇಬಿ ಭೇಟಿ

ಅಕ್ಟೋಬರ್ 11. ರಂದು ಕಾರ್ಯನಿಮಿತ್ತ ಬೆಂಗಳೂರು ನಗರಕ್ಕೆ ಆಗಮಿಸಿದ್ದ ಕೇರಳದ ಮಾಜಿ ಶಿಕ್ಷಣ ಹಾಗೂ ಸಂಸ್ಕೃತಿ ಸಚಿವರಾದ ಎಂ.ಎ.ಬೇಬಿಯವರು 'ಸಮುದಾಯ'ದ ಕಾರ್ಯಾಗಾರ ನಡೆಯುತ್ತಿದೆ ಎಂದು ತಿಳಿದು ಸ್ವಯಂ ಪ್ರೇರಿತರಾಗಿ ಬಂದು ಕಾರ್ಯಾಗಾರಕ್ಕೆ ಭೇಟಿ ನೀಡಿ ಸ್ವಲ್ಪ ಸಮಯ ಕಳೆದು ಶಿಬಿರಾರ್ಥಿಗಳ ಜತೆ ಮಾತನಾಡಿದರು. ದೇಶದ ಸಾಂಸ್ಕೃತಿಕ ರಂಗದಲ್ಲಿ 'ಸಮುದಾಯ' ವಿಶಿಷ್ಟ ಸ್ಥಾನ ಪಡೆದಿದೆ ಮತ್ತು ಕರ್ನಾಟಕದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಯನ್ನು ಬೆಳೆಸುವಲ್ಲಿ ಹಾಗೂ ರಾಜ್ಯವನ್ನು ಕಾಡುತ್ತಿರುವ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸುವ ದಿಸೆಯಲ್ಲಿ 'ಸಮುದಾಯ'ದ ಚಟುವಟಿಕೆಗಳು ವಿಸ್ತಾರಗೊಳ್ಳಲಿ ಎಂದು ಅವರು ಹಾರೈಸಿದರು.

ವಿಚಾರ ಸಂಕಿರಣ

ಯುವಜನ ಮತ್ತು ರಂಗಭೂಮಿ ಕುರಿತು ಬಿ.ಸುರೇಶ್, ಮಕ್ಕಳ ರಂಗಭೂಮಿ ಕುರಿತು ಮೈಸೂರಿನ ಹೆಚ್.ಎಸ್.ಉಮೇಶ್, ಬೀದಿ ನಾಟಕ– ವರ್ತಮಾನ ಕುರಿತು ಸಮುದಾಯ ರಾಜ್ಯ ಉಪಾಧ್ಯಕ್ಷ ಕೆಜಿಎಫ್‌ನ ಅಚ್ಯುತ, ಬೀದಿ ನಾಟಕ – ಸೌಂದರ್ಯಶಾಸ್ತ್ರ ಕುರಿತು ಸಂಚಾರಿ ಥಿಯೇಟರ್‌ನ ಎನ್.ಮಂಗಳಾ ಮತ್ತು ಕೊನೆಯಲ್ಲಿ ರಂಗವಿಮರ್ಶೆ ಕುರಿತು ನಾರಾಯಣ ರಾಯಚೂರು ಅವರು ವಿಷಯ ಮಂಡನೆ ಮಾಡಿದರು. ಉಪಯುಕ್ತ ಚರ್ಚೆ ನಡೆಯಿತು. ಆಹ್ವಾನದ ಮೇಲೆ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಚಾಪ್ಟರ್‌ನ ಶಿಬಿರಾರ್ಥಿಗಳು ವಿಚಾರ ಸಂಕಿರಣದ ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು.



ಸುಧನ್ವ ದೇಶಪಾಂಡೆ

ಸಮಾರೋಪ ಸಮಾರಂಭ

"ತಾಂತ್ರಿಕ ಪರಿಣತಿ ಜತೆ ಸ್ಪಷ್ಟ ರಾಜಕೀಯ ಸಾಮಾಜಿಕ ನಿಲುವೂ ಅಗತ್ಯ"–ಎಂ.ಎಸ್.ಸತ್ಯು

'ರಂಗಭೂಮಿಗೆ ರಾಜಕೀಯ ಹಾಗೂ ಸಾಮಾಜಿಕ ಬದ್ಧತೆ ಇರಬೇಕು. ಅದಿಲ್ಲದಿದ್ದರೆ ಅದೆಂಥಾ ರಂಗಭೂಮಿ ? ಸ್ವಾತಂತ್ರ್ಯ ಚಳುವಳಿ ಸಮಯದಲ್ಲಿ ಈ ರೀತಿಯ ಬದ್ಧತೆ ಹೊಂದಿದ್ದ ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಶನ್(ಇಪ್ಟಾ) ಜನರನ್ನು ಜಾಗೃತಗೊಳಿಸುವಲ್ಲಿ ಅಪಾರ ಕೊಡುಗೆ ನೀಡಿದೆ. ಕರ್ನಾಟಕದಲ್ಲಿ 'ಸಮುದಾಯ' ತನ್ನ ಹುಟ್ಟಿನಿಂದಲೂ ಜನರಲ್ಲಿ ರಾಜಕೀಯ ಹಾಗೂ ಸಾಮಾಜಿಕ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ನಿರಂತರವಾಗಿ ಶ್ರಮಿಸುತ್ತಿದೆ. ತಾಂತ್ರಿಕವಾಗಿ ತರಬೇತಿ ನೀಡುವುದರ ಜತೆಯಲ್ಲೇ ರಾಜಕೀಯ ಮತ್ತು ಸಾಮಾಜಿಕ ವಿಷಯಗಳ ಕುರಿತ ತರಬೇತಿಯ ಅವಶ್ಯಕತೆ ಇದೆ' ಎಂದು ಸಮಾರೋಪ ಭಾಷಣ ಮಾಡಿದ ಹಿರಿಯ ರಂಗ ನಿರ್ದೇಶಕ ಹಾಗೂ ಪ್ರಖ್ಯಾತ ಸಿನಿಮಾ ನಿರ್ದೇಶಕ ಎಂ.ಎಸ್.ಸತ್ಯು ಹೇಳಿದರು. ಸಮಾರೋಪ ಸಮಾರಂಭದ ನಿರೂಪಣೆಯನ್ನು ಸಮುದಾಯ ರಾಜ್ಯ ಸಹಕಾರ್ಯದರ್ಶಿ ಕೆ.ಎಸ್.ವಿಮಲ ನಿರ್ವಹಿಸಿದರು.

ಕಾರ್ಯಾಗಾರದ ನಿರ್ದೇಶಕ ಶ್ರೀಪಾದ ಭಟ್ ಹನ್ನೊಂದು ದಿನಗಳ ಕಾಲ ತಮ್ಮ ಜತೆ ಹೆಜ್ಜೆ ಹಾಕಿದ, ಸಹಕರಿಸಿದ, ಬೈದರೂ ಮೌನವಾಗಿಯೆ ಅನುಭವಿಸಿದ ಶಿಬಿರಾರ್ಥಿಗಳನ್ನು ಕೊಂಡಾಡಿದರು. ಸಮುದಾಯದ ರಾಜ್ಯ ಅಧ್ಯಕ್ಷರಾದ ಆರ್.ಕೆ.ಹುಡಗಿಯವರು ಅಧ್ಯಕ್ಷ ಭಾಷಣ ಮಾಡಿದರೆ ಬೆಂಗಳೂರು ಸಮುದಾಯದ ಮಾಲತೇಶ್ ಅವರು ವಂದನಾರ್ಪಣೆ ಮಾಡಿದರು. ಪ್ರಾರಂಭದಲ್ಲಿ ಸಮುದಾಯದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಸುರೇಂದ್ರ ರಾವ್ ಅವರು ಎಲ್ಲರನ್ನೂ ಸ್ವಾಗತಿಸಿದರು.

ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಯುಪಿಎ ದರ್ಬಾರ್ ....

ಪುಟ 13 ರಿಂದ

ನೀರಿನ ಸಂಪನ್ಮೂಲಗಳ ಇಳಿಕೆ, ಜತೆಗೆ ಸರಕು ಮಾರುಕಟ್ಟೆಯಲ್ಲಿನ ಸಟ್ಟಾಕೋರತನ ಇವೆಲ್ಲವುಗಳು ಬಡಜನರ ಆಹಾರ ಭದ್ರತೆಗೆ ಕುತ್ತು ತಂದಿವೆ, ಕುಟುಂಬಗಳ ಆಯವ್ಯಯದ ಮೇಲೆ ದುಷ್ಪರಿಣಾಮ ಬೀರಿವೆ ಎಂದು ವರದಿ ಹೇಳಿದೆ. ಬಡಕುಟುಂಬಗಳು ಆದಾಯದ 65ಶೇ.ವನ್ನು ಆಹಾರಕ್ಕೇ ವ್ಯಯ ಮಾಡಬೇಕಾಗಿದೆ. ಆದ್ದರಿಂದ ಆಹಾರ ಬೆಲೆಯೇರಿಕೆ ಅವರ ಉಳಿತಾಯದ ಪ್ರಮಾಣವನ್ನು ಕುಂಠಿತ ಗೊಳಿಸುತ್ತದೆ, ಕೆಲವೊಮ್ಮೆ ಹೊಟ್ಟೆ ತುಂಬಿಸಿಕೊಳ್ಳಲು ಅವರು ತಮ್ಮ ಅಲ್ಪ-ಸ್ವಲ್ಪ ಆಸ್ತಿಗಳನ್ನೂ ಮಾರಬೇಕಾಗುತ್ತದೆ ಎಂದಿರುವ ವರದಿ ಈ ಪ್ರದೇಶದಲ್ಲಿ ಹಸಿವಿನ ಸಮಸ್ಯೆಗೆ ಕಾರಣ ಆಹಾರದ ಕೊರತೆಯಲ್ಲ, ಬದಲಿಗೆ ಸಾಮಾಜಿಕ ವಿತರಣೆಯಲ್ಲಿನ ತೀವ್ರ ಕೊರತೆಗಳೇ ಕಾರಣ, ಇದರ ದುಷ್ಪರಿಣಾಮ ಬಹಳ ಹೆಚ್ಚಾಗಿ ಆಗಿರುವುದು ಗ್ರಾಮೀಣ ಜನರು, ವಲಸೆ ಕಾರ್ಮಿಕರು ಮತ್ತು ಬುಡಕಟ್ಟು ಜನಗಳ ಮೇಲೆ. ಅದರಲ್ಲೂ ಮಹಿಳೆಯರು ಮತ್ತು ಮಕ್ಕಳ ಮೇಲೆ, ಅವರಲ್ಲಿಯೂ ಹೆಣ್ಣು ಮಕ್ಕಳ ಮೇಲೆ ಎಂದೂ ಈ ವರದಿ ಹೇಳಿದೆ.

ನಮ್ಮ ಓದುಗರಿಗೆ ಇದು ಹೊಸ ಸುದ್ದಿಯೇನೂ ಅಲ್ಲ, ವಿಶ್ವ ಸಂಸ್ಥೆಯ ಒಂದು ವರದಿಯೇ ಇದನ್ನು ಪ್ರಮಾಣಾತ್ಮಕವಾಗಿ ದೃಢಪಡಿಸಿದೆ ಎಂಬುದೇ ವಿಶೇಷ, ಅಷ್ಟೇ.

ಹಾಸ್ಟೆಲ್ ದಿನಗೂಲಿ ನೌಕರರ ಹೋರಾಟ....

ಪುಟ 12 ರಿಂದ

ಕಾಯಂಗೊಳಿಸಿ ಸರ್ಕಾರಿ ನೌಕರರೆಂದು ಪರಿಗಣಿಸಬೇಕು ಎಂಬ ಬೇಡಿಕೆಗಳು ಇನ್ನೂ ಇತ್ಯರ್ಥವಾಗದೆ ಇರುವುದರಿಂದ ಅವುಗಳಿಗಾಗಿ ಸಂಘಟನೆಯನ್ನು ರಾಜ್ಯಮಟ್ಟಕ್ಕೆ ವಿಸ್ತರಿಸಿ ಹೋರಾಟವನ್ನು ರಾಜ್ಯ ಕೇಂದ್ರಕ್ಕೆ ಕೊಂಡೊಯ್ಯಬೇಕೆಂದು ಮುಷ್ಕರವನ್ನು ಹಿಂತೆಗೆದುಕೊಂಡ ನಂತರ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಅಧ್ಯಕ್ಷರಾದ ಭೀಮಶೆಟ್ಟಿ ಯಂಪಳ್ಳಿ, ಅಶೋಕ ಮ್ಯಾಗೇರಿ, ಬಾಬು ಸಿಂಧಗಿ, ಮಹಾಂತ ಅವರಳ್ಳಿ, ಬಾಗಣ್ಣ ದೇವನೂರ, ಯಶ್ವಂತ ಅಷ್ಟಗಿ, ಮೊದಲಾದವರು ಧರಣಿ ಮುಷ್ಕರದ ನೇತೃತ್ವ ವಹಿಸಿದ್ದರು, ಸರ್ಕಾರಿ ಹಾಸ್ಟೇಲುಗಳಲ್ಲಿ ವ್ಯಾಪಕವಾಗಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ತಡೆಗಟ್ಟಬೇಕು, ವಿದ್ಯಾರ್ಥಿಗಳಿಗೆ ಒಳ್ಳೆಯ ಗುಣಮಟ್ಟದ ಆಹಾರವನ್ನು ಒದಗಿಸಬೇಕು. ಅಡುಗೆ ಅನಿಲ ಸಿಲಿಂಡರ್‌ಗಳ ಸರಬರಾಜು ಕಡಿತ ಮಾಡಬಾರದೆಂದು ಸಹ ಇದೇ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಿಸಲಾಯಿತು.

– ಭೀಮಶೆಟ್ಟಿ ಯಂಪಳ್ಳಿ

ಬಳ್ಳಾರಿ: ಗಣಿಗಾರಿಕೆ ರಾಷ್ಟ್ರೀಕರಣಕ್ಕೆ ......

ಪುಟ 12 ರಿಂದ

ಸಿಪಿಐ(ಎಂ) ಒತ್ತಾಯಿಸುತ್ತದೆ. ಈಗಲಾದರೂ ಲೋಕಾಯುಕ್ತ ವರದಿಯನ್ನು ಒಪ್ಪಿ ಇಡೀ ವರದಿಯ ಬಗ್ಗೆ ತನಿಖೆಗೆ ಆದೇಶಿಸಬೇಕು ಎಂದು ಮತ್ತು ವರದಿಯಲ್ಲಿ ಉಲ್ಲೇಖಿತರಾದವರ ವಿಷಯದಲ್ಲಿ ಬಂಧನ ಮತ್ತು ಸರ್ಕಾರಿ ನೌಕರಿಯಿಂದ ವಜಾ ಮೊದಲಾದ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ ಎಂದು ಈ ಮುಖಂಡರು ಆಗ್ರಹಿಸಿದರು.

ಸುಪ್ರೀಂಕೋರ್ಟು ಹೆಚ್ಚು ಅಕ್ರಮ ಎಸಗದ 18 ಕಂಪನಿಗಳಿಗೆ ಗಣಿಗಾರಿಕೆಗೆ ಅವಕಾಶ ಮಾಡಿಕೊಡುವ ತೀರ್ಪು ನೀಡಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಕೂಡಲೇ ಕ್ರಮ ಕೈಗೊಂಡು ಎಲ್ಲಾ ಗಣಿಗಾರಿಕೆಯನ್ನು ರಾಷ್ಟ್ರೀಕರಣ ಮಾಡಬೇಕೆಂದು ಮತ್ತು ಈ ಹಿನ್ನೆಲೆಯಲ್ಲಿ ಈಗಿರುವ ರಾಷ್ಟ್ರೀಯ ಖನಿಜ ನೀತಿಯನ್ನು ಕೈ ಬಿಟ್ಟು ರಾಷ್ಟ್ರದ ಸಂಪತ್ತನ್ನು ಸಂರಕ್ಷಿಸುವ, ಕೈಗಾರಿಕಾ ಬೆಳವಣಿಗೆಗೆ ಅವಕಾಶ ಮಾಡಿಕೊಡುವ ರಾಷ್ಟ್ರೀಯ ಖನಿಜ ನೀತಿಯನ್ನು ಕೂಡಲೇ ಅಂಗೀಕರಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ ಎಂದು ಮುಖಂಡರು ಸಿಪಿಐ(ಎಂ) ಪಕ್ಷ ಪ್ರತಿಪಾದಿಸುತ್ತಿರುವ ಜನಪರ ಖನಿಜ ನೀತಿಯನ್ನು ವಿವರಿಸಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಹೆಚ್.ತಿಪ್ಪಯ್ಯ, ರಂಗಪ್ಪದಾಸರ, ಜಿಲ್ಲಾ ಸಮಿತಿ ಸದಸ್ಯರಾದ ಇ.ಆರ್. ಯಲ್ಲಪ್ಪ, ಗಾಳಿ ಬಸವರಾಜ, ಎಸ್. ಜಗನ್ನಾಥ , ಚಂದ್ರಕುಮಾರಿ, ಬಾಸ್ಕರ್ ರೆಡ್ಡಿ, ಬಿ. ಮಾಳಮ್ಮ ಹಾಜರಿದ್ದರು.

■ ಆರ್.ಎಸ್. ಬಸವರಾಜ

ನ್ಯಾಯ ದೇವತೆಯ ಹಾಲೇ ವಿಷವಾದೊಡೆ

ದಿನಾಲು ಅನ್ನ, ಮುದ್ದಿ ನುಂಗಿ, ನುಂಗಿ
ಆರಾಮಿದ್ದ ನಮ್ಮ ನ್ಯಾಯಧೀಶ,
ಗಣಿ ರೆಡ್ಡಿಯ ಹತ್ತು ಕೋಟಿ ಕಂತಿ
ಗಂಟಲಲಿ ಸಿಕ್ಕಿಸಿಕೊಂಡು
ವಿಲವಿಲ ಒದ್ದಾಡಿದ ಪಾಪ! ನಮ್ಮ
ನ್ಯಾಯಧೀಶ! ಅಲ್ಲಾ, ಲಂಚಾಧೀಶ!

ಗಣಿ ರೆಡ್ಡಿ, ಬಳ್ಳಾರಿ ಗುಡ್ಡಗಳನ್ನೇ
ನುಂಗಿ ನುಂಗಿ ಗಂಟಲು ಅಗಲ
ಮಾಡಿಕೊಂಡ ಬಕಾಸುರ,
ರಾಮನ ಭಕ್ತರಿಗೆ ಬಂಗಾರದ ಖಡ್ಗ,
ನೋಟಿನ ಕಂತಿ ಕೊಟ್ಟು ದಣಿದವ,
ಬಳ್ಳಾರಿ ಗುಡ್ಡ ಗುಡ್ಡಗಳನ್ನೇ ಬಗೆದು,
ತಗ್ಗಿನಲಿ ಬಿದ್ದ ರಾಮಭಕ್ತ,
ವಿಶ್ರಾಂತಿಗೆ ಜೈಲಿಗೆ ಹೋದವ !

ನ್ಯಾಯಾಧೀಶ ನಜರಚೂಕಿನಿಂದ
ಹತ್ತು ಕೋಟಿ ನುಂಗಿದ್ದನ್ನು ನೋಡಿ
ಕೆಲ ನ್ಯಾಯ ಪಂಡಿತರು ಪಿಸುಗಟ್ಟಿದರು
"ನ್ಯಾಯಾಧೀಶ ಅವಸರ ಮಾಡಿ ಎಡವಿದ,
ಇಲ್ಲದಿದ್ದರೆ ಹೀಗಾಗುತ್ತಿರಲಿಲ್ಲ ಬಿಡಿ",
ಎಂಥಾ ಅನುಭವದ ಮಾತು !!

ನ್ಯಾಯದೇವತೆಯ ಹಾಲೇ
ವಿಷವಾದೊಡೆ
ಬಡಕಕ್ಷಿದಾರ ಬದುಕುವದೆಂತೋ
ಹೇಳೋ ಹರಾ ಹರಾ ಹುಚ್ಚೇಶ್ವರ.

● ಜಿ.ಎ. ಹಿರೇಮಠ,
ವಕೀಲರು, ಹಾವೇರಿ.

(ಅನ್ಯಾಯವನ್ನು ಕಂಡು ಸುಮ್ಮನಿದ್ದರೆ,
ಅನ್ಯಾಯವನ್ನು ಬೆಂಬಲಿಸಿದಂತೆ.)

ಮಹಿಳೆಯ ಬಾಳಿನ ......

ಪುಟ 7 ರಿಂದ

2011 ಎನ್.ಸಿ.ಆರ್.ಬಿ. ವರದಿ ಪ್ರಕಾರ ದಾಖಲಾದ ಮಹಿಳೆಯರ ಮೇಲಿನ ದೌರ್ಜನ್ಯಗಳ ಸಂಖ್ಯೆ 2.28 ಲಕ್ಷ, ದಾಖಲಾಗದ ಸಂಖ್ಯೆ ಇನ್ನೆಷ್ಟಿರಬಹುದು! 2010ರಲ್ಲಿ 22,172 ಅತ್ಯಾಚಾರ ಪ್ರಕರಣ ದಾಖಲಾಗಿದೆ. 94,041 ವರದಕ್ಷಿಣೆ ದೌರ್ಜನ್ಯಗಳು ದಾಖಲಾಗಿವೆ. ಒಟ್ಟು ಅತ್ಯಾಚಾರ



ಪ್ರಕರಣಗಳಲ್ಲಿ ಶೇ.40 ರಷ್ಟು ಪ್ರಕರಣಗಳು ಹಳ್ಳಿಗಳಲ್ಲಿ ಮಹಿಳೆಯರು ಶೌಚಾಲಯಕ್ಕೆ ಹೋಗುವಾಗ ನಡೆಯುತ್ತಿದ್ದು, ಅದರಲ್ಲಿ ಶೇ. 60 ರಷ್ಟು ದಲಿತ ಮಹಿಳೆಯರ ಮೇಲಿನ ಅತ್ಯಾಚಾರಗಳು. ಈ ಅವಧಿಯಲ್ಲಿ ಅಪ್ರಾಪ್ತ ಹೆಣ್ಣು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳು ಹೆಚ್ಚಾಗಿವೆ. ಮಹಿಳೆಯರ ಮಾರಾಟ ದಂಧೆಯಲ್ಲಿ ಕರ್ನಾಟಕ 2ನೇಯ ಸ್ಥಾನದಲ್ಲಿದೆ. ರಾಜ್ಯದ ಒಟ್ಟು ವಿವಾಹಗಳಲ್ಲಿ ಶೇ. 45 ರಷ್ಟು ಬಾಲ್ಯ ವಿವಾಹಗಳಾಗಿದ್ದು, ಕೀಳು ರಾಜಕೀಯ ಪ್ರಚಾರ ಪ್ರೇರಿತ ಸಾಮೂಹಿಕ ವಿವಾಹಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಪ್ರಾಪ್ತ ವಯಸ್ಕರೇ ಆಗಿದ್ದು, ಮಂತ್ರಿವರ್ಯರೇ ಮಾಂಗಲ್ಯ ಧಾರಣೆಗೆ ಸಾಕ್ಷಿಗಳಾಗಿರುತ್ತಾರೆ. ಹೆಚ್ಚುತ್ತಿರುವ ಹೆಣ್ಣು ಭ್ರೂಣ ಹತ್ಯೆ ನಾಗರಿಕ ಸಮಾಜದ ಅತ್ಯಂತ ನಾಚಿಕೆಗೇಡಿನ ವಿದ್ಯಮಾನವಾಗಿದೆ. ಅತ್ಯಂತ ಅಭದ್ರತೆಗೆ ಒಳಗಾಗಿರುವ ವಯೋವೃದ್ಧರ ಮೇಲೆ ದಾಳಿ, ಒಂಟಿ ಹೆಣ್ಣುಮಕ್ಕಳ ಮೇಲೆ ದಾಳಿ, ಮರ್ಯಾದಾ ಹತ್ಯೆಗಳು ಹೀಗೆ ಅತ್ತ ಯುಪಿಎ2, ಇತ್ತ ಬಿಜೆಪಿ ಸರ್ಕಾರಗಳ ಆಳ್ವಿಕೆಯಲ್ಲಿ ತೀವ್ರಗೊಂಡಿವೆ. ಮಹಿಳೆಯರು ಅತ್ಯಂತ ಅಸುರಕ್ಷತೆಗೆ ಒಳಗಾಗಿರುವ ಪ್ರಸ್ತುತ ಸಂದರ್ಭದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ–ಸಿ.ಪಿ.ಐ(ಎಂ) ನೇತೃತ್ವದಲ್ಲಿ ಅಕ್ಟೋಬರ್ 30ರಂದು ರಾಷ್ಟ್ರವ್ಯಾಪಿ ಹೋರಾಟಗಳು ನಡೆಯಲಿವೆ. ಈ ಹೋರಾಟಗಳನ್ನು ಎಲ್ಲಾ ಪ್ರಜಾಪ್ರಭುತ್ವ ಪ್ರೇಮಿಗಳು ಬೆಂಬಲಿಸಬೇಕಿದೆ ಮತ್ತು ಅರ್ಥ ಪೂರ್ಣಗೊಳಿಸಬೇಕಿದೆ.

JANASHAKTHI KANNADA VARA PATRIKE NOV 04, 2012 Price : Rs. 5/- RNI No. KARKAN /2006/17926 Posted on every Saturday
Postal Reg. No. RNP/KA/BGS/2078/2010-12 Posted at MBC Bangalore GPO

ಹೊಸ ಜನರ ಅಧ್ಯಯನ ಸಂಘ – ಹುನಾನ್‌ನಲ್ಲಿ ಚಳುವಳಿಯ ವಿಸ್ತರಣೆ



ಜಿ.ಎನ್.ನಾಗರಾಜ್ 11

ಹೊಸ ಜನರ ಅಧ್ಯಯನ ಸಂಘದ ಉದ್ದೇಶ ಚೀನಾದ ಜನತೆಯಲ್ಲಿ ಹೊಸ ಚಿಂತನೆಯನ್ನು ಹರಡುವುದು. ಆ ಮೂಲಕ ಹೊಸ ಜನತೆಯನ್ನು ರೂಪಿಸುವುದು. ಚೀನಾದ ಸುಧಾರಣೆ ಮತ್ತು ಜಗತ್ತಿನ ಸುಧಾರಣೆ ಸಂಘದ ಗುರಿಯಾಗಿತ್ತು. ಹೊಸ ಪುರುಷರು ಮಾತ್ರವಲ್ಲ ಹೊಸ ಮಹಿಳೆಯರನ್ನು ರೂಪಿಸುವುದು ಕೂಡ ಅವರ ಕಾರ್ಯಕ್ರಮದ ಭಾಗವಾಗಿತ್ತು. ಸಂಘದ ಘೋಷಣಾ ಪತ್ರ ಅಫೀಮು ಸೇವನೆ, ಜೂಜಾಟ, ಕುಡಿತ, ವೇಶ್ಯಾವೃತ್ತಿ, ಉಪಪತ್ನಿಯರನ್ನು ಇಟ್ಟುಕೊಳ್ಳುವುದು ಇವುಗಳನ್ನು ವಿರೋಧಿಸಿತು. ಇತರ ಅನೇಕ ಸಮಸ್ಯೆಗಳ ಜೊತೆಯಲ್ಲಿ ಸಾಂಪ್ರದಾಯಿಕ ವಿವಾಹ ಪದ್ಧತಿಯಲ್ಲಿ ಮಹಿಳೆಯರ ಮೇಲಿನ ದಮನದ ಪ್ರಶ್ನೆಯನ್ನು ಕೈಗೆತ್ತಿಕೊಂಡರು. ಮಹಿಳೆಯರು ಸ್ವತಂತ್ರ ವ್ಯಕ್ತಿಗಳಾಗಬೇಕು. ಮಹಿಳೆಯರ ವಿಮೋಚನೆಯಾಗದೇ ಪುರುಷನೂ ಸ್ವತಂತ್ರವಾಗಲು ಸಾಧ್ಯವಿಲ್ಲ ಎಂದು ಮಾವೋ ಪ್ರತಿಪಾದಿಸಿದರು.

ಮಹಿಳೆಯರ ವಿಮೋಚನೆ

ಮಾವೋರವರ ಜೊತೆಗೆ ಅವರ ಶಿಕ್ಷಕರಾದ ಹುತೆ-ಲಿ ಸಂಘವನ್ನು ಸೇರಿದರು. ಮಾವೋರವರ ಹತ್ತಿರದ ಮಿತ್ರರಾದ ಶಾಯ್ ಹೊ ಶೆನ್ ಮಾತ್ರವಲ್ಲ ಅವರ ಸೋದರಿ ಶಾಯ್ ಚಾಂಗ್ ಕೂಡ ಸಂಘದ ಮೊದಲ ಸದಸ್ಯರಲ್ಲಿ ಒಬ್ಬರು. ಅವರು ತಮ್ಮ ತಂದೆ ಹತ್ತನೆಯ ವರ್ಷಕ್ಕೇ ಅವರ ಇಚ್ಛೆಗೆ ವಿರುದ್ಧವಾಗಿ ಮದುವೆ ಮಾಡಲು ಪ್ರಯತ್ನಿಸಿದಾಗ ಮನೆ ಬಿಟ್ಟು ಚಾಂಗ್ಶಾಕ್ಕೆ ಓಡಿ ಬಂದರು. ಬಹಳ ಸುಂದರಿಯಾಗಿದ್ದ ಅವರು ಅಣ್ಣನ ಸಹಾಯ ಪಡೆದು ಶಿಕ್ಷಣ ಪಡೆಯಲಾರಂಭಿಸಿದರು. ಬುದ್ಧಿವಂತ ವಿದ್ಯಾರ್ಥಿಯಾಗಿದ್ದ ಅವರು ಆ ಕಾಲದಲ್ಲಿ ಮಹಿಳೆಯರು ಅಪರೂಪವಾಗಿದ್ದ ದೈಹಿಕ ಶಿಕ್ಷಣ ಪಡೆದರು.

ಮಾವೋರವರು ಸ್ಥಾಪಿಸಿದ ವಿದ್ಯಾರ್ಥಿ ಚಳುವಳಿಯಲ್ಲಿ ಹುಡುಗಿಯರನ್ನು ಒಳಗೊಳ್ಳಲು ಶಾಯ್ ಚಾಂಗ್ ಕ್ರಿಯಾಶೀಲ ಪಾತ್ರ ವಹಿಸಿದರು. ಮಾವೋ ಮತ್ತು ಅವರ ಸೋದರನ ಬೆಂಬಲದೊಂದಿಗೆ 'ಮಹಿಳೆಯರ ಉದ್ಯೋಗ ಮತ್ತು ಅಧ್ಯಯನ ಸಂಘ'ವನ್ನು ಸ್ಥಾಪಿಸಿದರು. ಇವರು ಮುಂದೆ ಕಮ್ಯುನಿಸ್ಟ್ ಪಕ್ಷವನ್ನು ಸೇರಿ ಅದರ ಪ್ರಮುಖ ನಾಯಕಿಯರಲ್ಲೊಬ್ಬರಾಗಿ ಬೆಳೆದರು, ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾದರು.

ಚಳುವಳಿಯಲ್ಲಿ ಹೊಸ ಜನತೆಯ ಅಧ್ಯಯನ ಸಂಘ

ಅಧ್ಯಯನ ಸಂಘವು ಮಾವೋರವರು ಆಗಲೇ ಆರಂಭಿಸಿದ್ದ ಕಾರ್ಮಿಕರಿಗೆ ರಾತ್ರಿ ಶಾಲೆ, ಕಾರ್ಖಾನೆಗಳ ಅಧ್ಯಯನ, ಜನ ಸಾಮಾನ್ಯರ ಭಾಷೆಯ ಬಳಕೆ ಇವುಗಳನ್ನು ಮುಂದುವರೆಸಿತು. ಜೊತೆಗೆ ಹೊಸ ಚಿಂತನೆಗಳ ಪ್ರಚಾರ, ಜಪಾನೀ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸಿತು. ಹುನಾನ್‌ನಲ್ಲಿ ವ್ಯಾಪಕ ಸಂಪರ್ಕಗಳನ್ನು ಸಾಧಿಸಿತು. ಸಂಘದ ಸದಸ್ಯರು ಚಳುವಳಿಗಳಲ್ಲಿ ತೊಡಗಿಕೊಂಡು ಕ್ರಿಯಾಶೀಲರಾಗಿದ್ದರ ಫಲ ಒಂದು ಕಡೆ ಚೀನಾದ ಕ್ರಾಂತಿಕಾರಿ ದಾರಿಯ ಹೆಗ್ಗುರುತುಗಳಲ್ಲೊಂದಾದ "ಮೇ ನಾಲ್ಕರ ಚಳುವಳಿ"ಯಲ್ಲಿ ಹುನಾನ್‌ನ ವಿದ್ಯಾರ್ಥಿಗಳು, ಬುದ್ಧಿ ಜೀವಿಗಳು ದೊಡ್ಡ ಪ್ರಮಾಣದಲ್ಲಿ ಭಾಗವಹಿಸುವಂತಾಯಿತು. ಮತ್ತೊಂದು ಕಡೆ ಮುಂದೆ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾದ ಮೇಲೆ ಮೊದಲು ಸಂಘಕ್ಕೆ ಸೇರಿದ್ದ ಹದಿಮೂರು ಜನರೂ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು. ಸುಮಾರು ಎಂಬತ್ತು ಜನ ಸದಸ್ಯರಲ್ಲಿ ನಲವತ್ತು ಜನರು ಪಕ್ಷದ ಸದಸ್ಯರಾದರು. ಲಾಂಗ್ ಮಾರ್ಚ್‌ನಲ್ಲಿ ಅನೇಕ ತ್ಯಾಗ ಬಲಿದಾನಗಳನ್ನು ಮಾಡಿದರು.



ಚೀನಾದ ಇತರ ರಾಜ್ಯಗಳಲ್ಲಿಯೂ ಇಂತಹ ಸಂಘಗಳು ವಿವಿಧ ಹೆಸರುಗಳಲ್ಲಿ ರೂಪು ತಳೆದವು. ಹುಬೈ ರಾಜ್ಯದಲ್ಲಿ 'ಸಮಾಜ ಕಲ್ಯಾಣ ಸಂಘ' ಎಂಬ ಹೆಸರಿನಲ್ಲಿ, ಬೀಜಿಂಗ್‌ನಲ್ಲಿ ಘು ಶೆ ಎಂಬ ಹೆಸರಿನಲ್ಲಿ, ಹಾಗೆಯೇ ಶಾಂಘೈ, ಟ್ಯಾಂಜಿನ್ ('ಎಚ್ಚರಗೊಂಡ ಸಮಾಜ' ಎಂಬ ಹೆಸರಿನಲ್ಲಿ ಚೌ ಎನ್ ಲಾಯ್‌ರವರು ಆರಂಭಿಸಿದ ಸಂಘ), ಹಾಂಗ್ಝೌ, ಹ್ಯಾಂಕೌ ಮೊದಲಾದ ನಗರಗಳಲ್ಲಿ ಇಂತಹ ಸಂಘಗಳು ಆರಂಭವಾದವು. ಈ ಸಂಘಗಳಿಂದಲೂ ಅನೇಕರು ಮುಂದೆ ಕಮ್ಯುನಿಸ್ಟ್ ಪಕ್ಷ ಸೇರಿದರು.



ಮುಂದಕೆಲ್ಲಿಗೆ ?

ಮಾವೋರವರ ಹುನಾನ್ ನಾರ್ಮಲ್ ಸ್ಕೂಲ್‌ನ ಐದು ವರ್ಷದ ಶಿಕ್ಷಣ ಮುಗಿಯಿತು. ಮುಂದೇನು? ಎಂಬ ಪ್ರಶ್ನೆ ಎದುರಾಯಿತು. ಮತ್ತೆ ತಂದೆಯವರ ಜೊತೆ ಸೇರಿ ಅಕ್ಕಿ ವ್ಯಾಪಾರ ಮಾಡುವುದಂತೂ ಅವರಿಗೆ ಸಾಧ್ಯವಿಲ್ಲದ ಮಾತು. ಈ ನಡುವೆ ಅವರ ತಾಯಿ ತೀರಿಕೊಂಡಿದ್ದರು. ಹೀಗಾಗಿ ಊರಿಗೆ ಹೋಗಬೇಕೆಂಬ ಸೆಳೆತ ಇಲ್ಲವಾಗಿತ್ತು. ಅವರ ತಮ್ಮಂದಿರನ್ನು ತಾವು ಓದುತ್ತಿದ್ದ ಶಾಲೆಗೇ ಸೇರಿದ್ದ ಪ್ರಾಥಮಿಕ, ಮಾಧ್ಯಮಿಕ ಶಾಲೆಗೆ ಸೇರಿಸಿದ್ದರು. ಅವರು ಅಣ್ಣನ ಹಾದಿಯಲ್ಲಿಯೇ ಹೆಜ್ಜೆ ಹಾಕುತ್ತಿದ್ದರು. ತಮ್ಮ ಹಳ್ಳಿ ಶಾವೋ ಶಾನ್‌ನಿಂದ ಅರಿವನ್ನು ಅರಸುತ್ತ ಊರಿನ ಪಕ್ಕದ ಪಟ್ಟಣವನ್ನು ದಾಟಿ ಹುನಾನ್ ರಾಜ್ಯದ ರಾಜಧಾನಿ ಚಾಂಗ್ ಶಾಕ್ಕೆ ತಲುಪಿದ್ದರು. ಅಲ್ಲಿ ಪಡೆಯಬಹುದಾದ ತಿಳುವಳಿಕೆಯನ್ನು ಪಡೆಧಾಗಿತ್ತು.

ಮುಂದಕೆಲ್ಲಿಗೆ ?

ಪಕ್ಕದ ರಷ್ಯ ದೇಶದಲ್ಲಿ ಝಾರ್ ಚಕ್ರವರ್ತಿಗಳನ್ನು ಕಿತ್ತೊಗೆದು ಕಾರ್ಮಿಕರ ಪ್ರಭುತ್ವವನ್ನು ಸ್ಥಾಪಿಸಿದ ಸುದ್ದಿ ಅಲೆಯಲೆಯಾಗಿ ಚೀನಾವನ್ನು ಆವರಿಸತೊಡಗಿತ್ತು. ಹೊಸ ಸರ್ಕಾರ ಬೇರೆ ಯಾವುದೇ ದೇಶದಲ್ಲಿ ತಮ್ಮ ಆಡಳಿತವನ್ನು ಹೇರ ಬಯಸುವುದಿಲ್ಲವೆಂದು ಸಾರಿತ್ತು. ಅಷ್ಟು ಮಾತ್ರವಲ್ಲ, ಹಿಂದಿನ ಝಾರ್ ಪ್ರಭುತ್ವ ಚೀನಾದಲ್ಲಿ ಆಕ್ರಮಿಸಿದ್ದ ಪ್ರದೇಶಗಳನ್ನು ಚೀನಾದ ಜನತೆಗೇ ಬಿಟ್ಟುಕೊಡುವುದಾಗಿ ಸಾರಿತ್ತು. ಇದು ನಾಲ್ಕಾರು ದೇಶಗಳ ಆಕ್ರಮಣದಲ್ಲಿ ನಲುಗುತ್ತಿದ್ದ, ದಿನದಿನವೂ ಜಪಾನಿನ ಆಕ್ರಮಣಕಾರೀ ಕುತಂತ್ರಗಳ ವಿರುದ್ಧ ಹೋರಾಡುತ್ತಿದ್ದ ಚೀನಾದ ಜನತೆಗೆ ಹೊಚ್ಚ ಹೊಸತಾಗಿ ಕಂಡಿತು. ಅಲ್ಲಿಯ ಬುದ್ಧಿಜೀವಿಗಳನೇಕರು ರಷ್ಯನ್ ಕ್ರಾಂತಿಯತ್ತ ಆಕರ್ಷಿತರಾದರು. ಚೀನಾದ ಯುವಜನರನ್ನು ಎಚ್ಚರಿಸುತ್ತಿದ್ದ 'ನವ ಯುವಜನತೆ' ಯ ಸಂಪಾದಕ ಮಂಡಳಿ, ಅದರ ಪ್ರಮುಖ ಲೇಖಕರು ರಷ್ಯನ್ ಕ್ರಾಂತಿಯ ಸೆಳಪಿಗೆ ಸಿಕ್ಕಿಕೊಂಡಿದ್ದರಲ್ಲಿ ಆಶ್ಚರ್ಯವೇನಿದೆ! 'ನವ ಯುವಜನತೆ'ಯಲ್ಲಿ 1918ರಲ್ಲಿಯೇ ರಷ್ಯನ್ ಕ್ರಾಂತಿಯ ಬಗ್ಗೆ ಮೊದಲ ಲೇಖನ ಪ್ರಕಟವಾಯಿತು. ಮಾವೋರನ್ನೂ ಸೇರಿದಂತೆ ಚೀನದ ಯುವಜನರನ್ನು ಸೆಳೆಯಿತು.

ಇಂತಹ ಸಂದರ್ಭದಲ್ಲಿ ಮಾವೋರವರ ಅರಿವಿನ ಹಂಬಲ 'ನವ ಯುವಜನತೆ' ಸಂಪಾದಕರು, ಲೇಖಕರು ವಾಸವಾಗಿದ್ದ ಬೀಜಿಂಗ್, ಶಾಂಘೈ ನಗರಗಳತ್ತ ಕರೆದೊಯ್ದಿತು. ಅಧ್ಯಯನಕ್ಕೆಂದು ವಿದೇಶಗಳಿಗೆ ಹೊರಟಿದ್ದ ತಮ್ಮ ಕೆಲವು ಗೆಳೆಯರ ಜೊತೆಯಲ್ಲಿ ಮಾವೋ ಬೀಜಿಂಗ್ ತಲುಪಿದರು.

ಬೀಜಿಂಗ್ ವಿ.ವಿ.ಯ ಗ್ರಂಥಾಲಯದಲ್ಲಿ ಮಾವೋ

ಬೀಜಿಂಗ್ ತಲುಪಿದ ಮಾವೋರವರಿಗೆ ಅಲ್ಲಿ ಜೀವನಕ್ಕೇನು ಮಾಡುವುದು ಎಂಬ ಪ್ರಶ್ನೆ ಎದುರಾಯಿತು. ಹಿಂದೆ ಹುನಾನ್ ಶಾಲೆಯಲ್ಲಿ ಅವರಿಗೆ ಶಿಕ್ಷಕರಾಗಿದ್ದ ಯಾಂಗ್ ಚಾಂಗ್‌ಜಿ, ಮಹಿಳೆಯರ ಸಮಾನತೆಯ ಬಗ್ಗೆ ಅರಿವನ್ನು ಮೂಡಿಸಿದ್ದವರು, ಆಗ ಬೀಜಿಂಗ್ ವಿಶ್ವ ವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಒಂದು ಕೆಲಸ ಕೊಡಿಸಬೇಕೆಂದು ಮಾವೊರವರಿಗೆ ವಿ.ವಿ.ಯ ಗ್ರಂಥಾಲಯದಲ್ಲಿ ಸಹಾಯಕನ ಕೆಲಸ ದೊರಕಿತು. ಈಗ ಮತ್ತೊಂದು ಬಾರಿ ಗ್ರಂಥಾಲಯವೆಂಬ ಮುಕ್ತ ವಿಶ್ವ ವಿದ್ಯಾಲಯದ ಸ್ವ-ಶಿಕ್ಷಣದ ವಿದ್ಯಾರ್ಥಿಯಾದರು. ಇನ್ನೂ ಉನ್ನತ ಮಟ್ಟದ ಅರಿವನ್ನು ಅರಸುತ್ತಾ.

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH